ಸೋಮವಾರ, ನವೆಂಬರ್ 18, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 319 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಶೈಕ್ಷಣಿಕ ಪ್ರವಾಸವನ್ನು ಸುರಕ್ಷಿತವಾಗಿ ಆಯೋಜಿಸುವುದು ಹೇಗೆ?

ಆಳ-ಅಗಲ
'ಕಲ್ಯಾಣ' ವೈಭೋಗ

ಪಿಡಿಒ ಪರೀಕ್ಷೆ: ಕೆಪಿಎಸ್‌ಸಿ ವಿರುದ್ಧ ಅಭ್ಯರ್ಥಿಗಳ ಆಕ್ರೋಶ 5

ಕನಕದಾಸ ಜಯಂತಿಯ ಶುಭಾಶಯಗಳು

ಆದಾಯಕ್ಕಿಂತ ಹೆಚ್ಚು ಸ್ವತ್ತು ಹೊಂದಿದ ಆರೋಪ
ಸಚಿವ ಜಮೀರ್‌ಗೆ 'ಲೋಕಾ' ಸಮನ್ಸ್ 7

ವೆಂಟಿಲೇಟರ್ ನೂರಾರು ಕೋಟಿ ಅಕ್ರಮ

ಬೆಂಗಳೂರು: ಕೋವಿಡ್ ಅವಧಿಯಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು 1,137 ವೆಂಟಿಲೇಟರ್‌ಗಳನ್ನು ಖರೀದಿಸಿದೆ. ಇದರಲ್ಲಿ ₹16 ಕೋಟಿಯಷ್ಟು ಅಕ್ರಮ ನಡೆದಿದ್ದು, ಇನ್ನೂ ₹106 ಕೋಟಿಯಷ್ಟು ಶಂಕಾಸ್ಪದ ಅಕ್ರಮ ವಹಿವಾಟು ನಡೆದಿದೆ. ಈ ಬಗ್ಗೆ ಉನ್ನತ ತನಿಖೆ ನಡೆಸಿ, ಸಂಬಂಧಿತರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹ ಆಯೋಗವು ಶಿಫಾರಸು ಮಾಡಿದೆ. 5

ಮಹಾರಾಷ್ಟ್ರ: ಕನ್ನಡ ಅಸ್ಮಿತೆ ಗಟ್ಟಿ

ಬೆಳಗಾವಿ: ಕರ್ನಾಟಕ- ಮಹಾರಾಷ್ಟ್ರ ಗಡಿ ವಿಷಯವು ಈ ಸಲದ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಸದ್ದೇ ಮಾಡಲಿಲ್ಲ. ಗಡಿ ವಿವಾದದ ಬಗ್ಗೆ ಯಾವ ಪಕ್ಷವೂ ಪ್ರಸ್ತಾಪಿಸಿಲ್ಲ. 7

ಮಣಿಪುರ: ಶಾಸಕರ ಮನೆಗಳಿಗೆ ಬೆಂಕಿ • ಮಹಿಳೆ, ಮಗು ಶವ ಪತ್ತೆ

ತೀವ್ರ ಹಿಂಸೆ, 5 ಜಿಲ್ಲೆ ಪ್ರಕ್ಷುಬ್ಧ

ಪ್ರಜಾವಾಣಿ ವಾರ್ತೆ/ಪಿಟಿಐ/ ರಾಯಿಟರ್ಸ್

ಇಂಫಾಲ್: ಮಣಿಪುರದಲ್ಲಿ ಹಿಂಸಾಚಾರ ತೀವ್ರಗೊಂಡಿದೆ. ಐದು ಜಿಲ್ಲೆಗಳಲ್ಲಿ ಉದ್ವಿಗ್ನ ಸ್ಥಿತಿ ಸೃಷ್ಟಿಯಾಗಿದೆ.

ಕುಪಿತಗೊಂಡ ಜನರ ಗುಂಪು ಬಿಜೆಪಿಯ ಮೂವರು ಶಾಸಕರ ಮನೆಗಳಿಗೆ ಭಾನುವಾರ ಬೆಂಕಿ ಹಚ್ಚಿದೆ. ಅದರಲ್ಲಿ ಒಬ್ಬರು ಸಚಿವರ ಮನೆಯೂ ಸೇರಿದೆ. ಕಾಂಗ್ರೆಸ್‌ನ ಶಾಸಕರೊಬ್ಬರ ಮನೆಗೂ ಬೆಂಕಿ ಹಚ್ಚಲಾಗಿದೆ. ಈ ವೇಳೆ ಶಾಸಕರ ಮನೆಯಲ್ಲಿ ಯಾರೂ ಇರಲಿಲ್ಲ.

ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರ ಪೂರ್ವಜರ ಮನೆಗೆ ಪ್ರತಿಭಟನಕಾರರ ಗುಂಪು ನುಗ್ಗಲು ಯತ್ನಿಸಿದರೂ ಭದ್ರತಾ ಪಡೆಗಳು ಈ ಪ್ರಯತ್ನವನ್ನು ವಿಫಲಗೊಳಿಸಿವೆ.

ಜಿರೀಬಾಮ್ ಜಿಲ್ಲೆಯಲ್ಲಿ ಬಂಡುಕೋರರು ಮೂವರು ಮಹಿಳೆಯರು ಮತ್ತು ಶಿಶುಗಳ ಹತ್ಯೆ ಮಾಡಿದ್ದರಿಂದ ಆಕ್ರೋಶಗೊಂಡ ಜನರು ಶನಿವಾರ ರಾತ್ರಿ ಹಿಂಸಾತ್ಮಕ ಪ್ರತಿಭಟನೆ ನಡೆಸಿದ್ದರು.

7ನೇ ಪುಟ ನೋಡಿ

ಮಣಿಪುರದ ಜಿರೀಬಾಮ್ ಜಿಲ್ಲೆಯಲ್ಲಿ ಹಿಂಸಾಚಾರ ತೀವ್ರಗೊಂಡಿದ್ದು, ಶನಿವಾರ ರಾತ್ರಿ ರಸ್ತೆಗಳಲ್ಲಿ ಕಂಡ ದೃಶ್ಯವಿದು —ಪಿಟಿಐ ಚಿತ್ರ

ಉನ್ನತಮಟ್ಟದ ಸಭೆ ನಡೆಸಿದ ಶಾ

ನವದೆಹಲಿ: ಮಹಾರಾಷ್ಟ್ರದ ಚುನಾವಣಾ ಪ್ರಚಾರ ಸಭೆ ರದ್ದುಗೊಳಿಸಿ ಭಾನುವಾರ ಬೆಳಿಗ್ಗೆ ರಾಜಧಾನಿಗೆ ಮರಳಿದ ಗೃಹ ಸಚಿವ ಅಮಿತ್ ಶಾ, ಹಿಂಸಾಚಾರ ಪೀಡಿತ ರಾಜ್ಯದ ಪರಿಸ್ಥಿತಿ, ಭದ್ರತೆ ಕುರಿತು ಸಭೆ ನಡೆಸಿದರು.

ಹಿರಿಯ ಅಧಿಕಾರಿಗಳಿಂದ ವಸ್ತುಸ್ಥಿತಿಯ ವಿವರವನ್ನು ಪಡೆದ ಗೃಹಸಚಿವರು, ಈಶಾನ್ಯ ರಾಜ್ಯದಲ್ಲಿ ಶಾಂತಿಯುತವಾದ ವಾತಾವರಣವನ್ನು ಸ್ಥಾಪಿಸಲು ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ. ಮಣಿಪುರದಲ್ಲಿ ಕಾನೂನು ಪರಿಸ್ಥಿತಿ ಅಧ್ಯಯನಕ್ಕಾಗಿ ಕೇಂದ್ರದ ಭದ್ರತಾ ಅಧಿಕಾರಿಗಳ ತಂಡವು ಶೀಘ್ರದಲ್ಲಿಯೇ ಭೇಟಿ ನೀಡುವ ಸಂಭವವಿದೆ ಎಂದು ಮೂಲಗಳು ತಿಳಿಸಿವೆ.

ಬೆಂಬಲ ವಾಪಸ್ ಪಡೆದ ಎನ್‌ಪಿಪಿ

ಶಿಲ್ಲಾಂಗ್/ಇಂಫಾಲ್: ಹಿಂಸಾಚಾರ ತೀವ್ರಗೊಂಡ ಹಿಂದೆಯೇ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ನ್ಯಾಷನಲ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ) ಹಿಂಪಡೆದಿದೆ.

'ಬಿಕ್ಕಟ್ಟು ಬಗೆಹರಿಸಲು ಎನ್. ಬಿರೇನ್ ಸಿಂಗ್ ನೇತೃತ್ವದ ಸರ್ಕಾರ ವಿಫಲವಾಗಿದೆ. ಹಿಂಸೆಯಿಂದ ರಾಜ್ಯ ತೀವ್ರವಾಗಿ ನಲುಗುತ್ತಿದೆ' ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಎನ್‌ಪಿಪಿ ಪತ್ರ ಬರೆದಿದೆ.

ತಕ್ಷಣದಿಂದ ಜಾರಿಗೆ ಬರುವಂತೆ ಬಿಜೆಪಿ ಸರ್ಕಾರಕ್ಕೆ ನೀಡಲಾಗಿದ್ದ ಬೆಂಬಲವನ್ನು ವಾಪಸು ಪಡೆಯಲಾಗಿದೆ ಎಂದು ಪತ್ರದಲ್ಲಿ ತಿಳಿಸಿದೆ. 60 ಸದಸ್ಯ ಬಲದ ಮಣಿಪುರ ವಿಧಾನಸಭೆಯಲ್ಲಿ ಎನ್‌ಪಿಪಿ 7 ಶಾಸಕರನ್ನು ಹೊಂದಿದೆ. ಬಿಜೆಪಿ 32 ಶಾಸಕರನ್ನು ಹೊಂದಿದೆ. ಹಾಗಾಗಿ, ಸರ್ಕಾರಕ್ಕೆ ಏನೂ ಆಗುವುದಿಲ್ಲ.

> ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಣಿಪುರದಲ್ಲಿ ಸಹಜ ಸ್ಥಿತಿ ಮೂಡಿಸಲು ಕ್ರಮ ಕೈಗೊಳ್ಳಬೇಕು ಎಂಬುದು ಪ್ರತಿಯೊಬ್ಬ ಭಾರತೀಯನ ಆಶಯವಾಗಿದೆ
> **ರಾಹುಲ್ ಗಾಂಧಿ,** ಲೋಕಸಭೆ ವಿರೋಧಪಕ್ಷದ ನಾಯಕ

> ಮಣಿಪುರದಲ್ಲಿ ಹಿಂಸಾಚಾರ ನಿತ್ಯದ ಭಾಗವಾಗಿದೆ. ಕೋಪೋದ್ರಿಕ್ತ ಗುಂಪುಗಳು ರಸ್ತೆಗಳನ್ನು ಆವರಿಸಿವೆ. ಆಡಳಿತ ಪಕ್ಷದ ಶಾಸಕರೂ ಈಗ ಅಲ್ಲಿ ಸುರಕ್ಷಿತವಾಗಿಲ್ಲ
> **ಕೆ.ಸಿ.ವೇಣುಗೋಪಾಲ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> ಮಣಿಪುರದಲ್ಲಿ ಬುಡಕಟ್ಟು ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಗಮನಿಸಲು ಬಿಜೆಪಿ ಹಿರಿಯ ನಾಯಕರಿಗೆ 'ಸಮಯವಿಲ್ಲ'. ಆದರೆ, ಜಾರ್ಖಂಡ್‌ನಲ್ಲಿ ಅಲೆದಾಡುತ್ತಿದ್ದಾರೆ.
> **ಕಲ್ಪನಾ ಸೋರೇನ್,** ಜೆಎಂಎಂ ಪಕ್ಷದ ನಾಯಕಿ

ಬೆಳಗಾವಿ ಅಧಿವೇಶನ ಡಿ.9ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಮಂಡಲದ ಚಳಿಗಾಲದ ಅಧಿವೇಶನ ಡಿ. 9ರಿಂದ 20ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಅಧಿವೇಶನ ಕರೆಯುವ ಸಂಬಂಧ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರಿಗೆ ಕಡತ ರವಾನಿಸಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಸುವರ್ಣ ವಿಧಾನಸೌಧಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಮತ್ತು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಅಧಿಕಾರಿಗಳ ಸಭೆ ನಡೆಸಿದ್ದರು. ಅಲ್ಲದೆ, ಅಧಿವೇಶನ ನಡೆಸಲು ಅಗತ್ಯವಾದ ಸಿದ್ಧತೆಗಳನ್ನು ಮಾಡುವಂತೆ ಸೂಚನೆ ನೀಡಿದ್ದರು.

1924ರ ಡಿ.26 ಮತ್ತು 27ರಂದು ಬೆಳಗಾವಿಯಲ್ಲಿ ನಡೆದಿದ್ದ 39ನೇ ಕಾಂಗ್ರೆಸ್ ಅಧಿವೇಶನ ಉದ್ದೇಶಿಸಿ ಮಹಾತ್ಮ ಗಾಂಧೀಜಿ ಭಾಷಣ ಮಾಡಿದ್ದರು. ಈ ಕಾರ್ಯಕ್ರಮ ನಡೆದು 100 ವರ್ಷ ಪೂರೈಸಿರುವ ಕಾರಣ ಇದೇ ಡಿ. 26 ಮತ್ತು 27ರಂದು ಬೆಳಗಾವಿಯಲ್ಲೇ ಕಾಂಗ್ರೆಸ್ ಅಧಿವೇಶನ ನಡೆಸಲು ಕೂಡಾ ಸರ್ಕಾರ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ನಬಾರ್ಡ್ ಸಾಲ ಕಡಿತ ಕೇಂದ್ರಕ್ಕೆ ಸಿ.ಎಂ ಪತ್ರ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ನಬಾರ್ಡ್‌ನಿಂದ ರೈತರಿಗೆ ಕಳೆದ ವರ್ಷ ₹5,600 ಕೋಟಿ ಸಾಲ ನೀಡಲಾಗಿತ್ತು. ಈ ಬಾರಿ ₹2,340 ಕೋಟಿ ನೀಡಿ ಕೇಂದ್ರ ಸರ್ಕಾರ ರೈತರಿಗೆ ದ್ರೋಹ ಬಗೆದಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ನವನಗರದ ತೋಟಗಾರಿಕೆ ವಿಶ್ವವಿದ್ಯಾಲಯ ಪಕ್ಕದ ಮೈದಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ 'ಸಹಕಾರ ರತ್ನ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

'ರೈತರಿಗೆ ಅನ್ಯಾಯ ಮಾಡದಂತೆ ಪ್ರಧಾನಿ ನರೇಂದ್ರ ಮೋದಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದೇನೆ. ಕೇಂದ್ರಕ್ಕೆ ಪಕ್ಷಾತೀತವಾಗಿ ಎಲ್ಲರೂ ಪತ್ರ ಬರೆದು ರಾಜ್ಯದ ಪಾಲು ಕೇಳಬೇಕು' ಎಂದರು.

'ಏಕಾಏಕಿ ಶೇ 58ರಷ್ಟು ಪ್ರಮಾಣ ಕಡಿತಗೊಳಿಸಲಾಗಿದೆ. ಬಾಯಿಬಿಟ್ಟರೆ ಬಿಜೆಪಿಯವರು ರೈತರ ಪರ ಎನ್ನುತ್ತಾರೆ. ಇದರಿಂದ ರೈತರಿಗೆ ಅನ್ಯಾಯ ಆಗುವುದಿಲ್ಲವೇ' ಎಂದು ಪ್ರಶ್ನಿಸಿದರು.

7ನೇ ಪುಟ ನೋಡಿ

> 11 ಲಕ್ಷ ಬಿಪಿಎಲ್ ಪಡಿತರ ಚೀಟಿಗಳನ್ನು ಎಪಿಎಲ್ ಕಾರ್ಡ್‌ಗಳನ್ನಾಗಿ ಮಾಡಲಾಗುತ್ತಿದೆ. ಅಂದರೆ 11 ಲಕ್ಷ ಕುಟುಂಬಗಳ ಅನ್ನವನ್ನು ಸರ್ಕಾರ ಕಿತ್ತುಕೊಳ್ಳುತ್ತಿದೆ
> **ಎಚ್.ಡಿ. ಕುಮಾರಸ್ವಾಮಿ,** ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ

ಹೈಪರ್‌ಸಾನಿಕ್ ಕ್ಷಿಪಣಿ – ಕೆಲವೇ ದೇಶಗಳ ಪಟ್ಟಿಗೆ ಭಾರತ

ಕ್ಷಿಪಣಿ ಪ್ರಯೋಗ ಯಶಸ್ವಿ

ನವದೆಹಲಿ (ಪಿಟಿಐ): ಒಡಿಶಾದ ಕರಾವಳಿಯ ಅಬ್ದುಲ್ ಕಲಾಂ ದ್ವೀಪದಿಂದ ದೂರಗಾಮಿ ಹೈಪರ್‌ಸಾನಿಕ್ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಭಾರತ ಯಶಸ್ವಿಯಾಗಿ ಶನಿವಾರ ನಡೆಸಿದೆ. ಇದರಿಂದ ದೇಶದ ರಕ್ಷಣಾ ಸಾಮರ್ಥ್ಯ ಮತ್ತಷ್ಟು ಬಲಗೊಂಡಿದೆ ಮತ್ತು ಇಂಥ ಕ್ಷಿಪಣಿ ವ್ಯವಸ್ಥೆ ಇರುವ ಕೆಲವೇ ದೇಶಗಳ ಪಟ್ಟಿಗೆ ಭಾರತವೂ ಸೇರ್ಪಡೆಯಾಗಿದೆ.

ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಕ್ಷಿಪಣಿಯ ಪರೀಕ್ಷೆಯನ್ನು, 'ಅದ್ಭುತ ಸಾಧನೆ' ಮತ್ತು 'ಐತಿಹಾಸಿಕ ಗಳಿಗೆ' ಎಂದು ಬಣ್ಣಿಸಿದ್ದಾರೆ.

'ಹೈಪರ್‌ಸಾನಿಕ್ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗದ ಯಶಸ್ಸಿನೊಂದಿಗೆ ಭಾರತವು ಮಹತ್ವದ ಮೈಲುಗಲ್ಲು ತಲುಪಿದೆ. ಗಮನಾರ್ಹ ಮತ್ತು ಸುಧಾರಿತ ಮಿಲಿಟರಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಸಾಮರ್ಥ್ಯವನ್ನು ಹೊಂದಿರುವ ಕೆಲವೇ ಕೆಲವು ರಾಷ್ಟ್ರಗಳ ಗುಂಪಿನಲ್ಲಿ ಭಾರತವೂ ಗುರುತಿಸಿಕೊಂಡಿದೆ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಕ್ಷಿಪಣಿಯನ್ನು ಅಭಿವೃದ್ಧಿಪಡಿಸಿದೆ.

10ನೇ ಪುಟ ನೋಡಿ

ಹೈಪರ್‌ಸಾನಿಕ್ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಯಾಗಿ ಶನಿವಾರ ನಡೆಸಲಾಯಿತು —ಪಿಟಿಐ ಚಿತ್ರ

ಅಂಕಿ ಅಂಶಗಳು

1,220 ಕಿ.ಮೀ
ಒಂದು ತಾಸಿನಲ್ಲಿ ಸಾಗುವ ವೇಗ

1,500 ಕಿ.ಮೀ
ಸಾಗುವ ಗರಿಷ್ಠ ದೂರ

ರೆಸಾರ್ಟ್ ಈಜುಕೊಳದಲ್ಲಿ ಮೂವರು ಯುವತಿಯರ ಸಾವು

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ಮೈಸೂರಿನಿಂದ ಬಂದಿದ್ದ ಮೂವರು ಎಂಜಿನಿಯರಿಂಗ್ ಪದವಿ ವಿದ್ಯಾರ್ಥಿನಿಯರು ನಗರ ಹೊರವಲಯದ ಸೋಮೇಶ್ವರದ ಪೆರಿಬೈಲ್‌ನ ಬೆಟ್ಟಪ್ಪಾಡಿ ಕ್ರಾಸ್‌ನ ವಾಸ್ಕೊ ರೆಸಾರ್ಟ್‌ನ ಈಜುಕೊಳದಲ್ಲಿ ಮುಳುಗಿ ಭಾನುವಾರ ಬೆಳಿಗ್ಗೆ ಸಾವಿಗೀಡಾಗಿದ್ದಾರೆ.

ಜಿಎಸ್‌ಎಸ್‌ಎಸ್ ಮಹಿಳಾ ಎಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಾನಿಕ್ಸ್ ವಿಭಾಗದ 5ನೇ ಸೆಮಿಸ್ಟರ್ ವಿದ್ಯಾರ್ಥಿನಿಯರಾದ, ವಿಜಯನಗರ 2ನೇ ಹಂತದ ನವೀನ್ ಕುಮಾರ್ ಎಸ್. ಅವರ ಪುತ್ರಿ ಕೀರ್ತನಾ ಎನ್. (21), ಕುರುಬರಹಳ್ಳಿಯ ಮಲ್ಲೇಶ್ ಅವರ ಪುತ್ರಿ ನಿಶಿತಾ ಎಂ.ಡಿ (21) ಮತ್ತು ರಾಮಾನುಜ ರಸ್ತೆ 11ನೇ ಕ್ರಾಸ್‌ನ ಎಂ.ಎನ್. ಶ್ರೀನಿವಾಸ ರಾವ್ ಅವರ ಪುತ್ರಿ ಪಾರ್ವತಿ ಎಸ್. ಮೃತರಾದವರು.

ರೆಸಾರ್ಟ್ ಮಾಲೀಕ ಮನೋಹರ ವಿ. ಪುತ್ರನ್ ಮತ್ತು ಒಬ್ಬ ಸಿಬ್ಬಂದಿಯನ್ನು ವಶಕ್ಕೆ ಪಡೆಯಲಾಗಿದೆ.

ಶನಿವಾರ ಇಲ್ಲಿ ಕೊಠಡಿ ಬಾಡಿಗೆಗೆ ಪಡೆದುಕೊಂಡ ಯುವತಿಯರು ಭಾನುವಾರ ಬೆಳಿಗ್ಗೆ 10 ಗಂಟೆ ವೇಳೆಗೆ ಈಜುಕೊಳಕ್ಕೆ ಇಳಿದಿದ್ದಾರೆ. ವಿಡಿಯೊ ಮಾಡುವುದಕ್ಕಾಗಿ ಮೊಬೈಲ್ ಫೋನ್ ಕ್ಯಾಮೆರಾ ಆನ್ ಮಾಡಿಟ್ಟುಕೊಂಡಿದ್ದರು. ಇವರ ಪೈಕಿ ಒಬ್ಬರು, ಈಜುಕೊಳದ ಆಳವಾದ ಭಾಗದತ್ತ ತೆರಳಿ ಮುಳುಗಿದ್ದಾರೆ. ಅವರನ್ನು ಉಳಿಸಲು ತೆರಳಿದ್ದ ಇನ್ನಿಬ್ಬರು ಕೂಡ ಮುಳುಗಿದ್ದಾರೆ. ಈಜು ಬಾರದೇ ಇದ್ದ ಕಾರಣ ಸಾವಿಗೀಡಾಗಿರುವ ಸಾಧ್ಯತೆ ಇದೆ ಎಂದು ಮಂಗಳೂರು ನಗರ ಪೊಲೀಸ್ ಆಯುಕ್ತ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

ಪಾರ್ವತಿ



ನಿಶಿತಾ

ಕೀರ್ತನಾ

5ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಒಳಪುಟಗಳಲ್ಲಿ

'ಇಲ್ಲಿ ಏಕೈಕ ವ್ಯಕ್ತಿಯಷ್ಟೆ ಸುರಕ್ಷಿತ' 7

ವಕ್ಫ್ ವಿವಾದಿತ ಜಾಗದಲ್ಲಿ ಹೈ ಡ್ರಾಮಾ 5

ಎಎಪಿಗೆ ಸಚಿವ ಕೈಲಾಶ್ ರಾಜೀನಾಮೆ 11

ಕಾರ್ಯಕ್ರಮದಲ್ಲಿ ನ್ಯಾ. ಕೃಷ್ಣ ಎಸ್ ದೀಕ್ಷಿತ್ ಅವರನ್ನು ಗೌರವಿಸಲಾಯಿತು. ಡಿ.ಎಂ. ಹೆಗಡೆ, ಸೌಂದರ್ಯ ಶಿಕ್ಷಣ ಟ್ರಸ್ಟ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೀರ್ತನ್ ಕುಮಾರ್ ಮಂಜಪ್ಪ, ಸೌಂದರ್ಯ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸೌಂದರ್ಯ ಮಂಜಪ್ಪ, ಪ್ರಾಂಶುಪಾಲರಾದ ರಾಜಶ್ರೀ ಕೆ. ಉಪಸ್ಥಿತರಿದ್ದರು

‘ಭಗವದ್ಗೀತೆ ಸಾರ ಪಸರಿಸಿದ ಡಿವಿಜಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾಭಾರತ ಯುದ್ಧದ ವೇಳೆ ಕುರುಕ್ಷೇತ್ರದಲ್ಲಿ ಶ್ರೀಕೃಷ್ಣನಿಂದ ಉಪದೇಶವಾದ ಭಗವದ್ಗೀತೆಯ ಸಾರವನ್ನು ದುಃಖ ಮತ್ತು ವ್ಯರ್ಥ ಎಂಬ ಎರಡೇ ಪದಗಳಲ್ಲಿ ಹೇಳಿದ ಮಹಾಜ್ಞಾನಿ ಡಿವಿಜಿ’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಬಣ್ಣಿಸಿದರು.

ಸೌಂದರ್ಯ ಕಾನೂನು ಕಾಲೇಜು ಮತ್ತು ವಕೀಲರ ವಾಹಿನಿ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 69ನೇ ಕರ್ನಾಟಕ ರಾಜ್ಯೋತ್ಸವ ಮತ್ತು ಡಿವಿಜಿ (ಡಿ.ವಿ.ಗುಂಡಪ್ಪ) ಉಪನ್ಯಾಸ ಮಾಲಿಕೆ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

‘ಮಂಕುತಿಮ್ಮನ ಕಗ್ಗ’, ‘ಮರುಳ ಮುನಿಯನ ಕಗ್ಗ’ಗಳ ಅತ್ಯಂತ ಜಟಿಲ ವಿಷಯಗಳನ್ನು ಸರಳವಾಗಿ ಜನರಿಗೆ ಅರ್ಥ ಮಾಡಿಸಿದರು. ನಮ್ಮ ನಾಡು, ನುಡಿ ಹಾಗೂ ಜಲಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ಕಾರಣಕ್ಕೆ ಬರೋಡಾದ ದಿವಾನ ಹುದ್ದೆಯನ್ನು ತಿರಸ್ಕರಿಸಿದ್ದರು. ಬಡತನವನ್ನು ಅಪ್ಪಿಡಿ, ‘ಆನಂದಿಸಿದ್ದರು’ ಎಂದು ಹೇಳಿದರು.

ವಕೀಲ ಡಿ.ಎಂ. ಹೆಗಡೆ, ‘ನಾವು ನಮ್ಮ ಮಾತೃಭಾಷೆಯನ್ನು ಎಷ್ಟು ಪ್ರೀತಿಸಬೇಕಿತ್ತೋ, ಅಷ್ಟು ಪ್ರೀತಿಸುತ್ತಿಲ್ಲ. ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುವಲ್ಲಿ ವಿಫಲರಾಗುತ್ತಾ, ವಿದೇಶಿ ಸಂಸ್ಕೃತಿಗೆ ಮಾರುಹೋಗುತ್ತಿದ್ದೇವೆ. ಡಿವಿಜಿ ಅವರು ನಮ್ಮ ನಾಡು, ನುಡಿ ಹಾಗೂ ಸಂಸ್ಕೃತಿಗಾಗಿ ಜೀವ ತೇಯ್ದರು’ ಎಂದರು.

PUBLIC NOTICE

This notice is given on behalf of our **Firm, M/s Guru & Jana, Chartered Accountants, with its principal office located at 41, Patalamma Temple Street, near South End Circle, Basavanagudi, Bengaluru-560004, Karnataka.** We have branches in Hyderabad, Mysore, Pune and Udupi.

Recently, one **Mr. Harsha Vardhan KV, aged about 24 years, son of Venkatesh and resident of 61/6/21, Near Renukamba Temple, Dodda Bommasandra, Bengaluru 560097 who was an Article Trainee in our Firm during 20th June 2021 to 16th July 2022** has been incessantly posting unwarranted, unsolicited and disparaging posts about our Firm on social media. Such posts lack truth and are defamatory. In this regard, we have filed LPT with Basavanagudi Police Station on 09th November 2024 vide case reference number LPT-175/2024. Further we are given to understand that he is battling mental health issues and has undergone treatment for the same. Our efforts to contact his family members to sensitize them about his reckless online conduct have been in vain. General public is hereby made aware not to rely on such false information.

Place: Bengaluru
Date: 16-11-2024

Sd/- Prashanth K.L., Partner
Guru & Jana, Charted Accountants

ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಬೆಂಗಳೂರು ಜಲಮಂಡಳಿ ಸಭೆಯಲ್ಲಿ ನಿರ್ಧಾರ

ಮನೆಗಳಿಗೂ ‘ಸಂಸ್ಕರಿಸಿದ ಬೂದು ನೀರು’

• ಗಾಣಧಾಳು ಶ್ರೀಕಂಠ

ಬೆಂಗಳೂರು: ನಗರದಲ್ಲಿ ಹೊಸದಾಗಿ ನಿರ್ಮಾಣವಾಗುವಂತಹ ಬಡಾವಣೆಗಳು, ಚಿಕ್ಕ ಅಪಾರ್ಟ್‌ಮೆಂಟ್, ದೊಡ್ಡದಾದ ವೈಯಕ್ತಿಕ ಮನೆಗಳಲ್ಲೂ ‘ತ್ಯಾಜ್ಯ ನೀರು ಸಂಸ್ಕರಿಸಿ ಮತ್ತು ಮರುಬಳಕೆ’ ಮಾಡುವುದನ್ನು ಕಡ್ಡಾಯಗೊಳಿಸಲು ಬೆಂಗಳೂರು ಜಲಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಮುಂದಾಗಿದೆ.

2,400 ಚದರ ಅಡಿ ವಿಸ್ತೀರ್ಣ ಮತ್ತು ಅದಕ್ಕಿಂತ ದೊಡ್ಡದಾದ ವೈಯಕ್ತಿಕ ಮನೆಗಳು, ಸಣ್ಣ ಅಪಾರ್ಟ್‌ಮೆಂಟ್‌ಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮತ್ತು ಖಾಸಗಿಯವರು ನಿರ್ಮಿಸಿರುವ ಚಿಕ್ಕ ಬಡಾವಣೆಗಳಲ್ಲಿ ತ್ಯಾಜ್ಯ ನೀರನ್ನು ಸಂಸ್ಕರಿಸಿ, ಮರು ಬಳಕೆಯನ್ನು ಕಡ್ಡಾಯಗೊಳಿಸಲು ಇತ್ತೀಚೆಗೆ ನಡೆದ ಜಲ ಮಂಡಳಿ ಸಭೆಯಲ್ಲಿ ನಿರ್ಧರಿಸಲಾಗಿದೆ.

ಪ್ರಸ್ತುತ 120 ಮನೆಗಳಿರುವ ಅಪಾರ್ಟ್‌ಮೆಂಟ್‌ಗಳಿಗೆ ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಅಳವಡಿಕೆಯನ್ನು ಕಡ್ಡಾಯಗೊಳಿಸಲಾಗಿದೆ. ಅದರ ಮುಂದುವರಿದ ಭಾಗವಾಗಿ ಈ ನಿಯಮವನ್ನು ಜಾರಿಗೆ ತರಲು ಜಲಮಂಡಳಿ ಸಿದ್ಧತೆ ನಡೆಸಿದೆ.

‘ಈ ವಿಷಯಕ್ಕೆ ಸಂಬಂಧಿಸಿದಂತೆ ಜಲಮಂಡಳಿ ಅಧಿಕಾರಿಗಳು, ತಜ್ಞರೊಂದಿಗೆ ಮೂರ್ನಾಲ್ಕು ಸುತ್ತಿನ ಸಭೆಗಳನ್ನು ನಡೆಸಿ, ಈ ನಿರ್ಧಾರ ಕೈಗೊಳ್ಳಲಾಗಿದೆ. ಮಂಡಳಿಯ ಶಿಫಾರಸುಗಳನ್ನು ಒಳಗೊಂಡ ಪ್ರಸ್ತಾವವನ್ನು ಶೀಘ್ರದಲ್ಲೇ ರಾಜ್ಯ ಸರ್ಕಾರಕ್ಕೆ ಸಲ್ಲಿಸಿ, ನಿಯಮ ರೂಪಿಸಲು ಮನವಿ ಮಾಡಲಾಗುವುದು’ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಭವಿಷ್ಯದಲ್ಲಿ ಬೆಂಗಳೂರಿನಲ್ಲಿ ಎದುರಾಗಬಹುದಾದ ನೀರಿನ ಕೊರತೆಯ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ಹಾಗೂ ಜಲಸಂರಕ್ಷಣೆ ಮತ್ತು ಸುಸ್ಥಿರ ನೀರು ನಿರ್ವಹಣೆಯ ಉದ್ದೇಶದಿಂದ ತ್ಯಾಜ್ಯ ನೀರು(ಬೂದು ನೀರು) ಸಂಸ್ಕರಿಸಿ ಮರುಬಳಸುವುದನ್ನು ಹೊಸ ಮನೆಗಳಿಗೆ ಕಡ್ಡಾಯಗೊಳಿಸಲು ಮಂಡಳಿ ತೀರ್ಮಾನಿಸಿದೆ. ಸಿಂಗಪುರ ಸೇರಿದಂತೆ ಬೇರೆ ಬೇರೆ ರಾಷ್ಟ್ರಗಳಲ್ಲಿ ಈ ನೀತಿ ಜಾರಿಯಲ್ಲಿದೆ. ನಮ್ಮ ದೇಶದಲ್ಲಿ ಇದೇ ಮೊದಲ ಬಾರಿಗೆ ಇಂಥದ್ದೊಂದು ಪ್ರಯತ್ನಕ್ಕೆ ಮುಂದಾಗಿದ್ದೇವೆ’ ಎಂದು ಅವರು ತಿಳಿಸಿದರು.

‘ತ್ಯಾಜ್ಯ ನೀರನ್ನು ಸಂಸ್ಕರಿಸಿ ಮರುಬಳಕೆ ಮಾಡುವುದರಿಂದ, ಕಾವೇರಿ ನೀರಿನ ಬಳಕೆಯನ್ನು ಕಡಿತಗೊಳಿಸಬಹುದು. ಒಳಚರಂಡಿಯಲ್ಲಿ ಹರಿಯುವ ತ್ಯಾಜ್ಯ ನೀರಿನ ಪ್ರಮಾಣವನ್ನು ತಗ್ಗಿಸಬಹುದು’ ಎಂಬುದು ಅವರ ಅಭಿಪ್ರಾಯ.

ಮುಖ್ಯಾಂಶಗಳು
- ದೊಡ್ಡ ವಿಸ್ತೀರ್ಣದ ಮನೆಗಳಿಗೆ ಅಳವಡಿಕೆ
- ಒಳಚರಂಡಿ ಮೇಲಿನ ಒತ್ತಡ ತಪ್ಪಿಸಬಹುದು
- ಸುಸ್ಥಿರ ನೀರು ನಿರ್ವಹಣೆಗೆ ಸಹಕಾರಿ

ಮನೆಗಳಿಗೆ ತ್ಯಾಜ್ಯ ನೀರು ಸಂಸ್ಕರಣೆ ಕಡ್ಡಾಯಗೊಳಿಸುವುದರಿಂದ, ಒಳಚರಂಡಿಯ ಮೇಲಾಗುವ ಒತ್ತಡ ತಪ್ಪಿಸಬಹುದು

ರಾಮ್ ಪ್ರಸಾತ್ ಮನೋಹರ್
ಅಧ್ಯಕ್ಷ, ಬೆಂಗಳೂರು ಜಲಮಂಡಳಿ

ನೀರಿನ ಮರುಸಂಸ್ಕರಣೆಯ ಘಟಕ(ಸಾಂದರ್ಭಿಕ ಚಿತ್ರ)

ಬೂದು ನೀರು ಬಳಕೆ ಹೇಗೆ?

ಮನೆಯಲ್ಲಿ ಶೌಚಾಲಯದ ನೀರು ಮತ್ತು ನಿತ್ಯ ಮನೆಯಲ್ಲಿ ಬಳಸುವ ನೀರು (ಗ್ರೇ ವಾಟರ್ ಅಥವಾ ಬೂದು ನೀರು) ಪ್ರತ್ಯೇಕವಾಗಿ ಹರಿಯುವಂತೆ ಕೊಳವೆಗಳನ್ನು ಅಳವಡಿಸಬೇಕು. ಶೌಚಾಲಯದ ನೀರನ್ನು ಒಳಚರಂಡಿಗೆ ಸಂಪರ್ಕ ನೀಡಿ, ಬೂದು ನೀರನ್ನು ಯಂತ್ರದ ಮೂಲಕ ಶುದ್ಧೀಕರಿಸಿ ಸಂಗ್ರಹಿಸುವ ಟ್ಯಾಂಕ್ ವ್ಯವಸ್ಥೆ ಮಾಡಬೇಕು. ತ್ಯಾಜ್ಯ ನೀರು ಸಂಸ್ಕರಿಸುವ ಚಿಕ್ಕ ಯಂತ್ರಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ. ಈ ಸಂಸ್ಕರಿತ ನೀರನ್ನು ಶೌಚಾಲಯ, ಕೈ ತೋಟಗಳಿಗೆ, ವಾಹನಗಳ ಸ್ವಚ್ಛತೆಯಂತಹ ಕೆಲಸಗಳಿಗೆ ಬಳಸಬಹುದು. ಹೆಚ್ಚಾದ ನೀರನ್ನು ಇಂಗು ಗುಂಡಿ ಮೂಲಕ ಭೂಮಿಯೊಳಗೆ ಇಂಗಿಸಬಹುದು ಎಂದು ತಜ್ಞರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಸಂತಶ್ರೇಷ್ಠ ಕನಕದಾಸರ ಜಯಂತಿ: ಬೆಳಿಗ್ಗೆ 9.30ಕ್ಕೆ ಶಾಸಕರ ಭವನದಲ್ಲಿರುವ ಕನಕದಾಸರ ಪ್ರತಿಮೆಗೆ ಮಾಲಾರ್ಪಣೆ: ಸಿದ್ದರಾಮಯ್ಯ, ಮುಖ್ಯಮಂತ್ರಿ, ಗಾಂಧಿನಗರದ ಕನಕದಾಸ ವೃತ್ತದಿಂದ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದವರೆಗೆ ಮೆರವಣಿಗೆ, ಸಂಜೆ 4ಕ್ಕೆ ಕನಕದಾಸರ ಕುರಿತು ನೃತ್ಯ ರೂಪಕ ಮತ್ತು ಕೀರ್ತನೆಗಳ ಗಾಯನ, ಸಂಜೆ 5.30ಕ್ಕೆ ಉದ್ಘಾಟನೆ, ಪ್ರಶಸ್ತಿ ಪ್ರದಾನ, ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಸಾನ್ನಿಧ್ಯ: ನಿರಂಜನಾನಂದಪುರಿ ಸ್ವಾಮೀಜಿ, ಸಿದ್ದರಾಮಾನಂದ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶೋಭಾ ಕರಂದ್ಲಾಜೆ, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ

‘ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ-2024’, ಎಸ್. ಪಡ್ತುರ ಅವರ ‘ಕ್ಷಣ ಹೊತ್ತು ಆಣಿಮುತ್ತು-ಭಾಗ 14’ ಪುಸ್ತಕ ಬಿಡುಗಡೆ: ಉದ್ಘಾಟನೆ: ಸಿದ್ದರಾಮಯ್ಯ, ಪ್ರಶಸ್ತಿ ಪ್ರದಾನ: ಬಸವರಾಜ ಬೊಮ್ಮಾಯಿ, ಪುಸ್ತಕ ಬಿಡುಗಡೆ: ವಿ. ಸೋಮಣ್ಣ, ಉಪಸ್ಥಿತಿ: ಗೊ.ರು. ಚನ್ನಬಸಪ್ಪ, ಮನು ಬಳಿಗಾರ್, ವಿಶ್ವೇಶ್ವರ ಭಟ್, ರವಿ ಹೆಗಡೆ, ಸಿ. ಸೋಮಶೇಖರ್, ಪ್ರಶಸ್ತಿ ಪುರಸ್ಕೃತರು: ಎಚ್.ಎಸ್. ಸಿದ್ಧಗಂಗಪ್ಪ, ಗುರುಲಿಂಗಪ್ಪ ಧಬಾಲೆ, ಚಿದಾನಂದ ಸ. ಸಿದ್ದಾಪ್ರಹ, ಸುಶೀಲಾ ಸೋಮಶೇಖರ್, ಎಂ.ಎಸ್. ಶೀಲಾ, ಎಂ.ವಿ. ತ್ಯಾಗರಾಜ್, ಬೆಂಗಳೂರಿನ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು, ಅಂದಯ್ಯ ಅರವಟಿಗಿಮಠ, ಕಾತ್ಯಾಯಿನಿ ಕುಂಚಿಬೆಟ್ಟು, ರಂಜನಿ ವಾಸುಕಿ, ವಡವಾಟ ಶಾರದಾ ಭರತ್, ಓಂಶಿವಪ್ರಕಾಶ್ ಎಚ್.ಎಲ್., ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ರಮಣಶ್ರೀ ಪ್ರತಿಷ್ಠಾನ, ಸ್ಥಳ: ಹೋಟೆಲ್ ರಮಣಶ್ರೀ, ರಿಚ್ಮಂಡ್, ನಂ. 16, ರಾಜಾರಾಮ್ ಮೋಹನ್ ರಾಯ್ ರಸ್ತೆ, ರಿಚ್ಮಂಡ್ ವೃತ್ತ, ಬೆಳಿಗ್ಗೆ 11.30

ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ‘ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ ಘಟಕ’ದ ಉದ್ಘಾಟನೆ: ನಾ. ಶ್ರೀಧರ್, ಅಧ್ಯಕ್ಷತೆ: ಯೋಗೇಶ್ ವರ್ಧಮಾನ ಕಳಸಾರು, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಲಾಸ್ಯ ರಂಜನಿ ಕಲಾಕ್ಷೇತ್ರ, ನೆಹರೂ ರಸ್ತೆ, ಕಾಚರಕನಹಳ್ಳಿ, ಮಧ್ಯಾಹ್ನ 1

ಹುಣ್ಣಿಮೆ ಹಾಡು, ಕಾಡುಮಲ್ಲೇಶ್ವರ ಕಡಲೆಕಾಯಿ ಪರಿಷೆ: ಸಂಜೆ 4.30ಕ್ಕೆ ಭ್ರಮರಾಂಭ ಸಮೇತ ಕಾಡುಮಲ್ಲಿಕಾರ್ಜುನ ಸ್ವಾಮಿಗೆ ‘ಕಡಲೆಕಾಯಿ ಅಭಿಷೇಕ’, ಸಂಜೆ 6ಕ್ಕೆ ಹುಣ್ಣಿಮೆ ಹಾಡು-204: ಸಾರಂಗಿ ವಾದನ: ಫಯಾಜ್‌ಖಾನ್, ಅತಿಥಿಗಳು: ಬಿ.ಕೆ. ಹರಿಪ್ರಸಾದ್, ಗಣೇಶ ಅಮೀನಗಡ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಭ್ರಮರಾಂಭ ಸಮೇತ ಕಾಡುಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ಸಂಪಿಗೆ ರಸ್ತೆ, ಮಲ್ಲೇಶ್ವರ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಾಲ್ಮೀಕಿ ನಾಯಕ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

‘ಉತ್ತಮ ವಿದ್ಯೆ ಪಡೆಯಿರಿ’

ವಾಲ್ಮೀಕಿ ಜಯಂತಿಯಲ್ಲಿ ಶಾಸಕ ಎಂ. ಕೃಷ್ಣಪ್ಪ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳ್ಳಿಗಳಲ್ಲಿದ್ದುಕೊಂಡು ದನ ಮೇಯಿಸಿಕೊಂಡು ಶಾಲೆಗೆ ಹೋದರೆ ಒಂದು ಹಂತದ ವಿದ್ಯೆ ಸಿಗಬಹುದು. ಆದರೆ, ಸ್ಪರ್ಧಾತ್ಮಕ ಜಗತ್ತಿನಲ್ಲಿ ಬೆಳೆಯಲು ಕಷ್ಟ. ಅದಕ್ಕಾಗಿ ನಗರದಲ್ಲಿ ಕಲಿಯಲು ಉತ್ತಮ ವಾತಾವರಣ ಇರುವಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿ ಎಂದು ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಸಲಹೆ ನೀಡಿದರು.

ವಿಜಯನಗರ ನಾಯಕ ಸಂಘ ಭಾನುವಾರ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿ, ಪ್ರತಿಭಾ ಪುರಸ್ಕಾರ, ವಧು–ವರರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ನಮ್ಮ ಮಕ್ಕಳಲ್ಲಿ ಬುದ್ಧಿವಂತಿಕೆ ಇದೆ. ಅದಕ್ಕೆ ಸರಿಯಾದ ಅವಕಾಶ ಸಿಗಬೇಕಿದ್ದರೆ ಸರಿಯಾದ ವಿದ್ಯಾಭ್ಯಾಸವೂ ಇರಬೇಕು’ ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಶಾಂತಲಾ ಕೆ.ಎನ್. ರಾಜಣ್ಣ ಅವರು ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ವಿಜಯನಗರ ನಾಯಕ ಸಂಘದ ಉಪಾಧ್ಯಕ್ಷ ಎಚ್. ಹನುಮಂತಪ್ಪ ಅಧ್ಯಕ್ಷತೆ ವಹಿಸಿದ್ದರು.

ಸಂಘದ ಮಹಾಪೋಷಕ ಕೆ.ಎಸ್. ಮೃತ್ಯುಂಜಯ, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಜಂಟಿ ನಿರ್ದೇಶಕ ಕೆ.ಆರ್. ರಾಜ್‌ಕುಮಾರ್, ಸಂಘದ ಪ್ರಧಾನ ಕಾರ್ಯದರ್ಶಿ ಕೆ. ರಂಗನಾಥಯ್ಯ ಭಾಗವಹಿಸಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to inform the general public that the original sale deeds and other title documents as listed below pertaining to the units bearing numbers 301, 302, 303, 306 and 308 situated at the third floor of Mota Chambers, No.9, Millers Road, Bengaluru, more fully described in Schedule hereunder which are owned by Powerica Limited have been lost / misplaced. A complaint has been registered on 04th November 2024 with the Bengaluru City Police department vide complaint No.1317108/2024. If any person finds the missing documents or has any information in respect of the aforesaid missing documents may please contact Powerica Limited, No.304, Mota Chambers, No.9, Millers Road, Bengaluru – 560 052 and phone No.080 – 22260672, within 15 (fifteen) days from the date of this notice.

The public is hereby notified that in the absence of any claims, leads or information being received by us within the aforesaid period of 15 (fifteen)days, we will proceed to transfer the aforesaid property in favour of a suitable buyer, without any further notice

1. Deed of Sale dated December 07, 1988, Document No. 2824, Book 1, Volume 2778, pages 08-13 in the office of the Sub Registrar, at Shivajinagar, Bengaluru pertaining to unit No. 301
2. Deed of Sale dated March 03, 1989, Document No. 4085, Book 1, Volume 2806, pages 17-24 in the office of the Sub Registrar, at Shivajinagar, Bengaluru pertaining to unit No. 302
3. Deed of Sale dated March 03, 1989, Document No. 4086, Book 1, Volume 2806, pages 25-32 in the office of the Sub Registrar, at Shivajinagar, Bengaluru pertaining to unit No. 303
4. Deed of Sale dated December 07, 1988, Document No. 2825, Book 1, Volume 2767, pages 209-214 in the office of the Sub Registrar, at Shivajinagar, Bengaluru pertaining to unit No. 306
5. Deed of Sale dated September 28, 1989, Document No. 2413, Book 1, Volume 2869, pages 65-72 in the office of the Sub Registrar, at Shivajinagar, Bengaluru pertaining to unit No. 308
6. Sale Deed dated March 29, 1994, registered as Document No. 4271 in Book 1 Volume 3556 at Pages 17 to 23 in the Office of the Sub-Registrar, Shivajinagar, Bengaluru pertaining to unit No. 301
7. Sale Deed dated March 29, 1994, registered as Document No. 4273 in Book 1 Volume 3432 at Pages 231 to 237 in the Office of the Sub-Registrar, Shivajinagar, Bengaluru pertaining to unit No. 302
8. Sale Deed dated March 29, 1994, registered as Document No. 4267 in Book 1 Volume 3556 at Pages 220 to 225 in the Office of the Sub-Registrar, Shivajinagar, Bengaluru pertaining to unit No. 303
9. Sale Deed dated March 29, 1994, registered as Document No. 4264 in Book 1 Volume 3560 at Pages 24 to 30 in the Office of the Sub-Registrar, Shivajinagar, Bengaluru pertaining to unit No. 306
10. Sale Deed dated March 29, 1994, registered as Document No. 4268 in Book 1 Volume 3432 at Pages 226 to 231 in the Office of the Sub-Registrar, Shivajinagar, Bangalore pertaining to unit No. 308
11. Sale Deed dated March 29, 1994, registered as Document No. 4277 in Book 1 Volume 3532 at Pages 226 to 229 in the Office of the Sub-Registrar, Shivajinagar, Bengaluru pertaining to the parking space in the basement attached to unit No. 308
12. Sale deed (duplicate copy) dated September 08, 2011, executed by Mondial India Private Limited in favour of Powerica Limited registered as Document No. SHV-1-01106-2011-12, Book 1, CD No. SHVD130, in the Office of the Sub-Registrar, Shivajinagar, Bengaluru
13. Power of Attorney dated March 17, 1994, executed by Sarita Bakshi in favour of Ramneek S Bakshi and registered as Document No. 1023, Book 4, Volume 299, Pages 164 to 170
14. Power of Attorney issued to Binitha Mohanty by Indexco International.

SCHEDULE

Unit bearing No.301 (bearing Municipal No.9/41) on the Third Floor known as "MOTA CHAMBERS" constructed on all that Property bearing Municipal No.9, Sampangi Ramaswamy Temple Street, Bangalore, having a super built-up area of 770 Square Feet along with corresponding 770/38730th undivided share in the land comprised in all that Property bearing Municipal No.9, Sampangi Ramaswamy Temple Street, Bangalore, equivalent to 379.87 square feet;

Unit bearing No.302 (bearing Municipal No.9/42) on the Third Floor of the Building known as "MOTA CHAMBERS" constructed on all that Property bearing Municipal No.9, Sampangi Ramaswamy Temple Street, Bangalore, having a super built-up area of 630 Square Feet along with corresponding 630/38730th undivided share in the land comprised in all that Property bearing Municipal No.9, Sampangi Ramaswamy Temple Street, Bangalore, equivalent to 310.80 square feet;

Unit bearing No.303 (bearing Municipal No.9/43) on the Third Floor of the Building known as "MOTA CHAMBERS" constructed on all that Property bearing Municipal No.9, Sampangi Ramaswamy Temple Street, Bangalore, having a super built up area of 680 Square Feet along with corresponding 680/38730th undivided share in the land comprised in all that Property bearing Municipal No.9, Sampangi Ramaswamy Temple Street, Bangalore, equivalent to 335.47 Square Feet;

Unit bearing No.306 (bearing Municipal No.9/46) on the Third Floor of the Building known as "MOTA CHAMBERS" constructed on all that Property bearing Municipal No.9, Sampangi Ramaswamy Temple Street, Bangalore, having a super built up area of 770 Square Feet along with corresponding 770/38730th undivided share in the land comprised in all that Property bearing Municipal No.9, Sampangi Ramaswamy Temple Street, Bangalore, equivalent to 379.87 Square Feet; and

Unit bearing No.308 (bearing Municipal No.9/48) on the Third Floor along with one covered area (with two car parking space) in the Basement of the Building known as "MOTA CHAMBERS" constructed on all that Property bearing Municipal No.9, Sampangi Ramaswamy Temple Street, Bangalore, having a super built up area of 770 square feet along with corresponding 770/38730th undivided share in the land comprised in all that Property bearing Municipal No.9, Sampangi Ramaswamy Temple Street, Bangalore, equivalent to 379.87 Square Feet.

Sd:-
For **Powerica Limited**
Bhola Tandon, President - Sales & Marketing

REAL ESTATE SELLING

Residential/ Commercial

Multiple Locations

TENANTED PROPERTIES FOR SALE (ROI Opportunity)
A-grade Independent Buildings with A-grade Tenants :
Koramangala : Rs. 55 Crore, Negotiable.
HRBR Layout : Rs. 65 Crore, Negotiable.
URGENTLY WANTED SITES
Commercial / Residential Plots : 40x60, 50x80, 60x90, 80x120, 150x100, 200x200 And above.
Locations : Sadashiv Nagar, RMV, Dollars Colony, Kumarapark, High Grounds, Cunningham Road, Jayamahal, MG Road, Lavelle Road, Richmond Town, HSR, Koramangala, Indiranagar, Jayanagar & nearby areas. Spot Settlement.
Contact : Mr. SEVENRAJ
98450 20007 / 98457 17777
sevenraj@gmail.com

BUSINESS

Business Offers

Finance

NRI'S INVESTMENT
And Finance Available On Low Interest Against Properties,Land& Building,Sites,Flats,Converted& Agriculture Lands
Call:7204995189

JOB OPPORTUNITIES

Engg/ Production Technical

REQUIRED ASSISTANT AC Technician &Experienced AC Technician for Swastik Airconditioner Location Jayanagar Contact: 7892831686

Factory

FACTORY WORKERS
Needed Male Age Below 30 Eligibility: 10th Pass or PUC Pass Location: Rajajinagar Perks: Good Salary, Training Provided Contact: 9108458798/ 9845579620

General

SUPERVISORS WITH 5 + Years experience & Computer Knowledge required for a Manufacturing firm in Chamarajpet. Contact: 080- 26603729. E-mail : admin@mahendraperfumery.com

ASSOCIATE OF BANK Requires TELECALLER, FIELD EXECUTIVE For Collection Process Salary 20K, Incentives. Contact: 6364581703

Marketing & Sales

RAJSHEKAR DEVELOPERS hiring Tele-Callers and Field SalesExecutive with good communication in Kannada and English (Read, Write and Speak)Should have experience in real estate field with deal closing skills. LocationRajarajeshwari nagar Bangalore. Call 8951920083

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

DH Classifieds ಪ್ರಜಾವಾಣಿ More value, more impact
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN *Conditions apply
www.dhclassifieds.com
BOOK NOW
For more details contact: 9901641752 9845114560

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜ ಅರಸ್ ಬಡಾವಣೆ,ಟಮಕ,
ಕೋಲಾರ–563 103
E-mail: bnuregistrar@karnataka.gov.in, web:www.bnu.karnataka.gov.in
No. BNU/ACA/Affin/1619/2024-25 Date: 14.11.2024

ಅಧಿಸೂಚನೆ

ವಿಷಯ: 2025–26ನೇ ಶೈಕ್ಷಣಿಕ ಸಾಲಿಗಾಗಿ ಆನ್–ಲೈನ್ ಮುಖಾಂತರ ಸಂಯೋಜನ ಅರ್ಜಿಗಳನ್ನು ಆಹ್ವಾನಿಸುವ ಕುರಿತು.
ಉಲ್ಲೇಖ: ಸರ್ಕಾರಿ ಆದೇಶ ಸಂ:ಇಡಿ 212 ಯುಎನ್ ಇ 2024, ಬೆಂಗಳೂರು, ದಿನಾಂಕ: 04.10.2024.

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು, 2024–25ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ, ಅಂದರೆ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ (ತಿದ್ದುಪಡಿ) 2015 ರಲ್ಲಿ ನಿಗದಿಪಡಿಸಿದಂತೆ ಬೆಂಗಳೂರು ನಗರ ಜಿಲ್ಲೆಯ ವಿಧಾನ ಸಭೆ ಕ್ಷೇತ್ರಗಳಾದ ಕೆ.ಆರ್.ಪುರ, ಸಿ.ವಿ ರಾಮನ್‌ನಗರ, ಪುಲೀಕೇಶಿನಗರ, ಸರ್ವಜ್ಞನಗರ, ಮಹಾದೇವಪುರ, ಬೆಂಗಳೂರು ಗ್ರಾಮಾಂತರ ದೊಡ್ಡಬಳ್ಳಾಪುರ, ದೇವನಹಳ್ಳಿ, ಮತ್ತು ಹೊಸಕೋಟೆ ಕ್ಷೇತ್ರಗಳು ಹಾಗೂ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳ ಕಾಲೇಜುಗಳಿಂದ ಮತ್ತು ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳಿಂದ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ಮತ್ತು 62ರ ಅಡಿಯಲ್ಲಿ ಸಂಯೋಜನ ನವೀಕರಣ ಮತ್ತು ಹೊಸ ಕಾಲೇಜುಗಳ ಸಂಯೋಜನೆಗಾಗಿ ಯು.ಯು.ಸಿ.ಎಂ.ಎಸ್ (UUCMS) ಮುಖಾಂತರ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದೆ. 2024–25ನೇ ಸಾಲಿಗೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಕಾಲೇಜುಗಳಿಗೆ ವಾರ್ಷಿಕ ಸಂಯೋಜನೆ, ಮುಂದುವರಿಕೆ ಸಂಯೋಜನೆ, ಶಾಶ್ವತ ಸಂಯೋಜನೆ, ಹೊಸ ಕೋರ್ಸುಗಳು, ಹಾಲಿ ಇರುವ ಕೋರ್ಸುಗಳಿಗೆ ಹೆಚ್ಚುವರಿ ಸ್ಥಾನಗಳ ಶಿಪಾರಸ್ಸು, ಕಾಲೇಜು ಹೆಸರು ಬದಲಾವಣೆ, ಕಾಲೇಜಿನ ವಿಳಾಸ, ಆಡಳಿತ ಮಂಡಳಿ ಬದಲಾವಣೆ, ಹೊಸ ಕಾಲೇಜು ಸ್ಥಾಪನೆ, ಕಾಲೇಜು ಮುಚ್ಚುವಿಕೆ (1)Opening New Colleges 2) Extension of existing Affiliation 3) Continuation of Affiliation 4) Permanent Affiliation 5) Change/ Addition of subject, Division of faculty, Increase of intake 6) Change of Name 7) Closure & withdrawal of a College 8) Local Inquiry Committee and 9) Transfer of Management) ಇತ್ಯಾದಿಗಳಿಗೆ UUCMS ಮುಖಾಂತರವೇ ಎಲ್ಲಾ ಸಂಯೋಜನಾ ಪ್ರಕ್ರಿಯೆ ಕೈಗೊಳ್ಳಲಾಗುವುದು. ಗಮನಿಸಬೇಕಾದ ಅಂಶಗಳು: 1. ಆನ್–ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭದ **ದಿನಾಂಕ: 25.10.2024** 2. ದಂಡ ಶುಲ್ಕವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 20.11.2024** 3. **ರೂ. 10,000/–** ಗಳ ದಂಡ ಶುಲ್ಕದೊಡನೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **22.11.2024** 4. ಭರ್ತಿ ಮಾಡಿದ ಆನ್–ಲೈನ್ ಅರ್ಜಿಯ ಆರು 6. ಮುದ್ರಿತ (Hard Copy) ಪ್ರತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ: **25.11.2024** 5. ವೆಬ್‌ಸೈಟ್: **https://uucms.karnataka.gov.in/** 6. RTGS/NEFT/Cash deposit. 7.ಸಂಯೋಜನಾ ಶುಲ್ಕದ ಮರುಪಾವತಿಯು ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಾವಳಿಗಳ ಪ್ರಕಾರ ಮಾಡಲಾಗುವುದು. 8. ಮಾನ್ಯತೆ ಇಲ್ಲದ ಕೋರ್ಸು/ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಶುಲ್ಕವನ್ನು ಮರುಪಾವತಿ/ಹೊಂದಾವಣೆ ಮಾಡಿಕೊಳ್ಳಲಾಗುವುದಿಲ್ಲ 9. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **9035415764, 9945226666 & 7892087298.**

ಸಹಿ/– ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ,
ಟಮಕ, ಕೋಲಾರ, ಕರ್ನಾಟಕ–563 103

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 321/ಕೆಎಸ್‌ಎಂ.ಸಿ.ಎ/2024–25

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
(ಹಿಂದಿನ ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್)
ರೇರ್ ಅರ್ಥ್ಸ್ ಡಿವಿಜನ್, ಕೊಚಿ, ಕೇರಳ,
ಇಮೇಲ್: purchase-red@irel.co.in
ಸಿಐಎನ್: U15100MH1950GOI008187
ಐಎಸ್‌ಒ 9001:2015, ಐಎಸ್‌ಒ 14001:2015 & ಐಎಸ್‌ಒ 45001:2018 ಕಂಪನಿ

ಅಪ್ರೆಂಟೈಸಸ್ ತೊಡಗಿಸಿಕೊಳ್ಳುವಿಕೆ

ರೇರ್ ಅರ್ಥ್ಸ್ ಡಿವಿಜನ, ಉದ್ಯೋಗಮಂಡಿ, ಎರ್ನಾಕುಲಂ ಜಿಲ್ಲೆ, ಕೇರಳ – 683501 ಇವರಲ್ಲಿ ಅಪ್ರೆಂಟೈಸ್ ಆಕ್ಟ್, 1961 ಅಡಿಯಲ್ಲಿ ಅಪ್ರೆಂಟೈಸಸ್ ತೊಡಗಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕೊನೆಯ ದಿನಾಂಕ 30/11/2024. ವಿವರಗಳಿಗಾಗಿ ದಯವಿಟ್ಟು www.irel.co.in ವೆಬ್‌ಸೈಟ್‌ನಲ್ಲಿ ‘ಕರಿಯರ್ಸ್’ ವಿಭಾಗವನ್ನು ಪರಿಶೀಲಿಸಿರಿ.

ಇದಕ್ಕೆ ಸಂಬಂಧಿಸಿದಂತೆ ಯಾವುದೇ ವಿಸ್ತರಣೆ ಇದ್ದಲ್ಲಿ, ಅದನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಮಾತ್ರ ಹೊರಡಿಸಲಾಗುತ್ತದೆ.

ಸಹಿ/–
ದಿನಾಂಕ: 18.11.2024 CBC 48145/12/0004/2425 ಸಿಜಿಎಂ & ಮುಖ್ಯಸ್ಥರು, ಆರ್‌ಇಡಿ

सत्यमेव जयते
ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ಇವರಲ್ಲಿ ಸದಸ್ಯರ ನೇಮಕಾತಿ

ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, ನವದೆಹಲಿ ಇವರು ಕಂಪನಿಗಳ ಕಾಯ್ದೆ, 2013ರ ಅಡಿಯಲ್ಲಿ ಸ್ಥಾಪನೆಗೊಂಡಿರುವ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ (ಎನ್‌ಸಿಎಲ್‌ಟಿ) ಇವರಲ್ಲಿನ ಜುಡಿಷಿಯಲ್ ಮೆಂಬರ್ಸ್ 03 (ಮೂರು) ಹುದ್ದೆಗಳಿಗೆ ಮತ್ತು ಟೆಕ್ನಿಕಲ್ ಮೆಂಬರ್ಸ್ 03 (ಮೂರು) ಹುದ್ದೆಗಳಿಗೆ ಭಾರತೀಯ ನಾಗರಿಕರಿಂದ ತಮ್ಮ https://apptrbmembermca.gov.in ವೆಬ್‌ಸೈಟ್ ಮೂಲಕ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಸದರಿ ಖಾಲಿಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿರುತ್ತದೆ ಮತ್ತು ಯಾವುದೇ ಸೂಚನೆ ಇಲ್ಲದೆಯೆ ಖಾಲಿಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚಳ ಅಥವಾ ಕಡಿತ ಉಂಟಾಗಬಹುದು. ಈ ಹುದ್ದೆಗಳು 7ನೇ ಕೇಂದ್ರಿಯ ವೇತನ ಆಯೋಗದ ಪೇ ಲೆವೆಲ್ 15 ಹಾಗೂ ಮಾಸಿತ ಭತ್ಯೆಗಳ ಅಡಿಯಲ್ಲಿರುತ್ತವೆ. ಭಾರತ ಸರ್ಕಾರದಲ್ಲಿ ಅಪೆಕ್ಸ್ ಸ್ಕೇಲ್ ಹೊಂದಿರುವವರು ಸೇರಿದಂತೆ ಸೇವೆಯಲ್ಲಿರುವ ಅಥವಾ ನಿವೃತ್ತ ಸರ್ಕಾರಿ ಅಧಿಕಾರಿಗಳು ಅಥವಾ ಚೇರ್ಮನ್, ವೈಸ್–ಚೇರ್ಮನ್, ಪ್ರೆಸಿಡೆಂಟ್, ವೈಸ್–ಪ್ರೆಸಿಡೆಟಂಟ್, ಪ್ರಿಸೈಡಿಂಗ್ ಆಫೀಸರ್, ನ್ಯಾಯಾಧಿಕರಣದ ಸದಸ್ಯ, ಅಪೆಲ್ಲೇಟ್ ಟ್ರಿಬ್ಯೂನಲ್ ಸದಸ್ಯ ಅಥವಾ ಪ್ರಾಧಿಕಾರ, ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶ, ಗರಿಷ್ಠ ವೇತನ ಶ್ರೇಣಿಯಲ್ಲಿರುವ/ಶ್ರೇಣಿಯಲ್ಲಿದ್ದ ಅರ್ಜಿದಾರರಿಗೆ ಪೇ ಪ್ರೊಟೆಕ್ಷನ್ ಲಭ್ಯವಿರುತ್ತದೆ.

ಅರ್ಜಿಯನ್ನು ಭರ್ತಿ ಮಾಡಲು ಸೂಚನೆಗಳು, ಅರ್ಹತಾ ಮಾನದಂಡಗಳು, ಅಗತ್ಯ ಅರ್ಹತೆಗಳು ಮತ್ತು ಇನ್ನಿತರ ವಿವರಗಳು https://apptrbmembermca.gov.in ಪೋರ್ಟಲ್‌ನಲ್ಲಿ ಲಭ್ಯವಿರುತ್ತದೆ. ವಿವರವಾದ ಜಾಹೀರಾತನ್ನು ಕಾರ್ಪೊರೇಟ್ ಸಚಿವಾಲಯದ ವೆಬ್‌ಸೈಟ್‌ನಲ್ಲಿ (www.mca.gov.in), ಡಿಒಪಿ&ಟಿ ವೆಬ್‌ಸೈಟ್‌ನಲ್ಲಿ (https://dopt.gov.in) ಮತ್ತು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ಇವರ ವೆಬ್‌ಸೈಟ್‌ನಲ್ಲಿ (www.nclt.gov.in) ಲಭ್ಯವಿರುತ್ತದೆ. **ದಿನಾಂಕ 18.11.2024 ರಂದು ಬೆಳಗ್ಗೆ 10:00 ಗಂಟೆಯಿಂದ** ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ 29.1.2024 ರಂದು ಸಂಜೆ 05:30 ಗಂಟೆ.**

ಸಂಪೂರ್ಣ ಭರ್ತಿ ಮಾಡಿ ಮತ್ತು ಸಹಿ ಹಾಕಿ ಅಪ್‌ಲೋಡ್ ಮಾಡಿರುವ ದಾಖಲಾತಿಗಳ ಪ್ರತಿಗಳನ್ನು ಮತ್ತು ಸೂಕ್ತ ವಿಧಾನದಲ್ಲಿ ಆನ್‌ಲೈನ್ ಪೋರ್ಟಲ್‌ನಲ್ಲಿ ಅಂತಿಮವಾಗಿ ಸಲ್ಲಿಸಿರುವ ಅರ್ಜಿಯ ಪ್ರಿಂಟ್ ಔಟ್ ಪ್ರತಿಯನ್ನು ಶ್ರೀ **ಹೇಮಂತಕುಮಾರ್, ಅಧೀನ ಕಾರ್ಯದರ್ಶಿ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, ಕೊಠಡಿ ಸಂ. 526, ಎ ‘ವಿಂಗ್’, 5ನೇ ಮಹಡಿ, ಶಾಸ್ತ್ರಿ ಭವನ, ಡಾ. ರಾಜೇಂದ್ರ ಪ್ರಸಾದ್ ರಸ್ತೆ, ನವದೆಹಲಿ–110001 ವಿಳಾಸಕ್ಕೆ ದಿನಾಂಕ 08.01.2025 ರಂದು ಸಂಜೆ 05:30 ಗಂಟೆಯೊಳಗೆ ತಲುಪುವಂತೆ ರವಾನಿಸತಕ್ಕದ್ದು.**

CBC 07101/11/0011/2425

ಹರಿದ್ವಾರದಲ್ಲಿ ರಾಷ್ಟ್ರೀಯ ಮಟ್ಟದ ರಾಜ್ಯೋತ್ಸವ

ಬೆಂಗಳೂರು: ಉತ್ತರಾಖಂಡದ ಹರಿದ್ವಾರ ಮತ್ತು ಹೃಷಿಕೇಶದಲ್ಲಿ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಸಂಘದಿಂದ ರಾಷ್ಟ್ರೀಯ ಮಟ್ಟದ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು.

ನಟ ಪ್ರೇಮ್ ಮಾತನಾಡಿ, 'ಕನ್ನಡ ಭಾಷೆಯನ್ನ ಪಸರಿಸುವ ಕಾರ್ಯ ಎಲ್ಲರಿಂದಾಗಬೇಕು. ಬೇರೆ ಭಾಷೆಗಳನ್ನು ದ್ವೇಷ ಮಾಡಬಾರದು. ಜೊತೆಗೆ ನಮ್ಮ ಭಾಷೆಯನ್ನು ಬಿಟ್ಟುಕೊಡಬಾರದು. ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕನ್ನಡ ಪುಸ್ತಕದ ಮಳಿಗೆ ತೆರೆಯಬೇಕು. ಮದುವೆ, ಗೃಹ ಪ್ರವೇಶ ಕಾರ್ಯಕ್ರಮಕ್ಕೆ ಹೋಗುವವರು ಕನ್ನಡ ಪುಸ್ತಕವನ್ನು ಉಡುಗೊರೆಯಾಗಿ ನೀಡಬೇಕು' ಎಂದು ಸಲಹೆ ನೀಡಿದರು.

ಸಂಗೀತ, ಸಾಹಿತ್ಯ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಾಗ ಮಾನಸಿಕವಾಗಿ ಸದೃಢವಾಗಿರಲು ಸಾಧ್ಯ ಎಂದು ಬಿಬಿಎಂಪಿ ಪಶ್ಚಿಮ ವಲಯ ಆಯುಕ್ತ ಆರ್.ಎಲ್. ದೀಪಕ್ ತಿಳಿಸಿದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಮಾತನಾಡಿ, 'ಕನ್ನಡವು ವಿಶ್ವ ಭಾಷೆಯಾಗಬೇಕು. ಅದಕ್ಕಾಗಿ ಹೊರ ನಾಡಿನಲ್ಲಿ ರಾಜ್ಯೋತ್ಸವ ಆಚರಿಸಲಾಗುತ್ತಿದೆ. ಹಿಂದೆ ಕಾಶಿಯಲ್ಲಿ ರಾಷ್ಟ್ರೀಯ, ನೇಪಾಳದಲ್ಲಿ ಅಂತರರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಗಿತ್ತು' ಎಂದು ಮಾಹಿತಿ ನೀಡಿದರು.

ಉಪ ಆರೋಗ್ಯಾಧಿಕಾರಿ ಡಾ. ಸಂಧ್ಯಾ, ಆಡಳಿತಾಧಿಕಾರಿಯವರ ಆಪ್ತ ಕಾರ್ಯದರ್ಶಿ ನಾರಾಯಣಸ್ವಾಮಿ, ಬಿಬಿಎಂಪಿ ನೌಕರರ ಕನ್ನಡ ಸಂಘದ ಅಧ್ಯಕ್ಷ ಸಾಯಿಶಂಕರ್ ಅವರನ್ನು ಸನ್ಮಾನಿಸಲಾಯಿತು.

ಮಾಜಿ ಮೇಯರ್ ಗೌತಮ್ ಕುಮಾರ್, ಮಹದೇವಪುರ ವಲಯ ಜಂಟಿ ಆಯುಕ್ತೆ ದಾಕ್ಷಾಯಿಣಿ, ವಕೀಲ ವಿ. ಶ್ರೀನಿವಾಸ್, ಭೀಮಪುತ್ರಿ ಬ್ರಿಗೇಡ್ ಅಧ್ಯಕ್ಷೆ ಭೀಮಪುತ್ರಿ ರೇವತಿರಾಜ್, ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಟ, ಗಾಯಕ ಫರೀದುದ್ದೀನ್ ಬಂಧನ

ಇಡುಕ್ಕಿ, ಕೇರಳ (ಪಿಟಿಐ): ಮಾದಕ ವಸ್ತುಗಳನ್ನು ಹೊಂದಿದ್ದ ಆರೋಪದಡಿ ನಟ ಮತ್ತು ಗಾಯಕ ಪಿ.ಎಸ್.ಫರೀದುದ್ದೀನ್ ಮತ್ತು ಅವರ ಸ್ನೇಹಿತರೊಬ್ಬರನ್ನು ಬಂಧಿಸಲಾಗಿದೆ ಎಂದು ಅಬಕಾರಿ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಪುಳಿಕಾನಂ ಬಳಿ ಶನಿವಾರ ವಾಹನ ತಪಾಸಣೆ ವೇಳೆ 10.5 ಗ್ರಾಂ ನಿಷೇಧಿತ ಎಂಡಿಎಂಎ ಮತ್ತು 9 ಗ್ರಾಂ ಗಾಂಜಾ ಫರೀದುದ್ದೀನ್ ಅವರ ಕಾರಿನಲ್ಲಿ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಫರೀದುದ್ದೀನ್ ಅನೇಕ ಚಲನಚಿತ್ರಗಳಲ್ಲಿ ನಟಿಸಿದ್ದು, 'ಬಿಗ್ ಬಾಸ್' ಆವೃತ್ತಿಯೊಂದರಲ್ಲಿ ಭಾಗವಹಿಸಿದ್ದರು.

ನಿಧನ ವಾರ್ತೆ

ಪ್ರೊ.ಮುರಳೀಧರ

ಬೆಂಗಳೂರು: ನಿವೃತ್ತ ಪ್ರಾಧ್ಯಾಪಕ ಪ್ರೊ. ಮುರಳೀಧರ (84) ಅವರು ಶನಿವಾರ ನಿಧನರಾಗಿದ್ದಾರೆ.

ಮುರಳೀಧರ

ಉತ್ತರಹಳ್ಳಿ ನಿವಾಸಿಯಾಗಿದ್ದ ಅವರು, ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸು-ತ್ತಿದ್ದರು. ಮೃತರಿಗೆ ಪತ್ನಿ, ಪುತ್ರ ಇದ್ದಾರೆ. ಬನಶಂಕರಿ ಚಿತಾಗಾರದಲ್ಲಿ ಭಾನುವಾರ ಬೆಳಿಗ್ಗೆ ಅಂತ್ಯಕ್ರಿಯೆ ನಡೆಯಿತು.

ನಗರದ ಸರ್ಕಾರಿ ಕಾಲೇಜಿನಲ್ಲಿ ರಸಾಯನ ವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಾರ್ಯಕಾರಿಣಿ ಸದಸ್ಯ-ರಾಗಿದ್ದರು.

ಶ್ರೀ ನಾಗರಾಜ ಎನ್
ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ನಿ)
ಅಧ್ಯಕ್ಷರು
ಶ್ರೀ ಕೆಂಪಣ್ಣ ಸ್ವಾಮಿ, ಶ್ರೀ ವೀರಣ್ಣ ಸ್ವಾಮಿ ದೇವಾಲಯ ಟ್ರಸ್ಟ್

ಕರ್ನಾಟಕ ಸರ್ಕಾರದಿಂದ
ಸಹಕಾರ ರತ್ನ ಪ್ರಶಸ್ತಿ ಪ್ರಧಾನ

ಶ್ರೀ ರವಿ
ಉಪಾಧ್ಯಕ್ಷರು
ಶ್ರೀ ಕೆಂಪಣ್ಣ ಸ್ವಾಮಿ, ಶ್ರೀ ವೀರಣ್ಣ ಸ್ವಾಮಿ ದೇವಾಲಯ ಟ್ರಸ್ಟ್
ಜಮೀನ್ದಾರರು, ಬಿಳಿಶಿವಾಲೆ

ಅಭಿನಂದನೆಗಳು
ಕರ್ನಾಟಕ ಸರ್ಕಾರ ಹಾಗೂ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಸಹಯೋಗದೊಂದಿಗೆ ಸಹಕಾರ ರತ್ನ ಪ್ರಶಸ್ತಿಗೆ ಪುರಸ್ಕೃತರಾಗಿರುವ
ಶ್ರೀ ಅಶ್ವತ್ತಯ್ಯ ರವರಿಗೆ
ಸ.ಸಂ. ಸಹಾಯಕ ನಿಬಂಧಕರು (ನಿ)
ಕಾರ್ಯದರ್ಶಿಗಳು
ಶ್ರೀ ಕೆಂಪಣ್ಣಸ್ವಾಮಿ, ಶ್ರೀ ವೀರಣ್ಣಸ್ವಾಮಿ ದೇವಾಲಯ ಟ್ರಸ್ಟ್ ಮತ್ತು
ಶ್ರೀ ಜ್ಯೋತಿರ್ಲಿಂಗೇಶ್ವರ ದೇವಸ್ಥಾನ ಟ್ರಸ್ಟ್

ಹೃತ್ಪೂರ್ವಕ ಅಭಿನಂದನೆಗಳು
ಪ್ರೋತ್ಸಾಹಿಸಿದ ಸಹಕಾರ ಇಲಾಖೆ ಮತ್ತು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ರವರೆಲ್ಲರಿಗೂ ಕೃತಜ್ಞತೆಗಳು. ಆಪ್ತ ಸಿಬ್ಬಂದಿ ವರ್ಗ, ಸ್ನೇಹಿತರು, ಸಹೋದ್ಯೋಗಿಗಳು, ಸಂಘ ಸಂಸ್ಥೆಗಳು, ಜ್ಯೋತಿಪುರ, ಸಿಂಗಹಳ್ಳಿ ಮತ್ತು ಎಲ್ಲ ಕುಟುಂಬ ವರ್ಗದವರಿಂದ ಅಭಿನಂದನೆಗಳು

ಶ್ರೀ ಕೆಂಚಪ್ಪ ಗೌಡರು ಬಿ
ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು
ರಾಜ್ಯ ಒಕ್ಕಲಿಗರ ಸಂಘ

ಶ್ರೀ ಮಂಜುರಾಜು ಎನ್ ಎಂ
ಅಧ್ಯಕ್ಷರು
ಶ್ರೀ ಭುವನೇಶ್ವರಿ ಒಕ್ಕಲಿಗರ ಸಂಘ
ಬೆಂ.ಪೂರ್ವ ತಾ ।।

ಶ್ರೀ ವೆಂಕಟೇಶ್ ಸಿ
ಮಾಜಿ ಅಧ್ಯಕ್ಷರು
ಬಿ. ಕ. ಹಳ್ಳಿ ಗ್ರಾಮ ಪಂಚಾಯಿತಿ,
ಎ.ಪಿ.ಎಂ.ಸಿ

ಶ್ರೀ ಗಿರಿರಾಜಗೌಡರು
ಸಮಾಜ ಸೇವಕರು
ಸಿದ್ದಾಪುರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಸಂತ ಶ್ರೇಷ್ಠ ಕನಕದಾಸರ ಜಯಂತಿ
ಮತ್ತು ಕನಕ ಶ್ರೀ ಪ್ರಶಸ್ತಿ, ಕನಕ ಗೌರವ ಹಾಗೂ ಕನಕ ಯುವ ಪುರಸ್ಕಾರ ಪ್ರಶಸ್ತಿ ಪ್ರದಾನ
ಮತ್ತು ಸಮಗ್ರ ತತ್ವಪದ ಯೋಜನೆಯ 18 ಸಂಪುಟಗಳ ಪುಸ್ತಕ ಲೋಕಾರ್ಪಣೆ ಸಮಾರಂಭ
ಸಂಪುಟಗಳ ಪ್ರಕಟಣೆ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಬೆಂಗಳೂರು
ದಿನಾಂಕ: 18.11.2024, ಸೋಮವಾರ | ಸಮಯ: ಸಂಜೆ 5.30 ಗಂಟೆಗೆ
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಉದ್ಘಾಟನೆ, ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಿಡುಗಡೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿವ್ಯ ಸಾನಿಧ್ಯ
ಜಗದ್ಗುರು ಶ್ರೀ ಶ್ರೀ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು, ಕನಕ ಗುರುಪೀಠ, ಸುಕ್ಷೇತ್ರ ಕಾಗಿನೆಲೆ, ಹಾವೇರಿ ಜಿಲ್ಲೆ
ಜಗದ್ಗುರು ಶ್ರೀ ಶ್ರೀ ಶ್ರೀ ಸಿದ್ದರಾಮಾನಂದ ಸ್ವಾಮಿಗಳು, ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ, ತಿಂಥಣಿ

ಘನ ಉಪಸ್ಥಿತಿ
ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ಕೇಂದ್ರ ಹಣಕಾಸು, ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಡಿ.ಕೆ. ಶಿವಕುಮಾರ್, ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಕುಮಾರಿ ಶೋಭಾ ಕರಂದ್ಲಾಜೆ, ಮಾನ್ಯ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ ಹಾಗೂ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ರಾಜ್ಯ ಸಚಿವರು, ಭಾರತ ಸರ್ಕಾರ
ಶ್ರೀ ಶಿವರಾಜ ಎಸ್. ತಂಗಡಗಿ, ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಶ್ರೀ ಉದಯ್ ಬಿ. ಗರುಡಾಚಾರ್, ಮಾನ್ಯ ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಶಿವರಾಜ ಎಸ್. ತಂಗಡಗಿ ಅವರು ಸಮಾರಂಭದಲ್ಲಿ ಭಾಗವಹಿಸಿರುವುದು.

ಮುಖ್ಯ ಅತಿಥಿಗಳು
ಶ್ರೀ ರಾಮಲಿಂಗಾರೆಡ್ಡಿ, ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಕೆ.ಜೆ. ಜಾರ್ಜ್, ಮಾನ್ಯ ಇಂಧನ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ದಿನೇಶ್ ಗುಂಡೂರಾವ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಕೃಷ್ಣ ಭೈರೇಗೌಡ, ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಸುರೇಶ್ ಬಿ.ಎಸ್., ಮಾನ್ಯ ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್, ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್
ಶ್ರೀ ಆರ್. ಅಶೋಕ, ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನಸಭೆ
ಶ್ರೀ ಅಶೋಕ್ ಮಹದೇವಪ್ಪ ಪಟ್ಟಣ್, ಮಾನ್ಯ ಸರ್ಕಾರಿ ಮುಖ್ಯ ಸಚೇತಕರು, ಕರ್ನಾಟಕ ವಿಧಾನಸಭೆ
ಶ್ರೀ ಸಲೀಂ ಅಹ್ಮದ್, ಮಾನ್ಯ ಸರ್ಕಾರಿ ಮುಖ್ಯ ಸಚೇತಕರು, ಕರ್ನಾಟಕ ವಿಧಾನ ಪರಿಷತ್
ಶ್ರೀ ದೊಡ್ಡನಗೌಡ ಎಚ್. ಪಾಟೀಲ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ಕರ್ನಾಟಕ ವಿಧಾನಸಭೆ
ಶ್ರೀ ಎನ್.ಎ. ಹ್ಯಾರಿಸ್, ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ
ಶ್ರೀ ಬಿ. ಶಿವಣ್ಣ, ಮಾನ್ಯ ಅಧ್ಯಕ್ಷರು, ಬೆಂಮಸಾಸಂಸ್ಥೆ ಹಾಗೂ ಶಾಸಕರು, ಆನೇಕಲ್ ವಿಧಾನಸಭಾ ಕ್ಷೇತ್ರ
ಡಾ. ಕೆ. ಗೋವಿಂದರಾಜ್, ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳು ಹಾಗೂ ಶಾಸಕರು, ವಿಧಾನ ಪರಿಷತ್
ಶ್ರೀ ನಸೀರ್ ಅಹ್ಮದ್, ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳು ಹಾಗೂ ಶಾಸಕರು, ವಿಧಾನ ಪರಿಷತ್
ಶ್ರೀ ಎಚ್.ಎಂ.ರೇವಣ್ಣ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ
ಡಾ. ಪುರುಷೋತ್ತಮ ಬಿಳಿಮಲೆ, ಮಾನ್ಯ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಅತಿಥಿಗಳು: ಬೆಂಗಳೂರು ನಗರದ ಮಾನ್ಯ ಲೋಕಸಭಾ ಸದಸ್ಯರು /ರಾಜ್ಯಸಭಾ ಸದಸ್ಯರು / ವಿಧಾನಸಭಾ ಸದಸ್ಯರು / ವಿಧಾನ ಪರಿಷತ್ ಸದಸ್ಯರು ಹಾಗೂ ಚುನಾಯಿತ ಜನಪ್ರತಿನಿಧಿಗಳು

ಮೆರವಣಿಗೆ
ಗಾಂಧಿನಗರದ ಕನಕದಾಸ ವೃತ್ತದಿಂದ ರವೀಂದ್ರ ಕಲಾಕ್ಷೇತ್ರದವರೆಗೆ ಸಂತ ಶ್ರೇಷ್ಠ ಕನಕದಾಸರ ಭಾವಚಿತ್ರವಿರುವ ರಥ, ವಿವಿಧ ಜಾನಪದ ಕಲಾತಂಡಗಳು, ಗಣ್ಯರು ಹಾಗೂ ಸಾರ್ವಜನಿಕರೊಂದಿಗೆ ಮೆರವಣಿಗೆ.

ಸರ್ವರಿಗೂ ಆದರದ ಸುಸ್ವಾಗತ

ಸಾಂಸ್ಕೃತಿಕ ಕಾರ್ಯಕ್ರಮಗಳು
ಸಂಜೆ : 4.00ಕ್ಕೆ ಕನಕದಾಸರ ಕುರಿತ ನೃತ್ಯ ರೂಪಕ ಮತ್ತು ಕೀರ್ತನೆಗಳ ಗಾಯನ

ಡಾ. ಎನ್. ಮಂಜುಳ, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಡಾ. ಧರಣೀದೇವಿ ಮಾಲಗತ್ತಿ, ಭಾ.ಪೊ.ಸೇ., ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.
ನುಡಿದಂತೆ ನಡೆದಿದ್ದೇವೆ... ಶಕ್ತಿ ಗೃಹಜ್ಯೋತಿ ಅನ್ನಭಾಗ್ಯ ಗೃಹಲಕ್ಷ್ಮಿ ಯುವನಿಧಿ

ಅಪಾರ
BREAKING BOUNDARIES

ಕರ್ನಾಟಕ ಸರ್ಕಾರ
ಬೆಂಗಳೂರು ಟೆಕ್ ಸಮ್ಮಿಟ್
19ರಿಂದ 21ನೇ ನವೆಂಬರ್ 2024 ಬೆಂಗಳೂರು ಅರಮನೆ

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ನಾಳೆಯಿಂದ, ಏಷ್ಯಾದ ಅತಿದೊಡ್ಡ ಟೆಕ್ ಕಾನ್‌ಕ್ಲೇವ್‌ನಲ್ಲಿ ಭಾಗವಹಿಸಿ
ಹೊಸ ಆವಿಷ್ಕಾರದಲ್ಲಿ ಕೈ ಜೋಡಿಸಿ.
ಉದ್ಘಾಟನೆ, ಬೆಳಿಗ್ಗೆ 10:00 ಗಂಟೆಗೆ, ಬೆಂಗಳೂರು ಅರಮನೆ

ಗೌರವಾನ್ವಿತ ಅತಿಥಿಗಳು
ಡಾ. ಅನ್ನಾ ಕ್ರೈಸ್ಟ್‌ಮನ್ — ಜರ್ಮನಿಯ ಆರ್ಥಿಕ ವ್ಯವಹಾರಗಳು ಮತ್ತು ಹವಾಮಾನ ಕ್ರಿಯೆಗಳ ಫೆಡರಲ್ ಸಚಿವಾಲಯದಲ್ಲಿ (BMWK) ಸಂಸದ ಸದಸ್ಯರು ಮತ್ತು ಸ್ಟಾರ್ಟ್‌ಅಪ್ಸ್ ಮತ್ತು ಡಿಜಿಟಲ್ ಅರ್ಥವ್ಯವಸ್ಥೆಯ ಆಯುಕ್ತರು
ಶ್ರೀಮತಿ ಅಲೆಕ್ಸಾಂಡ್ರಾ ಡ್ಯುಬ್ಲಾಂಚ್ — ಪ್ಯಾರಿಸ್ ಪ್ರದೇಶ, ಫ್ರಾನ್ಸ್‌ನ ಪುನರುತ್ಥಾನ, ಆರ್ಥಿಕ ಅಭಿವೃದ್ಧಿ, ಆಕರ್ಷಣೆ ಮತ್ತು ಆವಿಷ್ಕಾರಗಳ ಉಸ್ತುವಾರಿ ಉಪಾಧ್ಯಕ್ಷರು
ಶ್ರೀ ಸಂತೋಷ್ ಕುಮಾರ್ — ವ್ಯವಸ್ಥಾಪಕ ನಿರ್ದೇಶಕರು ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್
ಶ್ರೀ ಶ್ರೀಹರ್ಷ ಮಾಜೇಟಿ — ಸಹ-ಸಂಸ್ಥಾಪಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಸ್ವಿಗ್ಗಿ

ಟೆಕ್ ಸಮಿಟ್ ಆಕರ್ಷಣೆ
ಬಿ2ಬಿ ಅಂತರರಾಷ್ಟ್ರೀಯ ಪ್ರದರ್ಶನ
ಸ್ಟಾರ್ಟ್-ಅಪ್ ಸ್ಪ್ರಿಂಗ್‌ಬೋರ್ಡ್
ಮಲ್ಟಿಟ್ರ್ಯಾಕ್ ಕಾನ್ಫರೆನ್ಸ್
ಪ್ರೊಡಕ್ಟ್ ಲಾಂಚ್‌ಗಳು
ಎಸ್‌ಟಿಪಿಐ ಐಟಿ ಎಕ್ಸ್‌ಪೋರ್ಟ್ ಪ್ರಶಸ್ತಿಗಳು
ಟಿಸಿಎಸ್ ಗ್ರಾಮೀಣ ಐಟಿ ರಸಪ್ರಶ್ನೆ
ಸ್ಮಾರ್ಟ್ ಬಯೋ ಪ್ರಶಸ್ತಿಗಳು
ಬಯೋ ಪೋಸ್ಟರ್‌ಗಳು
ಮತ್ತು ಬಯೋ ಕ್ವಿಜ್

ಜಾಗತಿಕ ನಾವೀನ್ಯತಾ ಒಕ್ಕೂಟದ ಪಾಲುದಾರರು
ARGENTINA AUSTRALIA AUSTRIA BELGIUM BHUTAN COLOMBIA DENMARK DOMINICAN REPUBLIC EU FINLAND FRANCE GERMANY ISRAEL IRAN ITALY JAPAN LITHUANIA MALAYSIA NETHERLANDS NEW ZEALAND OMAN POLAND SINGAPORE SOUTH KOREA SWEDEN SWITZERLAND THAILAND UAE UNITED KINGDOM USA VIETNAM

ಸಹ-ಆಯೋಜಕರು
STPI K-tech STARTUP KARNATAKA

ಸಮ್ಮೇಳನದಲ್ಲಿ ಭಾಗವಹಿಸಿ | ಎಕ್ಸ್‌ಪೋಗೆ ಭೇಟಿ ನೀಡಿ
www.bengalurutechsummit.com

34 ಲಕ್ಷ ಜನರ ಭೇಟಿ • ₹6 ಕೋಟಿಗೂ ಅಧಿಕ ವಹಿವಾಟು

ಕೃಷಿ ಮೇಳಕ್ಕೆ ಸಂಭ್ರಮದ ತೆರೆ

'ಬ್ಲೂಮ್ ಸ್ಪ್ರೇಯರ್' ಅರೆ ಸ್ವಯಂಚಾಲಿತ ಟ್ರ್ಯಾಕ್ಟರ್ ಚಾಲನೆ ಮಾಡಿದ ಶಾಲಿನಿ ರಜನೀಶ್. ಎಸ್.ವಿ. ಸುರೇಶ ಅವರು ಸಾಥ್ ನೀಡಿದರು

'ಡಿಜಿಟಲ್ ತಂತ್ರಜ್ಞಾನ ಅಳವಡಿಸಿಕೊಳ್ಳಿ'

'ಯುವ ಸಮೂಹ ಕೃಷಿಯಲ್ಲಿ ಡಿಜಿಟಲ್ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಕೃಷಿ ಕ್ಷೇತ್ರದಲ್ಲಿ ಕ್ರಾಂತಿ ಮಾಡಬೇಕು' ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸಲಹೆ ನೀಡಿದರು.

ಸಮಾರೋಪ ಸಮಾರಂಭದಲ್ಲಿ ಸಾಧಕ ರೈತರಿಗೆ, ರೈತ ಮಹಿಳೆಯರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, 'ಕೃಷಿ ಮೇಳಕ್ಕೆ ಭೇಟಿ ನೀಡಿದ ರೈತರು, ತಾವು ಕಂಡ ಕೃಷಿ ತಾಂತ್ರಿಕತೆಗಳು, ತಳಿಗಳ ಕುರಿತು ಮತ್ತಷ್ಟು ರೈತರಿಗೆ ಮಾಹಿತಿ ಹಂಚಬೇಕು' ಎಂದರು.

ಬೆಂಗಳೂರು ಕೃಷಿ ವಿ.ವಿ ಕುಲಪತಿ ಎಸ್.ವಿ.ಸುರೇಶ ಮಾತನಾಡಿ, 'ಈ ಕೃಷಿ ಮೇಳ, ಭವಿಷ್ಯದ ಡಿಜಿಟಲ್ ಕೃಷಿಗೆ ಮುನ್ನುಡಿ ಬರೆದಿದೆ' ಎಂದರು.

'ಮುಂದಿನ ದಿನಗಳಲ್ಲಿ ಡಿಜಿಟಲ್ ಕೃಷಿಯನ್ನು 'ಕೃಷಿ ಯಂತ್ರಧಾರೆ'ಗೆ ಅಳವಡಿಸಲು ಮಾರ್ಗಸೂಚಿಗಳನ್ನು ರೂಪಿಸಲಾಗಿದೆ' ಎಂದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 'ಹವಾಮಾನ ಚತುರ ಡಿಜಿಟಲ್ ಕೃಷಿ' ಶೀರ್ಷಿಕೆಯಡಿ ನಾಲ್ಕು ದಿನಗಳಿಂದ ನಡೆದ ಕೃಷಿ ಮೇಳಕ್ಕೆ ಭಾನುವಾರ ಸಂಭ್ರಮದ ತೆರೆ ಬಿತ್ತು.

ನಾಲ್ಕು ದಿನಗಳಲ್ಲಿ 34.13 ಲಕ್ಷ ಜನರು ಭೇಟಿ ನೀಡಿ ಮೇಳವನ್ನು ವೀಕ್ಷಿಸಿದರು. ₹6.17 ಕೋಟಿ ವಹಿವಾಟು ನಡೆಯಿತು. 53 ಸಾವಿರ ಮಂದಿ ಮಧ್ಯಾಹ್ನದ ಭೋಜನ ಸವಿದಿದ್ದಾರೆ ಎಂದು ವಿಶ್ವವಿದ್ಯಾಲಯದ ಮೂಲಗಳು ತಿಳಿಸಿವೆ.

'ಮಳೆಯ ಸಿಂಚನ'ದೊಂದಿಗೆ ಮೇಳ ಆರಂಭವಾಯಿತು. ಕೊನೆಯ ದಿನ ವಾರಾಂತ್ಯದ ರಜೆ ಕಾರಣ, ನಗರ ವಾಸಿಗಳು ಕುಟುಂಬ ಸಮೇತ ಮೇಳಕ್ಕೆ ಭೇಟಿ ನೀಡಿದ್ದರು. 'ಪ್ರಾಣಿ ಪ್ರಪಂಚ'ದ ಮಳಿಗೆಗಳು, ಅಲಂಕಾರಿಕ ಮೀನಿನ ಮರಿಗಳ ಮಾರಾಟ ಮಳಿಗೆಗಳಲ್ಲಿ ಜನ ಜಾತ್ರೆ, ಆಹಾರ ಮಳಿಗೆಗಳಲ್ಲಂತೂ ಜನವೋ ಜನ.

ತಾರಸಿ ಕೃಷಿ, ನಗರ ತೋಟಗಾರಿಕೆ ಹವ್ಯಾಸವಿರುವ 'ನಗರ ಕೃಷಿಕರು' ಹೆಚ್ಚಿನ ಸಂಖ್ಯೆಯಲ್ಲಿ ಮೇಳಕ್ಕೆ ಭೇಟಿ ನೀಡಿದ್ದರು. ತಮ್ಮಿಷ್ಟದ ಹೂವು, ಹಣ್ಣಿನ ಗಿಡಗಳನ್ನು ಖರೀದಿಸಿ ತೆರಳುತ್ತಿದ್ದರು. ತರಕಾರಿ, ಹೂವಿನ ಬೀಜಗಳು, ತೋಟಗಾರಿಕೆ ಪರಿಕರಗಳತ್ತಲೂ ಚಿತ್ತ ಹರಿಸಿದ್ದರು.

ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿದ್ದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು, ಸಮಾರಂಭಕ್ಕೂ ಮುನ್ನ ಪ್ರಾತ್ಯಕ್ಷಿಕೆ ತಾಕುಗಳು, ಮಳಿಗೆಗಳಿಗೆ ಭೇಟಿ ನೀಡಿದರು. ಡಿಜಿಟಲ್ ಬೂಮ್ ಸ್ಪ್ರೇಯರ್ ಅರೆ ಸ್ವಯಂ ಚಾಲಿತ ಟ್ರ್ಯಾಕ್ಟರ್ ಅನ್ನು ಚಾಲನೆ ಮಾಡಿದರು. ಕೃಷಿಯಲ್ಲಿ ಡ್ರೋನ್ ಬಳಕೆ, ರಿಮೋಟ್ ಆಧಾರಿತ ನೆಲಗಡಲೆ ಬಿತ್ತುವ ಯಂತ್ರ 'ಕೃಷಿ ಬಾಟ್'ನ ಕಾರ್ಯವೈಖರಿ ಕುರಿತು ಮಾಹಿತಿ ಪಡೆದರು.

ಸಮಾರಂಭದಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅತ್ಯುತ್ತಮ ಯುವ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ.ಎಂ.ಎಚ್. ಮರೀಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ, ಡಾ.ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ ಮತ್ತು ಡಾ ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಭಾನುವಾರ ಕೃಷಿ ಮೇಳದಲ್ಲಿ ಸೇರಿದ್ದ ಜನ – ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಕೊನೆಯ ದಿನ ಕುಟುಂಬ ಸಮೇತ ಭೇಟಿ ನೀಡಿದ ನಗರ ವಾಸಿಗಳು
- ಮಧ್ಯಾಹ್ನದ ಭೋಜನ ಸವಿದ 53 ಸಾವಿರ ಮಂದಿ
- ಅತ್ಯುತ್ತಮ ಯುವ ರೈತ, ರೈತ ಮಹಿಳಾ ಪ್ರಶಸ್ತಿ ಪ್ರದಾನ

ಕಳೆದ ಐದು ವರ್ಷಗಳಲ್ಲಿ ಕೃಷಿ ಮೇಳದಲ್ಲಿ ಭಾಗವಹಿಸಿದವರ ಸಂಖ್ಯೆ



ದೊಡ್ಡಬಳ್ಳಾಪುರ ತಾಲ್ಲೂಕು ಹಾಡೋನಹಳ್ಳಿಯ ರೂಪಾ ಎಚ್.ಪಿ ಅವರಿಗೆ 'ಡಾ.ಎಂ.ಎಚ್.ಮರಿಗೌಡ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕೆ ರೈತ ಪ್ರಶಸ್ತಿ', ಹಾಸನ ಜಿಲ್ಲೆ ಹೊಳೆನರಸಿಪುರ ತಾಲ್ಲೂಕಿನ ಉಣ್ಣೇನಹಳ್ಳಿಯ ಯು.ಎಂ. ನಾಗವರ್ಮ ಅವರಿಗೆ 'ಡಾ.ದ್ವಾರಕಿನಾಥ್ ಅತ್ಯುತ್ತಮ ರೈತ' ಪ್ರಶಸ್ತಿ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ(ತೋಟಗಾರಿಕೆ) ಕೃಷಿ ಮಾಹಿತಿ ತಂತ್ರಜ್ಞಾನ ಕೇಂದ್ರದ ಸಹಾಯಕ ಪ್ರಾಧ್ಯಾಪಕಿ ಎಂ.ಶಾಲಿನಿ ಅವರಿಗೆ 'ಡಾ.ಆರ್.ದ್ವಾರಕಿನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತೆ' ಪ್ರಶಸ್ತಿ, ನೀಡಿ ಗೌರವಿಸಲಾಯಿತು. ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ. ಸುಧೀಂದ್ರ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು

ಕೃಷಿ ಮೇಳದಲ್ಲಿ ಭಾನುವಾರ ವಿದ್ಯಾರ್ಥಿನಿಯರು ಸೂರ್ಯಕಾಂತಿ ಹೂವುಗಳೊಂದಿಗೆ ಸೆಲ್ಫಿ ತೆಗೆದುಕೊಂಡರು

ಜಾಫರಾಬಾದಿ ಎಮ್ಮೆ ನೋಡಲು ಮುಗಿಬಿದ್ದ ಜನ

• ಮಲ್ಲಮ್ಮ ವಿಜಯಪುರ

ಜಾಫರಾಬಾದಿ ತಳಿಯ ಎಮ್ಮೆ

ಬೆಂಗಳೂರು: ಆನೆಯಂತಹ ದೇಹ, ಚಿಕ್ಕದಾದ ಕಣ್ಣು, ಕುಂಬಳಕಾಯಿ ಆಕಾರದ ತಲೆ, ಸುರುಳಿ ಸುತ್ತಿರುವ ಕೊಂಬುಗಳ ಜಾಫರಾಬಾದಿ ಎಮ್ಮೆಗಳೆರಡು ಬೆಂಗಳೂರು ಕೃಷಿ ಮೇಳದಲ್ಲಿ ಎಲ್ಲರ ಆಕರ್ಷಣೆಯ ಕೇಂದ್ರವಾಗಿದ್ದವು.

ಕೃಷಿ ಮೇಳದ ಕೊನೆಯ ದಿನ ಹಸು, ಎಮ್ಮೆ, ಕುರಿ, ಕೋಳಿ, ಮೀನುಗಳನ್ನು ನೋಡಲು ಜನರ ದಂಡು ಸಾಗಿತ್ತು. ಗುಜರಾತಿನ ಗೀರ್ ಪ್ರದೇಶದ ಕಾಡೆಮ್ಮೆ ರೀತಿ ಕಾಣುವ ಈ ಸಾಕು ಎಮ್ಮೆಯನ್ನು ನೋಡಲು ಜನರು ಮುಗಿಬಿದ್ದಿದ್ದರು.

ದೇಶಿಯ ತಳಿಗಳಾದ ಹಳ್ಳಿಕಾರ್, ಅಮೃತ ಮಹಲ್, ಜವಾರಿ, ಕೆಂಪು ಸಿಂಧಿ, ಕಪಿಲ ಸಾಯಿ, ಡಂಗಿ, ಖಿಲಾರಿ, ನಾಗೋರಿ, ಮಲೆನಾಡು ಗಿಡ್ಡ, ಗಂಗಾತಿರಿ ಮುಂತಾದ ತಳಿಗಳ ಹಸುಗಳ ಮಧ್ಯೆ ಜಾಫರಾಬಾದಿ ತಳಿಯ ಎಮ್ಮೆಯೇ ಕೇಂದ್ರಬಿಂದು ಆಗಿತ್ತು.

'ಗುಜರಾತಿನ ಗೀರ್ ಅರಣ್ಯ ಪ್ರದೇಶದಿಂದ ತಂದು ಸಾಕಲಾಗಿರುವ ಈ ಎಮ್ಮೆಯು ಒಂದು ಹೊತ್ತಿಗೆ 15 ರಿಂದ 25 ಲೀಟರ್ ಹಾಲು ಕೊಡುತ್ತದೆ. ನಮ್ಮ ಗೋಶಾಲೆಯಲ್ಲಿ ಈ ಎಮ್ಮೆಯ ಸಾಕಾಣಿಕೆ ತರಬೇತಿ ನೀಡುತ್ತೇವೆ' ಎಂದು ಶ್ರೀ ಕೃಷ್ಣ ಗೋಶಾಲೆಯ ಕೃಷ್ಣಮೂರ್ತಿ ಸಿ.ಎನ್. ಮಾಹಿತಿ ನೀಡಿದರು.

ಈ ತಳಿಯ ಎಮ್ಮೆಗಳು ಹುಲಿ ಸಹಿತ ವಿವಿಧ ಪ್ರಾಣಿಗಳಿಂದ ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳುವ ಬಲವನ್ನು ಹೊಂದಿವೆ. ಮನುಷ್ಯರ ಜತೆಗೆ ಪಳಗಿದ ನಂತರ ಸ್ನೇಹಮಯಿಯಾಗಿ ವರ್ತಿಸುತ್ತವೆ. ಸುಮಾರು 5 ರಿಂದ 6 ಅಡಿ ಎತ್ತರವಿರುವ ಈ ಎಮ್ಮೆಗಳು ಒಂದು ಟನ್‌ಗಿಂತಲೂ ಅಧಿಕ ತೂಕ ಇರುತ್ತವೆ.

'ಬೃಹತ್ ಆಕಾರ ಹೊಂದಿರುವ ಈ ಎಮ್ಮೆಗಳಿಗೆ ಅಧಿಕ ಮೇವು ಬೇಕಾಗುತ್ತದೆ. ಗುಜರಾತಿನ ಕಛ್ ಹಾಗೂ ಜಾಮ್ ನಗರಗಳ ಜನರು ಹೆಚ್ಚಾಗಿ ಈ ತಳಿಯ ಎಮ್ಮೆಗಳನ್ನು ಸಾಕುತ್ತಾರೆ. ಮಲ್ಧಾರಿಸ್ ಬುಡಕಟ್ಟು ಜನಾಂಗ ಈ ಎಮ್ಮೆಯನ್ನು ಪಳಗಿಸುವಲ್ಲಿ ಪರಿಣಿತಿ ಹೊಂದಿದೆ. ಭಾರತದಲ್ಲಿ 6 ಲಕ್ಷಕ್ಕೂ ಹೆಚ್ಚು ಜಾಫರಾಬಾದಿ ಎಮ್ಮೆಗಳಿವೆ. ಈ ಎಮ್ಮೆ 35 ರಿಂದ 40 ತಿಂಗಳಿಗೊಮ್ಮೆ ಗರ್ಭ ಧರಿಸುತ್ತದೆ. ಇದರ ಕರು ಜನಿಸುವಾಗಲೇ 35 ರಿಂದ 40 ಕೆ.ಜಿ. ತೂಕವಿರುತ್ತದೆ. ಬೇರೆ ತಳಿಯ ಎಮ್ಮೆಗಳಿಗಿಂತ ದೈಹಿಕವಾಗಿ ಭಿನ್ನವಾಗಿರುವ ಈ ಎಮ್ಮೆಯ ವರ್ಷಪೂರ್ತಿ ಹಾಲು ಕೊಡುತ್ತದೆ' ಎಂದು ಕೃಷ್ಣಮೂರ್ತಿ ಸಿ.ಎನ್. ತಿಳಿಸಿದರು.

ಜೇನು ಪೆಟ್ಟಿಗೆಗಳಲ್ಲಿ ಪ್ಲಾಸ್ಟಿಕ್ ಫ್ರೇಮ್

• ಡಿ.ಸುರೇಶ್

ಯಲಹಂಕ: ಜೇನು ಪೆಟ್ಟಿಗೆಗಳಲ್ಲಿ ಮರದ ಫ್ರೇಮ್‌ಗಳ (ಚೌಕಟ್ಟುಗಳ) ಬದಲಿಗೆ ಪ್ಲಾಸ್ಟಿಕ್ ಫ್ರೇಮ್‌ಗಳನ್ನು ಉಪಯೋಗಿಸುವುದರಿಂದ ಕಡಿಮೆ ಸಮಯದಲ್ಲಿ ಜೇನು ತುಪ್ಪವನ್ನು ಸಂಗ್ರಹಿಸಬಹುದು.

ಜಿಕೆವಿಕೆಯಲ್ಲಿ ನಡೆದ ಕೃಷಿ ಮೇಳದಲ್ಲಿ ಜೇನು ಕೃಷಿ ವಿಭಾಗದ 'ಮಧುವನ' ತಾಕಿಗೆ ಭೇಟಿ ನೀಡಿದ್ದ ರೈತರಿಗೆ, ವಿಜ್ಞಾನಿಗಳು ಹೊಸದಾಗಿ ಪರಿಚಯಿಸಿರುವ ಜೇನು ಕೃಷಿ ವಿಧಾನದ ಕುರಿತು ಹೀಗೆ ವಿವರಣೆ ನೀಡಿದರು. ಈ ಬಾರಿಯ ಕೃಷಿ ಮೇಳದಲ್ಲಿ ರೈತರಿಗೆ ಜೇನುಕೃಷಿ ಕುರಿತು ಪ್ರಾತ್ಯಕ್ಷಿಕೆಯ ಮೂಲಕ ವಿವರಣೆ ನೀಡಲು ವ್ಯವಸ್ಥೆ ಮಾಡಲಾಗಿತ್ತು.

ಸಾಮಾನ್ಯವಾಗಿ ಜೇನು ಪೆಟ್ಟಿಗೆಗಳಲ್ಲಿ ಮರದ ಚೌಕಟ್ಟುಗಳನ್ನು ಉಪಯೋಗಿಸಲಾಗುತ್ತದೆ. ಇದರಿಂದ ಜೇನುತುಪ್ಪ ಸಂಗ್ರಹವಾಗಲು ಹೆಚ್ಚುಸಮಯ ತೆಗೆದುಕೊಳ್ಳುತ್ತದೆ. ಆದರೆ ಪ್ಲಾಸ್ಟಿಕ್ ಫ್ರೇಮ್‌ಗಳ ಬಳಕೆಯಿಂದ ತ್ವರಿತವಾಗಿ ಜೇನು ಸಂಗ್ರಹಣೆಯಾಗುವುದರ ಜೊತೆಗೆ ಮೇಣದ ಪತಂಗದ ಹಾವಳಿಯನ್ನೂ ನಿಯಂತ್ರಿಸಬಹುದು ಎಂಬುದು ವಿಜ್ಞಾನಿಗಳ ಅಭಿಪ್ರಾಯ.

'ಈ ನೂತನ ವಿಧಾನವನ್ನು ಬೆಂಗಳೂರಿನ ಎಂಜಿನಿಯರ್ ಆನಂದರಾವ್ ಅಭಿವೃದ್ಧಿ ಪಡಿಸಿದ್ದಾರೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜೇನು ಕೃಷಿ ವಿಭಾಗ, ಇದನ್ನು ಪರೀಕ್ಷಿಸಿ, ಈ ಬಾರಿಯ ಕೃಷಿಮೇಳದಲ್ಲಿ ಬಿಡುಗಡೆ ಮಾಡಿದೆ' ಎಂದು ಜೇನು ಕೃಷಿ ವಿಭಾಗದ ವಿಜ್ಞಾನಿ ಕೆ.ಟಿ.ವಿಜಯಕುಮಾರ್ ತಿಳಿಸಿದರು.

'ಜಿಕೆವಿಕೆಯ ಮಧುವನದಲ್ಲಿ ಎರಡು ವರ್ಷ ಈ ವಿಧಾನವನ್ನು ಪರೀಕ್ಷಿಸಲಾಗಿದೆ. ಆಹಾರ ಶ್ರೇಣಿಯ ಗುಣಮಟ್ಟದ ಪ್ಲಾಸ್ಟಿಕ್ ಬಳಸಿ ಈ ಫ್ರೇಮ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

'ಪ್ಲಾಸ್ಟಿಕ್ ಫ್ರೇಮ್‌ಗಳನ್ನು ದೀರ್ಘಕಾಲ ಬಳಸಬಹುದು. ಇದು ಜೇನು ಹುಳುಗಳಿಗೆ ಗೂಡುಕಟ್ಟುವ ಕೆಲಸದ ಅವಧಿಯನ್ನು ಕಡಿಮೆಮಾಡುತ್ತದೆ. ಮಾತ್ರವಲ್ಲ, ಸುಲಭವಾಗಿ ಜೇನು ಪೆಟ್ಟಿಗೆಗಳಿಗೆ ಅಳವಡಿಸಬಹುದಾಗಿದ್ದು, ಕೇವಲ ಜೇನುಸಂಗ್ರಹ ಭಾಗದಲ್ಲಿ ಮಾತ್ರ ಉಪಯೋಗಿಸಬಹುದಾಗಿದೆ. ಉಳಿದಂತೆ ಸಂಸಾರ ಕೋಣೆಯಲ್ಲಿ (ಬ್ರೂಡ್) ಸಾಮಾನ್ಯವಾದ ಮರದ ಚೌಕಟ್ಟುಗಳನ್ನು ಬಳಕೆ ಮಾಡಬಹುದು' ಎಂದು ಅವರು ವಿವರಿಸಿದರು.

ಜೇನು ಕೃಷಿ ವಿಭಾಗದ ವಿಜ್ಞಾನಿ ಕೆ.ಟಿ.ವಿಜಯಕುಮಾರ್ ಅವರು ಜೇನುಪೆಟ್ಟಿಗೆಯಲ್ಲಿ ಪ್ಲಾಸ್ಟಿಕ್ ಫ್ರೇಮ್‌ಗಳ ಬಳಕೆ ಕುರಿತು ಆಸಕ್ತರಿಗೆ ಮಾಹಿತಿ ನೀಡಿದರು

ತರಬೇತಿ

ಜೇನುಕೃಷಿ ಕುರಿತು ತರಬೇತಿ, ಮಾಹಿತಿ ಹಾಗೂ ಉಪಕರಣಗಳಿಗಾಗಿ ಕೃಷಿ ವಿಶ್ವವಿದ್ಯಾಲಯದ ಜೇನುಕೃಷಿ ವಿಭಾಗ- 080-23636766, 9986051852 ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

ಸಿ.ಎಂ ಶೇ 100 ರಷ್ಟು ಭ್ರಷ್ಟ: ಅಶೋಕ

ಪ್ರಜಾವಾಣಿ ವಾರ್ತೆ

ಅಶೋಕ

ಬೆಂಗಳೂರು: 'ಶೇ 40 ಲಂಚದ ಕುರಿತು ಸುಳ್ಳು ಹೇಳಿ ಅಧಿಕಾರಕ್ಕೆ ಬಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಈಗ ಶೇ 100ರಷ್ಟು ಭ್ರಷ್ಟರಾಗಿದ್ದಾರೆ' ಎಂದು ವಿರೋಧಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಅಂಬಿಕಾಪತಿ ಮತ್ತು ಕಾಂಗ್ರೆಸ್ ಟೂಲ್‌ಕಿಟ್ ಚುನಾವಣೆ ಮೊದಲು ಸುಳ್ಳಿನ ಗೋಪುರ ಕಟ್ಟಿದ್ದರು. ಅದು ಈಗ ಕುಸಿದು ಹೋಗಿದೆ ಎಂದು ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ವಕ್ಫ್ ಹೆಸರಿನಲ್ಲಿ ರೈತರ ಜಮೀನಿನ ಮೇಲೆ, ಸರ್ಕಾರಿ ಆಸ್ತಿಗಳ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ಮಿತಿ ಮೀರುತ್ತಿದೆ. ಚಿಕ್ಕಬಳ್ಳಾಪುರದಲ್ಲಿ ಉಳುಮೆ ಮಾಡಲು ಬಂದಿದ್ದ ರೈತರ ಮೇಲೆ ಮತಾಂಧರು ಹಲ್ಲೆ ಮಾಡಿ, ಬೇಲಿ ಕಿತ್ತು ಹಾಕಿದ್ದಾರೆ. ಸಿದ್ದರಾಮಯ್ಯ ಈಗ ಅಹಿಂದ ಚಾಂಪಿಯನ್ ಅಲ್ಲ, ಮುಸ್ಲಿಮರ ಚಾಂಪಿಯನ್' ಎಂದು ಹೇಳಿದರು.

ಕಾರಜೋಳ ಅಸಮಾಧಾನ: ವಕ್ಫ್ ವಿರುದ್ಧದ ಹೋರಾಟದಲ್ಲಿ ತಮ್ಮ ಹೆಸರನ್ನು ಶನಿವಾರ ಸೇರಿಸದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸಂಸದ ಗೋವಿಂದ ಕಾರಜೋಳ, ಪಟ್ಟಿ ಮಾಡುವವರಿಗೆ ಅನುಭವದ ಕೊರತೆ ಇದೆ ಎಂದರು.

ಅಬಕಾರಿ ಇಲಾಖೆಯಲ್ಲಿನ ₹700 ಕೋಟಿ ಭ್ರಷ್ಟಾಚಾರ ಆರೋಪಕ್ಕೆ ಸಾಕ್ಷಿ ಬೇಕಾದರೆ ಎಸ್‌ಐಟಿ ರಚನೆ ಮಾಡಿ ತನಿಖೆ ನಡೆಸಲಿ

ಆರ್.ಅಶೋಕ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

ದಾಸ ಸಾಹಿತ್ಯಕ್ಕೆ ಪ್ರಾಧಾನ್ಯ ಸಿಕ್ಕಿಲ್ಲ: ಪಾರ್ಥಸಾರಥಿ

ಪ್ರಜಾವಾಣಿ ವಾರ್ತೆ


ಅರಳುಮಲ್ಲಿಗೆ ಪಾರ್ಥಸಾರಥಿ

ಬೆಂಗಳೂರು: 'ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯವನ್ನು ತುಲನಾತ್ಮಕವಾಗಿ ನೋಡಿದರೆ, ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ವಚನ ಸಾಹಿತ್ಯಕ್ಕೆ ನೀಡಿದ ಪ್ರಾಧಾನ್ಯವನ್ನು ದಾಸ ಸಾಹಿತ್ಯಕ್ಕೆ ನೀಡಿಲ್ಲ' ಎಂದು ವಿದ್ವಾಂಸ ಅರಳುಮಲ್ಲಿಗೆ ಪಾರ್ಥಸಾರಥಿ ಬೇಸರ ವ್ಯಕ್ತಪಡಿಸಿದರು.

ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ ಟ್ರಸ್ಟ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಆರನೇ ಅಖಿಲ ಭಾರತ ಹರಿದಾಸ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷತೆ ವಹಿಸಿ ಮಾತನಾಡಿದರು.

'ನಮ್ಮ ನಾಡಿನ ದೇಸಿ ಸಾಹಿತ್ಯದ ಬಗ್ಗೆ ಸರ್ಕಾರಗಳಿಗೆ ಪ್ರೀತಿ ಇರಬೇಕು. ಆದರೆ, ಸರ್ಕಾರ, ವಿಶ್ವವಿದ್ಯಾಲಯಗಳು ದಾಸ ಸಾಹಿತ್ಯಕ್ಕೆ ಪ್ರಾಮುಖ್ಯತೆಯನ್ನೇ ನೀಡಿಲ್ಲ. ಪುರಂದರ ದಾಸರು, ಹರಿದಾಸರ ಕಳೆದುಹೋದ ಹಾಡುಗಳನ್ನು ಹುಡುಕುವ ಪ್ರಯತ್ನವನ್ನು ಈವರೆಗೆ ಯಾವುದೇ ಸರ್ಕಾರ ಮಾಡಿಲ್ಲ. ಈ ಬಗ್ಗೆ ವಿಶ್ವವಿದ್ಯಾಲಯಗಳಿಂದಲೂ ಅಷ್ಟಾಗಿ ಸಂಶೋಧನೆಗಳು ನಡೆದಿಲ್ಲ. ಜನರ ಮನಸ್ಸನ್ನು ಮುಟ್ಟುವ ಶಕ್ತಿ ದಾಸ ಸಾಹಿತ್ಯಕ್ಕಿದ್ದು, ಮಾನವೀಯ ಮೌಲ್ಯವನ್ನು ಒಳಗೊಂಡಿದೆ. ವಚನ ಸಾಹಿತ್ಯವು ಎಲ್ಲರನ್ನೂ ಒಳಗೊಳ್ಳುತ್ತದೆ. ಈ ಸಾಹಿತ್ಯದಲ್ಲಿಯೂ ಮಡಿವಂತಿಕೆ ಬಿಟ್ಟು, ಎಲ್ಲರನ್ನೂ ಒಳಗೊಂಡು ಸಾಗಬೇಕು' ಎಂದರು.

ಬಾಳಗಾರು ಮಠದ ಅಕ್ಷೋಭ್ಯರಾಮಪ್ರಿಯ ತೀರ್ಥ ಸ್ವಾಮೀಜಿ, 'ಹಲವು ಜ್ಞಾನ ಶಿಸ್ತುಗಳ ಆಧಾರದಲ್ಲಿ ಹರಿದಾಸ ಸಾಹಿತ್ಯದ ಅಧ್ಯಯನ ಆರಂಭವಾಗಿ ಹತ್ತಾರು ವರ್ಷಗಳೇ ಕಳೆದಿವೆ. ಹರಿದಾಸರ ಕೃತಿಗಳಲ್ಲಿ ಬಂದಿರುವ ವಿಷಯಗಳಿಗೆ ಸಂಬಂಧಿಸಿದಂತೆ ಶಾಸನಗಳು, ಚಾರಿತ್ರಿಕ ಕಾವ್ಯ, ಸ್ಮಾರಕ, ಪ್ರತಿಮೆ, ನಾಣ್ಯಗಳಿವೆ. ಅವುಗಳ ಅಧ್ಯಯನ ಕೈಗೊಂಡರೆ ಕೃತಿಗಳನ್ನು ರಚಿಸಲು ಸಾಧ್ಯ. ಇದಕ್ಕೆ ವಿದ್ವಾಂಸರ ಪಡೆ ಹಾಗೂ ವಿಶ್ವವಿದ್ಯಾಲಯಗಳ ಬೆಂಬಲಬೇಕು' ಎಂದು ಹೇಳಿದರು.

'ಮೂಗು ಮುಚ್ಚಿ ಕೂರಲಿಲ್ಲ'

'ಹರಿದಾಸರು ಜನರ ಮಧ್ಯೆಯೇ ಇದ್ದರು. ಯಾವತ್ತೂ ಮೂಗು ಮುಚ್ಚಿಕೊಂಡು ಮನೆ, ಮಠಗಳಲ್ಲಿ ಕುಳಿತುಕೊಳ್ಳಲಿಲ್ಲ. ಕಾಯಕ ಧರ್ಮವನ್ನು, ಮನುಷ್ಯ ಜನ್ಮದ ಘನತೆಯನ್ನು ಹಾಡುಗಳಲ್ಲಿ ಎತ್ತಿ ಹಿಡಿದರು. ಬದುಕುವ ಕಲೆಯನ್ನು ಮನೆ ಮನಕ್ಕೆ ತಲುಪಿಸಿ, ಬದುಕನ್ನು ಬಂಗಾರ ಮಾಡಿದರು' ಎಂದು ವಿದ್ವಾಂಸ ಅರಳುಮಲ್ಲಿಗೆ ಪಾರ್ಥಸಾರಥಿ ಅಭಿಪ್ರಾಯಪಟ್ಟರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

'ಲಾಲ್‌ಬಾಗ್: ಪಾದಚಾರಿ ಮಾರ್ಗ ವಿಸ್ತರಿಸಿ'

ಲಾಲ್‌ಬಾಗ್ ಪಶ್ಚಿಮ ದ್ವಾರದ ಕೃಂಬಿಗಲ್ ರಸ್ತೆಯ ಪಾದಚಾರಿ ಮಾರ್ಗ

ಲಾಲ್‌ಬಾಗ್ ಪಶ್ಚಿಮ ದ್ವಾರದ ಕೃಂಬಿಗಲ್ ರಸ್ತೆಗೆ ಹೊಂದಿಕೊಂಡಿರುವ ಪಾದಚಾರಿ ಮಾರ್ಗವನ್ನು ವಿಸ್ತರಿಸಬೇಕು. ಲಾಲ್‌ಬಾಗ್ ಪಶ್ಚಿಮ ದ್ವಾರದಿಂದ ಆರ್.ವಿ. ಪಬ್ಲಿಕ್ ಶಾಲೆಯ ಕಾಂಪೌಂಡ್ ಬಳಿ ಬರುವಾಗ ಕೃಂಬಿಗಲ್ ರಸ್ತೆಯಿಂದ ವಾಹನಗಳು ವೇಗವಾಗಿ ಬರುತ್ತವೆ. ಇಲ್ಲಿಂದ ಬರುವ ವಾಹನಗಳು ಪಾದಚಾರಿಗಳಿಗೆ ಸರಿಯಾಗಿ ಕಾಣಿಸುವುದಿಲ್ಲ. ಇದರಿಂದ, ಪಾದಚಾರಿಗಳು, ವಾಯುವಿಹಾರಿಗಳು ಈ ರಸ್ತೆ ದಾಟಲು ಹರಸಾಹಸ ಪಡುತ್ತಿದ್ದಾರೆ. ಆದ್ದರಿಂದ, ಲಾಲ್‌ಬಾಗ್ ಕಾಂಪೌಂಡ್‌ನ ಒಂದು ಮೂಲೆಯನ್ನು ಒಡೆದು ಹಾಕಿ ಪಾದಚಾರಿ ಮಾರ್ಗವನ್ನು ವಿಸ್ತರಿಸಬೇಕು.

ಎಂ.ಜಿ. ಶ್ರೀನಿವಾಸ, ವಿ.ವಿ.ಪುರ

'ಕಿತ್ತು ಹೋದ ಕಾಂಕ್ರೀಟ್ ಸ್ಲ್ಯಾಬ್‌ಗಳು'

ಬಾಗಲೂರು ಕ್ರಾಸ್‌ನಿಂದ ರೇವಾ ಕಾಲೇಜಿನ ವೃತ್ತದವರೆಗೂ ಇರುವ ಚರಂಡಿಗೆ ಹಾಕಿದ್ದ ಕಾಂಕ್ರೀಟ್ ಸ್ಲ್ಯಾಬ್‌ಗಳು ಕಿತ್ತು ಹೋಗಿವೆ. ಬಾಯ್ತೆರೆದುಕೊಂಡಿರುವ ಚರಂಡಿಯಲ್ಲಿ ಸಾರ್ವಜನಿಕರು ಕಸ ತಂದು ಸುರಿಯುತ್ತಿದ್ದಾರೆ. ಇದರಿಂದ, ಚರಂಡಿಯಲ್ಲಿ ಹರಿಯುವ ತ್ಯಾಜ್ಯ ನೀರು ಕಟ್ಟಿಕೊಂಡು ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಜೊತೆಗೆ ಪಾದಚಾರಿಗಳ ಓಡಾಟಕ್ಕೂ ಸಮಸ್ಯೆ ಆಗಿದೆ. ಈ ಬಗ್ಗೆ ಬಿಬಿಎಂಪಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಕೂಡಲೇ ಚರಂಡಿ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.

ಕಿರಣ್ ವಿ., ಬಾಗಲೂರು

ಬಾಗಲೂರಿನ ರಸ್ತೆ ಬದಿಯಲ್ಲಿರುವ ಚರಂಡಿಗೆ ಹಾಕಿದ್ದ ಕಾಂಕ್ರೀಟ್ ಸ್ಲ್ಯಾಬ್‌ಗಳು ಕಿತ್ತು ಹೋಗಿವೆ

'ಅವೆನ್ಯೂ ರಸ್ತೆ ಗುಂಡಿ ಮುಚ್ಚಿ'

ಅವೆನ್ಯೂ ರಸ್ತೆಯಲ್ಲಿನ ಗುಂಡಿಗಳು

ಮೆಜೆಸ್ಟಿಕ್, ಕೆ.ಆರ್. ಮಾರುಕಟ್ಟೆ ಹಾಗೂ ಕಬ್ಬನ್‌ಪೇಟೆ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಅವೆನ್ಯೂ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ. ಅವೆನ್ಯೂ ರಸ್ತೆಯ ಕೃಷ್ಣ ಬಿಲ್ಡಿಂಗ್ ಮುಂಭಾಗದ ರಸ್ತೆಯಲ್ಲಿ ಹೆಜ್ಜೆ-ಹೆಜ್ಜೆಗೊಂದು ಗುಂಡಿಗಳು ಬಾಯ್ತೆರೆದುಕೊಂಡಿವೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿ ಬಿದ್ದ ಕಾರಣ ನಿತ್ಯವೂ ಸಂಚಾರ ದಟ್ಟಣೆ ಆಗುತ್ತಿದೆ. ಕೆಲವೊಮ್ಮೆ ಅಪಘಾತಗಳು ಸಂಭವಿಸುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇಲ್ಲಿನ ರಸ್ತೆಯನ್ನು ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್, ಕಬ್ಬನ್‌ಪೇಟೆ

'ಸಾರಿಗೆ ಕಚೇರಿ: ವಾಹನಗಳ ತೆರವುಗೊಳಿಸಿ'

ಕೃಷ್ಣರಾಜಪುರ ಆರ್‌ಟಿಒ ಕಚೇರಿ (ಮೇಡಹಳ್ಳಿ) ಮುಂಭಾಗದಲ್ಲಿ ನಿಲ್ಲಿಸಿರುವ ವಾಹನಗಳು

ಬಿಬಿಎಂಪಿಯ ಬಸವನಪುರ ವಾರ್ಡ್‌ನ ಮೇಡಹಳ್ಳಿ ಬಳಿ ಇರುವ ಕೃಷ್ಣರಾಜಪುರ ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಒ) ಮುಂಭಾಗದಲ್ಲಿ ವಿವಿಧ ಪ್ರಕರಣಗಳಲ್ಲಿ ಮುಟ್ಟುಗೋಲು ಹಾಕಿಕೊಂಡಿರುವ ವಾಹನಗಳನ್ನು ನಿಲುಗಡೆ ಮಾಡಲಾಗಿದೆ. ಇದರಿಂದ, ಕಚೇರಿಗೆ ಭೇಟಿ ನೀಡುವ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಆರ್‌ಟಿಒ ಕಚೇರಿ ಮುಂಭಾಗದಲ್ಲಿರುವ ಈ ವಾಹನಗಳನ್ನು ಕೂಡಲೇ ತೆರವುಗೊಳಿಸಬೇಕು. ಕಚೇರಿಗೆ ಬರುವ ಸಾರ್ವಜನಿಕರ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಬೇಕು. ಈ ಬಗ್ಗೆ ಆರ್‌ಟಿಒ ಅಧಿಕಾರಿಗಳು ಗಮನ ಹರಿಸಬೇಕು.

ಕಿರಣ್ ಕುಮಾರ್ ಜೆ., ಮೇಡಹಳ್ಳಿ

ದೆಹಲಿಯಲ್ಲಿ ನಡೆದ ರಾಷ್ಟ್ರ ಮಟ್ಟದ ಕಚ್ಚಾ ಬಾಂಬ್ ಪತ್ತೆ ಸ್ಪರ್ಧೆ

ರಾಜ್ಯ ತಂಡಕ್ಕೆ 12 ವಿಭಾಗಗಳಲ್ಲಿ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಭದ್ರತಾ ದಳ (ಎನ್‌ಎಸ್‌ಜಿ) ಈಚೆಗೆ ನಡೆಸಿದ, ರಾಷ್ಟ್ರಮಟ್ಟದ ಕಚ್ಚಾಬಾಂಬ್ (ಐಇಡಿ) ಪತ್ತೆ ಸ್ಪರ್ಧೆಯಲ್ಲಿ ಕರ್ನಾಟಕ ಪೊಲೀಸ್ ಆಂತರಿಕ ಭದ್ರತಾ ವಿಭಾಗದ ಐಇಡಿ ಪತ್ತೆ ತಂಡವು ಹಲವು ಪ್ರಶಸ್ತಿಗಳನ್ನು ಗೆದ್ದುಕೊಂಡಿದೆ.

ಎನ್‌ಎಸ್‌ಜಿಯು ದೆಹಲಿಯಲ್ಲಿ ಇದೇ 11ರಿಂದ 16ವರೆಗೆ ಸ್ಪರ್ಧೆಯನ್ನು ಆಯೋಜಿಸಿತ್ತು. ಐದು ಅರೆಸೇನಾ ಪಡೆಗಳು, 18 ರಾಜ್ಯಗಳು ಮತ್ತು 2 ಕೇಂದ್ರಾಡಳಿತ ಪ್ರದೇಶಗಳ ವಿಶೇಷ ಪಡೆಗಳು ಹಾಗೂ ಪೊಲೀಸ್ ಪಡೆಗಳು ಭಾಗಿಯಾಗಿದ್ದವು.

ಕಚ್ಚಾ ಬಾಂಬ್ ಪತ್ತೆ, ಬಾಂಬ್ ನಿಷ್ಕ್ರಿಯ, ಬಾಂಬ್ ಪತ್ತೆ ನಿರ್ವಹಣೆ ಕಾರ್ಯಾಚರಣೆಯ ಪ್ರಶ್ನೋತ್ತರ ಮತ್ತು ಪ್ರಾಯೋಗಿಕ ಸೇರಿ ಒಟ್ಟು 12 ವಿಭಾಗಗಳಲ್ಲಿ ಸ್ಪರ್ಧೆ ನಡೆದಿತ್ತು. ರಾಜ್ಯದ ತಂಡವು ಎಲ್ಲಾ ವಿಭಾಗಗಳಲ್ಲೂ ಮೊದಲ ಸ್ಥಾನ ಪಡೆದಿದೆ.

ಪ್ರಶಸ್ತಿಯೊಂದಿಗೆ ರಾಜ್ಯ ಪೊಲೀಸ್ ಪಡೆಯ ಆಂತರಿಕಾ ಭದ್ರತಾ ವಿಭಾಗದ 'ಕಚ್ಚಾ ಬಾಂಬ್ ಪತ್ತೆ ತಂಡ'

ಡೇಟಿಂಗ್ ಆ್ಯಪ್‌ನಲ್ಲಿ ಪರಿಚಯ: ಮಡಿವಾಳ ಠಾಣೆಗೆ ಯುವತಿ ದೂರು

ನಂಬಿಸಿ ಅತ್ಯಾಚಾರ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡೇಟಿಂಗ್ ಆ್ಯಪ್‌ನಲ್ಲಿ ಪರಿಚಯವಾದ ಯುವಕನೊಬ್ಬ ಮದುವೆ ಆಗುವುದಾಗಿ ನಂಬಿಸಿ ಅತ್ಯಾಚಾರ ಎಸಗಿದ್ದಾನೆ' ಎಂದು ಆರೋಪಿಸಿ, ಸಂತ್ರಸ್ತೆ ಮಡಿವಾಳ ಠಾಣೆಗೆ ದೂರು ನೀಡಿದ್ದಾರೆ.

ಯುವಕನ ವಿರುದ್ಧ 24 ವರ್ಷದ ಸಂತ್ರಸ್ತೆ ದೂರು ನೀಡಿದ್ದು, ವಿಚಾರಣೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

'ಡೇಟಿಂಗ್ ಆ್ಯಪ್‌ನಲ್ಲಿ ಯುವಕ-ಯುವತಿ ಮಧ್ಯೆ ಪರಿಚಯ ಆಗಿತ್ತು. ಕೆಲವು ದಿನಗಳ ಬಳಿಕ ಇಬ್ಬರು ಮೊಬೈಲ್ ಸಂಖ್ಯೆಯನ್ನು ಪರಸ್ಪರ ಬದಲಾವಣೆ ಮಾಡಿಕೊಂಡಿದ್ದರು. ಇಬ್ಬರೂ ವಾಟ್ಸ್‌ಆ್ಯಪ್‌ನಲ್ಲಿ ಚಾಟಿಂಗ್ ನಡೆಸುತ್ತಿದ್ದರು. ಇಬ್ಬರ ಮಧ್ಯೆ ಆತ್ಮೀಯತೆ ಬೆಳೆದು ಪ್ರೀತಿಸುತ್ತಿದ್ದರು. ಕೆಲವು ಸ್ಥಳಗಳಲ್ಲಿ ಸುತ್ತಾಟ ಸಹ ನಡೆಸಿದ್ದರು' ಎಂದು ಮೂಲಗಳು ತಿಳಿಸಿವೆ.

'ಪಾರ್ಟಿ ನೆಪದಲ್ಲಿ ಹೋಟೆಲ್‌ವೊಂದಕ್ಕೆ ಕರೆದೊಯ್ದು ಜ್ಯೂಸ್‌ನಲ್ಲಿ ಮದ್ಯ ಬೆರೆಸಿ, ಅರೆಪ್ರಜ್ಞಾ ಸ್ಥಿತಿಯಲ್ಲಿದ್ದ ನನ್ನ ಮೇಲೆ ಯುವಕ ಅತ್ಯಾಚಾರ ಎಸಗಿದ್ದಾನೆ. ಮದುವೆ ಆಗುತ್ತೇನೆ ಎಂದು ನಂಬಿಸಿ ಗರ್ಭಪಾತ ಮಾಡಿಸಿದ್ದ. ಈಗ ಮದುವೆ ಆಗದೇ ಮೋಸ ಮಾಡಿದ್ದಾನೆ' ಎಂದು ಸಂತ್ರಸ್ತೆ ದೂರು ನೀಡಿದ್ದಾರೆ.

'ಸಂತ್ರಸ್ತೆ ಹಾಗೂ ಯುವಕನಿಂದ ಮಾಹಿತಿ ಪಡೆಯಲಾಗಿದೆ. ಸಂತ್ರಸ್ತೆ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಕಾನೂನು ತಜ್ಞರ ಸಲಹೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

ನೇಣು ಹಾಕಿಕೊಂಡು ಯುವತಿ ಆತ್ಮಹತ್ಯೆ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯ ಕುರುಬರಹಳ್ಳಿ ಜೆ.ಸಿ. ನಗರದ ಬಾಡಿಗೆ ಮನೆಯಲ್ಲಿ ನೆಲಸಿದ್ದ ಯುವತಿ ನೇಣುಹಾಕಿಕೊಂಡು ಭಾನುವಾರ ಮಧ್ಯಾಹ್ನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಐಶ್ವರ್ಯಾ(18) ಆತ್ಮಹತ್ಯೆ ಮಾಡಿಕೊಂಡ ಯುವತಿ.

'ಯಾದಗಿರಿಯ ಐಶ್ವರ್ಯಾ ಅವರು ತಮ್ಮ ಕುಟುಂಬದ ಸದಸ್ಯರ ಜತೆಗೆ ನಗರಕ್ಕೆ ಬಂದಿದ್ದರು. ಕುಟುಂಬಸ್ಥರು ಜೀವನ ನಿರ್ವಹಣೆಗಾಗಿ ಬೇರೆ ಬೇರೆ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದರು. ಭಾನುವಾರ ಮಧ್ಯಾಹ್ನ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ಯುವತಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಐಶ್ವರ್ಯಾ ಅವರ ಸಹೋದರ ಸಂಜೆ ಮನೆಗೆ ಬಂದು ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಕುಟುಂಬಸ್ಥರಿಂದ ಮಾಹಿತಿ ಪಡೆಯಲಾಗಿದೆ. ಯಾವ ಕಾರಣಕ್ಕೆ ಯುವತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಗೊತ್ತಾಗಿಲ್ಲ' ಎಂದು ಪೊಲೀಸರು ತಿಳಿಸಿದರು.

ಮಾಲೀಕರು ಮನೆಯಲ್ಲಿದ್ದಾಗಲೇ ಚಿನ್ನ ಕಳವು

ಅಪರಾಧ ಸುದ್ದಿ

ಬೆಂಗಳೂರು: ಮಾಲೀಕರು ಮನೆಯ ಒಳಗಿದ್ದ ವೇಳೆಯೇ ನುಗ್ಗಿ ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡಿದ್ದ ಆರೋಪಿಯನ್ನು ಶಂಕರಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಶಂಕರಪುರದ ನಿವಾಸಿ ಅಫ್ರಿದಿ ಬಂಧಿತ.

ಬಸವನಗುಡಿಯ ಉತ್ತರಾದಿ ಮಠ ರಸ್ತೆಯ ನಿವಾಸಿ ಸಮೀರ್ ಆರ್. ಕಟ್ಟಿ ಅವರ ಮನೆಯಲ್ಲಿ 20 ಗ್ರಾಂ. ಬಂಗಾರ ಮತ್ತು ₹67 ಸಾವಿರ ನಗದು ದೋಚಿ ಆರೋಪಿ ಪರಾರಿಯಾಗಿದ್ದ. ಮನೆ ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಏಕಾದಶಿಯ ದಿನ ಸಮೀರ್ ಅವರ ತಾಯಿ ಹಾಗೂ ಅವರ ಸ್ನೇಹಿತೆಯರು ಅಡುಗೆ ಕೋಣೆಯಲ್ಲಿ ರಾಮಭಜನೆ ಮಾಡುತ್ತಿದ್ದರು. ಸಮೀರ್ ಮಹಡಿಯ ಕೋಣೆಯಲ್ಲಿ ಇದ್ದರು. ಅದೇ ಸಂದರ್ಭದಲ್ಲಿ ಮನೆಯೊಳಗೆ ಬಂದಿದ್ದ ಕಳ್ಳ, ಸಮೀರ್ ತಂದೆ ಇರುವ ಕೋಣೆಯ ಒಳಗೆ ಹೋಗಿದ್ದ. ನಿದ್ರೆಯಲ್ಲಿದ್ದ ಅವರನ್ನು ನೋಡಿ, ಕೊಠಡಿಯಲ್ಲಿದ್ದ ಮೊಬೈಲ್, ₹ 67,500 ನಗದು, ಚಿನ್ನದ ಉಂಗುರ ಹಾಗೂ ಒಂದು ಚಿನ್ನದ ನಾಣ್ಯ ಕದ್ದು ಪರಾರಿ ಆಗಿದ್ದ. ಆರೋಪಿಯ ಚಲನವಲನ ಮನೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಆ ದೃಶ್ಯಾವಳಿ ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಹೇಳಿದರು.

ಸಂಚಾರ ನಿಯಮ ಉಲ್ಲಂಘನೆ: 1,507 ಪ್ರಕರಣ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿರುವ ಬೈಕ್ ಸವಾರರು ಹಾಗೂ ವಾಹನ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಿರುವ ನಗರ ಸಂಚಾರ ವಿಭಾಗದ ಪೊಲೀಸರು, 1,507 ಪ್ರಕರಣ ದಾಖಲಿಸಿಕೊಂಡು ₹7.62 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ಅನಧಿಕೃತವಾಗಿ ವಾಹನ ನಿಲುಗಡೆ ಮಾಡುತ್ತಿದ್ದವರ ವಿರುದ್ಧ 127 ಪ್ರಕರಣ ದಾಖಲಿಸಿಕೊಂಡು, ₹64 ಸಾವಿರ ದಂಡ ಸಂಗ್ರಹಿಸಿದ್ದಾರೆ.

ಪ್ರವೇಶ ನಿಷೇಧಿತ ರಸ್ತೆಗಳಲ್ಲಿ ಸಂಚರಿಸುತ್ತಿದ್ದವರ ವಿರುದ್ಧ 722 ಪ್ರಕರಣ ದಾಖಲಿಸಿಕೊಂಡು, ₹3.66 ಲಕ್ಷ ದಂಡ ಸಂಗ್ರಹಿಸಿದ್ದಾರೆ. ಪಾದಚಾರಿ ಮಾರ್ಗದಲ್ಲಿ ಬೈಕ್ ಚಾಲನೆ ಮಾಡುತ್ತಿದ್ದವರ ವಿರುದ್ಧ 68 ಪ್ರಕರಣ ದಾಖಲಿಸಿಕೊಂಡು, ₹34 ಸಾವಿರ ದಂಡ ಸಂಗ್ರಹಿಸಲಾಗಿದೆ.

ಏಕಮುಖ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ವಾಹನ ಚಾಲನೆ ಮಾಡಿದ ಆರೋಪದಡಿ 590 ಪ್ರಕರಣ ದಾಖಲಿಸಿಕೊಂಡು, ₹29 ಸಾವಿರ ದಂಡ ಸಂಗ್ರಹಿಸಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ರ್‍ಯಾಗಿಂಗ್‌ನಿಂದ ಸಾವು

ಪಾಟನ್ (ಪಿಟಿಐ): ಗುಜರಾತ್‌ನ ಪಾಟನ್ ಜಿಲ್ಲೆಯ ವೈದ್ಯಕೀಯ ಕಾಲೇಜಿನಲ್ಲಿ 18 ವರ್ಷದ ಎಂಬಿಬಿಎಸ್ ವಿದ್ಯಾರ್ಥಿಯೊಬ್ಬ ಹಿರಿಯ ವಿದ್ಯಾರ್ಥಿಗಳು ಮಾಡಿದ ರ್‍ಯಾಗಿಂಗ್‌ನಿಂದ ಮೃತಪಟ್ಟಿದ್ದಾರೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಮೃತರನ್ನು ಪಾಟನ್‌ನ ಜಿಎಂಇಆರ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಪ್ರಥಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿ ಅನಿಲ್ ಮೆಥನಿಯಾ ಎಂದು ಗುರುತಿಸಲಾಗಿದೆ.

'ಶನಿವಾರ ರಾತ್ರಿ ಹಾಸ್ಟೆಲ್‌ನಲ್ಲಿ ಹಿರಿಯ ವಿದ್ಯಾರ್ಥಿಗಳು ತನ್ನ ಪರಿಚಯ ಮಾಡಿಕೊಳ್ಳುವಂತೆ ಹೇಳಿ ಮೂರು ಗಂಟೆ ನಿಲ್ಲಿಸಿದ ಪರಿಣಾಮ ಅನಿಲ್ ಪ್ರಜ್ಞೆ ತಪ್ಪಿ ಬಿದ್ದು ಮೃತಪಟ್ಟಿದ್ದಾರೆ. ರ್‍ಯಾಗಿಂಗ್ ವಿರೋಧಿ ಸಮಿತಿಯು ಕಾಲೇಜಿನಲ್ಲಿ ತನಿಖೆ ನಡೆಸುತ್ತಿದ್ದು, ಘಟನೆಗೆ ಹಿರಿಯ ವಿದ್ಯಾರ್ಥಿಗಳು ಕಾರಣರಾಗಿದ್ದಾರೆ ಅವರ ವಿರುದ್ಧ ಕಠಣ ಕ್ರಮ ಕೈಗೊಳ್ಳಲಾಗುವುದು' ಎಂದು ಕಾಲೇಜಿನ ಡೀನ್ ಡಾ.ಹಾರ್ದಿಕ್ ಶಾ ತಿಳಿಸಿದರು.

ಗಾಯಾಳು ಸಾವು ಆರೋಪಿ ಪ್ರಜ್ವಲ್ ಸೆರೆ

ಶಿರ್ವ: ಶಿರ್ವ ಪೊಲೀಸ್ ಠಾಣಾ ವ್ಯಾಪ್ತಿಯ ಬೆಳಪು ಪುಂಚಲಕಾಡು ಸಮೀಪ ಸಂಭವಿಸಿದ ಕಾರು ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿಯನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದ ಆರೋಪದ ಮೇಲೆ ಪ್ರಜ್ವಲ್ ಎಂಬುವರನ್ನು ಭಾನುವಾರ ಪೊಲೀಸರು ಬಂಧಿಸಿದ್ದಾರೆ.

ಇವರು ಕಾಂಗ್ರೆಸ್ ಮುಖಂಡ, ಬೆಳಪು ಗ್ರಾಮದ ದೇವಿಪ್ರಸಾದ್ ಶೆಟ್ಟಿ ಅವರ ಪುತ್ರ. ನ.14ರಂದು ಬೆಳಪುವಿನಲ್ಲಿ ದ್ವಿಚಕ್ರ ವಾಹನಕ್ಕೆ ಕಾರು ಡಿಕ್ಕಿಯಾಗಿ ಮೊಹಮ್ಮದ್ ಹುಸೇನ್ (39) ಎಂಬುವರು ತೀವ್ರವಾಗಿ ಗಾಯಗೊಂಡಿದ್ದರು. ಅವರು ಭಾನುವಾರ ಮೃತಪಟ್ಟಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಪ್ರಜ್ವಲ್ ಅವರನ್ನು ಕಾರು ಸಮೇತ ಪೊಲೀಸರು ಬಂಧಿಸಿದ್ದಾರೆ.

ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸದೆ, ಕಾರು ಚಾಲಕ ಕಾರಿನೊಂದಿಗೆ ಪರಾರಿಯಾಗಿದ್ದು, ಈ ಬಗ್ಗೆ ಮೊಹಮ್ಮದ್ ಹುಸೇನ್ ಅವರ ತಂದೆ ಉಮ್ಮರಬ್ಬ ಶಿರ್ವ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಶಿರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿಯಿಂದ ಭುವನೇಶ್ವರಿ ವಿಗ್ರಹ ವಿರೂಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವನ್‌ಭಿಮಾ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ನ್ಯೂ ತಿಪ್ಪಸಂದ್ರ ಮುಖ್ಯ ರಸ್ತೆಯ ಲಕ್ಷ್ಮಿ ಭುವನೇಶ್ವರಿ ವಿಗ್ರಹ ವಿರೂಪಗೊಳಿಸಿದ್ದು ಬಾಲಕ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ದೇವರ ವಿಗ್ರಹವನ್ನು ಕಿಡಿಗೇಡಿಗಳು ವಿರೂಪಗೊಳಿಸಿದ್ದಾರೆ ಎಂದು ಸ್ಥಳೀಯರು ಪೊಲೀಸರಿಗೆ ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಿದಾಗ ವಿಗ್ರಹ ವಿರೂಪಗೊಳಿಸಿದ್ದು, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಎಂಬುದು ಗೊತ್ತಾಯಿತು ಎಂದು ಪೊಲೀಸರು ಹೇಳಿದರು.

'ಠಾಣಾ ವ್ಯಾಪ್ತಿಯ ಬಡಾವಣೆಯೊಂದರಲ್ಲಿ ನೆಲಸಿದ್ದ ವಿದ್ಯಾರ್ಥಿಯು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಮೂರು ಬಾರಿ ಅನುತ್ತೀರ್ಣಗೊಂಡಿದ್ದ. ಇದರಿಂದ ಆಕ್ರೋಶಗೊಂಡು ವಿಗ್ರಹ ವಿರೂಪಗೊಳಿಸಿದ್ದಾನೆ ಎಂಬುದು ತನಿಖೆ ವೇಳೆ ಪತ್ತೆಯಾಗಿದೆ' ಎಂದು ಪೊಲೀಸರು ಹೇಳಿದರು.

'ಸಿಸಿ ಟಿ.ವಿ ಕ್ಯಾಮೆರಾ ಪರಿಶೀಲನೆ ವೇಳೆ ಬಾಲಕ ಕೃತ್ಯ ಎಸಗಿರುವುದು ಗೊತ್ತಾಗಿದೆ. ಅಲ್ಲದೇ ಮಧ್ಯರಾತ್ರಿ ಒಬ್ಬನೇ ಮನೆಯಿಂದ ಹೊರಬಂದು ಓಡಾಟ ನಡೆಸಿರುವ ದೃಶ್ಯ ಕೆಲವು ಕ್ಯಾಮೆರಾಗಳಲ್ಲಿ ಸೆರೆಯಾಗಿದೆ. ಬಾಲಕನನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿ ಬಾಲ ಮಂದಿರಕ್ಕೆ ಕಳುಹಿಸಲಾಗಿದೆ' ಎಂದರು.

ಉದ್ಯಮಿ ಆತ್ಮಹತ್ಯೆ: ಆರ್ಥಿಕ ಸಂಕಷ್ಟ ಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್ಥಿಕ ಸಂಕಷ್ಟದಿಂದ ಹೋಟೆಲ್ ಉದ್ಯಮಿ, ನಾಗರಬಾವಿ ಎರಡನೇ ಹಂತದ ನಿವಾಸಿ ಪ್ರದೀಪ್(42) ಅವರು ಕಾರಿನಲ್ಲಿ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಪ್ರಕರಣದ ತನಿಖೆ ಮುಂದುವರಿದಿದೆ' ಎಂದು ಪೊಲೀಸರು ಹೇಳಿದರು.

ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮುದ್ದಿನಪಾಳ್ಯದ ಕೆಎಲ್‌ಇ ರಸ್ತೆಯ ವಿಶ್ವೇಶ್ವರಯ್ಯ ಲೇಔಟ್‌ನಲ್ಲಿ ಪ್ರದೀಪ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು. ಶನಿವಾರ ಮಧ್ಯಾಹ್ನ ಮನೆಯಿಂದ ಸ್ಕೋಡಾ ಕಾರಿನಲ್ಲಿ ಮುದ್ದಿನಪಾಳ್ಯಕ್ಕೆ ಬಂದಿದ್ದರು. ಅಲ್ಲಿ ಕೆಲಕಾಲ ಕಾರಿನಲ್ಲೇ ಕುಳಿತಿದ್ದರು. ಕೆಲವೇ ಕ್ಷಣಗಳಲ್ಲಿ ಕಾರು ಹೊತ್ತಿ ಉರಿಯಲು ಆರಂಭಿಸಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದ ನಂತರ ಕಾರಿನಲ್ಲಿ ಮೃತದೇಹ ಪತ್ತೆಯಾಗಿತ್ತು. ದಾಖಲೆ ಪರಿಶೀಲಿಸಿದಾಗ ಮೃತ ವ್ಯಕ್ತಿಯ ಗುರುತು ಪತ್ತೆಯಾಗಿತ್ತು. ಆತ್ಮಹತ್ಯೆ ಮಾಡಿಕೊಳ್ಳಲು ಅವರು ಪೆಟ್ರೋಲ್ ಖರೀದಿಸಿ ತಂದಿದ್ದರು ಎನ್ನಲಾಗಿದೆ.

ಜೋರು ಶಬ್ದ: ಕಾರು ಹೊತ್ತಿ ಉರಿಯುತ್ತಿರುವ ಸಂದರ್ಭದಲ್ಲಿ ಜೋರಾದ ಶಬ್ದ ಕೇಳಿಬಂದಿತ್ತು. ಶಬ್ದದಿಂದ ಅಕ್ಕಪಕ್ಕದ ನಿವಾಸಿಗಳು ಬೆಚ್ಚಿ ಬಿದ್ದಿದ್ದರು. ಕೆಲವರು ಮನೆಯಿಂದ ಹೊರಕ್ಕೆ ಓಡಿ ಬಂದಿದ್ದರು. ಕಾರಿಗೆ ಬೆಂಕಿ ತಗುಲಿದ ಬಳಿಕ ಏರ್ ಬಲೂನ್ ತೆರೆದುಕೊಂಡು ಸಂಭವಿಸಿದ ಸ್ಫೋಟದಿಂದ ಜೋರು ಶಬ್ದ ಬಂದಿರುವ ಸಾಧ್ಯತೆಯಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದರು.

ಭಾನುವಾರವೂ ಘಟನಾ ಸ್ಥಳಕ್ಕೆ ಪೊಲೀಸರು ತೆರಳಿ ಪರಿಶೀಲನೆ ನಡೆಸಿದರು. ಬ್ಯಾಡರಹಳ್ಳಿ ಠಾಣೆಯಲ್ಲಿ ಯುಡಿಆರ್ ಪ್ರಕರಣ ದಾಖಲಾಗಿದೆ.

ಚಿತ್ರಾವಳಿ



1. ವಿದ್ವಾನ್ ಎಂ.ಎ. ನರಸಿಂಹಾಚಾರ್ ಅವರ ಅವರ ಜನ್ಮಶತಮಾನೋತ್ಸವದ ಅಂಗವಾಗಿ ಎಂ.ಎ. ನರಸಿಂಹಾಚಾರ್ ಮ್ಯೂಸಿಕ್ ಫೌಂಡೇಷನ್ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಂಗೀತ ಉತ್ಸವದಲ್ಲಿ ಗಾಯಕ ಸಂಪಗೋಡು ವಿಘ್ನರಾಜ ಅವರಿಗೆ 'ಗಾನ ವಾರಿಧಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಂಗೀತ ವಿದ್ವಾಂಸ ಎಂ.ಆರ್.ವಿ. ಪ್ರಸಾದ್, ಸಮಾಜ ಸೇವಕಿ ರೇವತಿ ಕಾಮತ್ ಹಾಗೂ ಫೌಂಡೇಷನ್ ಪದಾಧಿಕಾರಿಗಳು ಉಪಸ್ಥಿತರಿದ್ದರು

2. ಸಾಮಾಜಿಕ ಜಾಗೃತಿ, ಶಿಕ್ಷಣ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸುತ್ತಿರುವ 'ಘನಶ್ಯಾಮ್ ಒಲಿ ಚೈಲ್ಡ್ ವೆಲ್‌ಫೇರ್ ಸೊಸೈಟಿ' ಸ್ಥಾಪಕ ಅಜಯ್ ಒಲಿ ಅವರನ್ನು ಸಾಕ್ರ ವರ್ಲ್ಡ್ ಆಸ್ಪತ್ರೆಯ 'ಹ್ಯೂಮನ್ ಕ್ಯಾಪಿಟಲ್ ಮ್ಯಾನೇಜ್ಮೆಂಟ್' ಪ್ರಧಾನ ವ್ಯವಸ್ಥಾಪಕಿ ನೀತಾ ವೇಗಸ್ ಅವರು ಬೆಳ್ಳಂದೂರು ಶಾಲೆಯಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಗೌರವಿಸಿದರು

3. ನಗರದ ಸುರಾನ ಪಿಯು ಕಾಲೇಜು 'ಸಾಮರ್ಥ್ಯ' ಶೀರ್ಷಿಕೆಯಡಿ ಆಯೋಜಿಸಿದ್ದ ಅಂತರ ಕಾಲೇಜು ಸಾಂಸ್ಕೃತಿಕ ಕಾರ್ಯಕ್ರಮ, ರಸಪ್ರಶ್ನೆ, ಚರ್ಚೆ ಸೇರಿದಂತೆ ವಿವಿಧ 19 ಸ್ಪರ್ಧೆಗಳಲ್ಲಿ ಪಿಇಎಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳು 17 ಸ್ಪರ್ಧೆಗಳಲ್ಲಿ ಜಯಗಳಿಸಿ, ಪಾರಿತೋಷಕ ಪಡೆದುಕೊಂಡರು

4. ಉಲ್ಲಾಳು ಕೃಷಿ ಒಕ್ಕಲಿಗರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಶಾಸಕ ಎಸ್.ಟಿ.ಸೋಮಶೇಖರ್ ತಪಾಸಣಾ ಕೇಂದ್ರಕ್ಕೆ ಭೇಟಿ ನೀಡಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಕನ್ನಡವೇ ಸತ್ಯ ರಂಗಣ್ಣ, ಸಂಘದ ಅಧ್ಯಕ್ಷ ಬೆಟ್ಟಸ್ವಾಮಿ ಗೌಡ, ಬಸಪ್ಪ, ಮರಿಲಿಂಗೇಗೌಡ, ಪ್ರಕಾಶ್ ಮತ್ತಿತರರು ಇದ್ದಾರೆ

ಪುಸ್ತಕ ಸಂತೆಗೆ ಜನಸಾಗರ

ವೀರಲೋಕ ಪ್ರಕಾಶನ ಹಮ್ಮಿಕೊಂಡಿದ್ದ ಮೂರು ದಿನಗಳ ಕನ್ನಡ ಹಬ್ಬ ಸಂಪನ್ನ

ಪ್ರಜಾವಾಣಿ ವಾರ್ತೆ

‘ವೀರಲೋಕ ಪುಸ್ತಕ ಸಂತೆ’ಯಲ್ಲಿ ಪುಸ್ತಕ ಖರೀದಿಸಲು ಹರಿದುಬಂದ ಜನಸಾಗರ ಪ್ರಜಾವಾಣಿ ಚಿತ್ರ

ಬೆಂಗಳೂರು: ವೀರಲೋಕ ಪ್ರಕಾಶನವು ಜಯನಗರದ ಶಾಲಿನಿ ಮೈದಾನದಲ್ಲಿ ಹಮ್ಮಿಕೊಂಡಿದ್ದ ಎರಡನೇ ಆವೃತ್ತಿಯ ‘ವೀರಲೋಕ ಪುಸ್ತಕ ಸಂತೆ’ಗೆ ಕೊನೆಯ ದಿನವಾದ ಭಾನುವಾರ ಜನಸಾಗರವೇ ಹರಿದು ಬಂದಿತ್ತು. ಸಾಹಿತ್ಯ ಪ್ರೇಮಿಗಳು ಸಂಭ್ರಮದಿಂದ ಸಂತೆಯಲ್ಲಿ ಮಳಿಗೆಗಳಿಗೆ ಓಡಾಡಿ, ನೆಚ್ಚಿನ ಲೇಖಕರ ಪುಸ್ತಕಗಳೊಂದಿಗೆ ಮನೆಗೆ ತೆರಳಿದರು.

ರಜಾ ದಿನವಾದ್ದರಿಂದ ಬೆಳಿಗ್ಗೆಯಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯಾಸಕ್ತರು ಮೇಳಕ್ಕೆ ಬಂದಿದ್ದರು. ಮಧ್ಯಾಹ್ನದ ವೇಳೆಗೆ ಮಳಿಗೆಗಳಲ್ಲಿ ಜನದಟ್ಟಣೆ ಉಂಟಾಗಿತ್ತು. ಸಂಜೆಯ ಹೊತ್ತಿಗೆ ಮಳಿಗೆಗಳು ಮಾತ್ರವಲ್ಲದೆ, ಮೈದಾನದ ಎಲ್ಲೆಡೆ ಜನರು ಆವರಿಸಿಕೊಂಡಿದ್ದರು. ಆಹಾರ, ಆಟಿಕೆಗಳು, ಕರಕುಶಲ ಹಾಗೂ ಅಲಂಕಾರಿಕ ವಸ್ತುಗಳ ಮಳಿಗೆಗಳ ಬಳಿಯೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರು. ಶನಿವಾರ ಸಂಜೆ ಸುರಿದ ಮಳೆಯಿಂದಾಗಿ ಮಳಿಗೆಗಳ ಆವರಣ ಕೆಸರುಮಯವಾಗಿದ್ದರೂ, ಜನರ ಉತ್ಸಾಹ ಮಾತ್ರ ಕುಗ್ಗಲಿಲ್ಲ. ಅದರ ನಡುವೆಯೇ ಸಾಗಿ ವಿವಿಧ ತಿನಿಸುಗಳನ್ನು ಸವಿದರು.

ಹರಿವು ಬುಕ್ಸ್ ಹೊರತಂದ ಕೆ.ಬಿ. ಸೂರ್ಯಕುಮಾರ್ ಅವರ ‘ಮಂಗಳೆ’, ಮೈಸೂರು ನಾಗರಾಜ ಶರ್ಮಾ ಅವರ ‘ಸಂಚು ವಂಚನೆಗಳ ಲೋಕದಲ್ಲಿ’, ಸರ್ವಮಂಗಳ ಜಯರಾಂ ಅವರ ‘ಸಂಜೆ ಸುರಿದ ಮಳೆ’ ಹಾಗೂ ವೆಂಕಟೇಶ ಪಿ. ಮರಕಂದಿನ್ನಿ ಅವರ ‘ಪಡಸಾಲೆ’ ಪುಸ್ತಕಗಳನ್ನು ಮಧ್ಯಾಹ್ನ ಬಿಡುಗಡೆ ಮಾಡಲಾಯಿತು.

ಲೇಖಕರ ಹಸ್ತಾಕ್ಷರ: ಸಂತೆಯಲ್ಲಿ ಲೇಖಕರಿಗೂ ಪ್ರತ್ಯೇಕ ಸ್ಥಳಾವಕಾಶ ಒದಗಿಸಿದ್ದರಿಂದ ಸಾಹಿತ್ಯಾಸಕ್ತಿರಿಗೆ ಅವರ ಭೇಟಿ ಸುಲಭವಾಯಿತು. ‘ಓಲೇ (ಓದುಗ–ಲೇಖಕ) ವಿಭಾಗದಲ್ಲಿ...’ ಮಲ್ಲೇಪುರಂ ಜಿ. ವೆಂಕಟೇಶ್, ಮೂಡ್ನಾಕೂಡು ಚಿನ್ನಸ್ವಾಮಿ, ವಿಶ್ವೇಶ್ವರ ಭಟ್, ಅಬ್ದುಲ್ ರಶೀದ್, ಎ.ಆರ್. ದತ್ತಾತ್ರಿ, ನರೇಂದ್ರರೈದೇರ್ಲ, ನಾಗರಾಜವಸ್ತಾರೆ, ಭಾರತಿ ಹೆಗಡೆ, ದೀಪಾ ಹಿರೇಗುತ್ತಿ, ದಾದಾಪೀರ್ ಜೈಮನ್, ಜಿ.ಬಿ. ಹರೀಶ್, ಶರಣು ಹುಲ್ಲೂರು, ವಿಕ್ರಮ್ ಹತ್ವಾರ್, ಕುಸುಮಾ ಆಯರಹಳ್ಳಿ, ಶಾಂತಿ ಕೆ. ಅಪ್ಪಣ್ಣ, ಇಂದ್ರಕುಮಾರ್ ಎಚ್.ಬಿ., ಶರತ್ ಎಂ.ಎಸ್. ಪಾಲ್ಗೊಂಡಿದ್ದರು. ಸಂತೆಗೆ ಬಂದಿದ್ದ ಕೆಲವರು ಅವರ ಪುಸ್ತಕಗಳನ್ನು ಖರೀದಿಸಿ, ಹಸ್ತಾಕ್ಷರವನ್ನೂ ಪಡೆದುಕೊಂಡರು.

ಮಧ್ಯಾಹ್ನದ ಬಳಿಕ ‘ಕವಿತೆ ಹುಟ್ಟುವ ಸಮಯ’ ಕಾರ್ಯಾಗಾರ ನಡೆಯಿತು. ಇದನ್ನು ಕವಿ ವಾಸುದೇವ ನಾಡಿಗ್ ನಡೆಸಿಕೊಟ್ಟರು.

ಪುಸ್ತಕಗಳ ಬಾಕ್ಸ್ ಅನಾವರಣ

ವೀರಲೋಕ ಪ್ರಕಾಶನವು ಉಡುಗೊರೆ ನೀಡಬಹುದಾದ ಪುಸ್ತಕಗಳ ಬಾಕ್ಸ್ ಪರಿಚಯಿಸಿದೆ. ಇದನ್ನು ಭಾನುವಾರ ಸಂಜೆ ಅನಾವರಣ ಮಾಡಲಾಯಿತು. ಪ್ರತಿ ಬಾಕ್ಸ್‌ನಲ್ಲಿ ಆರು, ಏಳು ಪುಸ್ತಕಗಳು ಇರಲಿವೆ. ಇದನ್ನು ಕೊರಿಯರ್ ಮೂಲಕವೂ ನಿರ್ದಿಷ್ಟ ವ್ಯಕ್ತಿಯ ಪರವಾಗಿ ಸಂಬಂಧಪಟ್ಟವರಿಗೆ ಕಳಿಸುವುದಾಗಿ ಆಯೋಜಕರು ಘೋಷಿಸಿದ್ದಾರೆ. ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದರೆ, ಉಡುಗೊರೆ ಮಳಿಗೆ, ಸಿಹಿ ಅಂಗಡಿಗಳಲ್ಲಿ ಇಡುವುದಾಗಿ ತಿಳಿಸಿದ್ದಾರೆ.

ರಾಜ್ಯದ ವಿವಿಧೆಡೆ ಪುಸ್ತಕ ಸಂತೆ ಆಯೋಜನೆಗೆ ಮನವಿ ಬರುತ್ತಿವೆ. ಇದಕ್ಕೆ ಹೆಚ್ಚಿನ ಶ್ರಮ, ಹಣ ಅಗತ್ಯ. ನಮಗೆ ಆತಿಥ್ಯ ನೀಡುವುದಾದರೆ ಆಯೋಜನೆಗೆ ಸಿದ್ಧ

ವೀರಕಪುತ್ರ ಶ್ರೀನಿವಾಸ,
ವೀರಲೋಕ ಪ್ರಕಾಶನದ ಸಂಸ್ಥಾಪಕ

ಸಂಜೆ ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪಿ. ಚಂದ್ರಿಕಾ ಅವರ ‘ಪ್ಯಾಲೆಟ್’, ಮಂಜುನಾಥ್ ಚಾಂದ್ ಅವರ ‘ಪ್ರಿಯ ಮೀರಾ’, ಡಿ.ವಿ. ಗುರುಪ್ರಸಾದ್ ಅವರ ‘ಸಮರಕಂಡ’, ಡಿ.ಎಸ್. ಚೌಗಲೆ ಅವರ ‘ಸದರ ಬಜಾರ್’, ರಾಮ್ ಕದಮ್ ಅವರ ‘ಮನೆ ಇಂಜಿನಿಯರ್’, ಶ್ರೀದೇವಿ ಕಳಸದ ಅವರ ‘ಹಮ್ಮಾ ಹೂ’ ಹಾಗೂ ಅನು ಬೆಳ್ಳೆ (ರಾಘವೇಂದ್ರ ರಾವ್) ಅವರ ‘ನಗು ಎಂದಿದೆ ಮಂಜಿನ ಬಿಂದು’ ಪುಸ್ತಕಗಳು ಬಿಡುಗಡೆಯಾದವು.

ಫೈಂಡ್ ಫೆಸ್ಟಿವಲ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಮೊದಲ ಕೆ-12 ಸ್ಕೂಲ್ ಆಫ್ ಇನ್ನೋವೇಶನ್ ಆಗಿರುವ ಐಕ್ಯ ನವ ಶಾಲೆಯ ‘ಫೈಂಡ್’ ಫೆಸ್ಟಿವಲ್ ಭಾನುವಾರ ಆರಂಭವಾಗಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿ, ‘ಗುಣಮಟ್ಟದ ಶಿಕ್ಷಣವು ಮುಖ್ಯವಾಗಿದೆ. ಶಿಕ್ಷಣಮಟ್ಟ ಸುಧಾರಿಸಲು ಶಿಕ್ಷಣ ತಜ್ಞರು ಮತ್ತು ಸಂಸ್ಥೆಗಳಿಗೆ ನಾವೀನ್ಯದ ಸ್ವಾತಂತ್ರ್ಯವನ್ನು ನೀಡಬೇಕು’ ಎಂದು ತಿಳಿಸಿದರು.

ಟಿಐಎಸ್‌ಬಿ ಮತ್ತು ನ್ಯಾಷನಲ್ ಪಬ್ಲಿಕ್ ಸ್ಕೂಲ್‌ಗಳ ಸಂಸ್ಥಾಪಕ ಕೆ.ಪಿ. ಗೋಪಾಲಕೃಷ್ಣ ಮಾತನಾಡಿ, ‘ಶಿಕ್ಷಣದಲ್ಲಿ ಸಮಗ್ರ ಕಲಿಕೆ ಪ್ರಮುಖ ಸ್ಥಾನ ಪಡೆದಿದೆ. ಇದು ವಿದ್ಯಾರ್ಥಿ ಜೀವನದಲ್ಲಿ ಪ್ರಾಯೋಗಿಕ ಅಂಶಗಳನ್ನು ಅರ್ಥಮಾಡಿಕೊಳ್ಳಲು ಒತ್ತು ನೀಡುತ್ತದೆ. ಈ ಕ್ಷೇತ್ರದಲ್ಲಿ ಪ್ರಯೋಗ ಮತ್ತು ಸಂಶೋಧನೆಗೆ ಸಾಕಷ್ಟು ಅವಕಾಶವಿದೆ, ವಿದ್ಯಾರ್ಥಿಗಳಿಗೆ ವಿಮರ್ಶಾತ್ಮಕ ಚಿಂತನೆ ಮತ್ತು ಸೃಜನಶೀಲ ಚಿಂತನೆಗೆ ಸಹಾಯ ಮಾಡುತ್ತದೆ’ ಎಂದರು.

ನಗರದ ಐಕ್ಯ ನವ ಶಾಲೆಯ ‘ಫೈಂಡ್’ ಫೆಸ್ಟಿವಲ್ ಕಾರ್ಯಕ್ರಮದಲ್ಲಿ ‘ಪ್ರಾಂಪ್ಟಿಂಗ್ ದಿ ಫ್ಯೂಚರ್ ಎಐ ಫಾರ್ ಟ್ರಾನ್ಸ್‌ಫಾರ್ಮೇಟಿವ್ ಟೀಚಿಂಗ್’ ಪುಸ್ತಕ ಬಿಡುಗಡೆ ಮಾಡಲಾಯಿತು

ಡಿಸೈನ್ ಥಿಂಕಿಂಗ್ ಚಾಲೆಂಜ್, ಕಲಿಕೆಯ ಪ್ರದರ್ಶನ, ಸಂವಾದಾತ್ಮಕ ಕಾರ್ಯಾಗಾರಗಳು, ಪ್ಯಾನಲ್ ಚರ್ಚೆಗಳು, ಮ್ಯೂಸಿಯಂ ಅಳವಡಿಕೆ, ಮಾನವ ಗ್ರಂಥಾಲಯ ಮತ್ತು ವಿದ್ಯಾರ್ಥಿ ಗ್ಯಾಲರಿ ಸೇರಿದಂತೆ ಫೈಂಡ್ ಉತ್ಸವದ ಭಾಗವಾಗಿ ಹಲವಾರು ಚಟುವಟಿಕೆಗಳಿಗೆ ಚಾಲನೆ ನೀಡಲಾಯಿತು.

ಐಕ್ಯ ವೃತ್ತಿಪರ ಅಭಿವೃದ್ಧಿ ಸಂಸ್ಥೆಯಿಂದ ‘ಪ್ರಾಂಪ್ಟಿಂಗ್ ದಿ ಫ್ಯೂಚರ್-ಎಐ ಫಾರ್ ಟ್ರಾನ್ಸ್‌ಫಾರ್ಮೇಟಿವ್ ಟೀಚಿಂಗ್’ ಪುಸ್ತಕದ ಬಿಡುಗಡೆ ಗೊಳಿಸಲಾಯಿತು. ಸಿಎಂಆರ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಕೆ.ಸಿ. ರಾಮಮೂರ್ತಿ, ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಸಬಿತಾ ರಾಮಮೂರ್ತಿ, ಐಕ್ಯ ಶಾಲೆಗಳ ನಿರ್ದೇಶಕ ಕೆ.ಆರ್. ಜಯದೀಪ್, ಐಕ್ಯ ಶಾಲೆ ಸಂಸ್ಥಾಪಕಿ ಡಾ. ತ್ರಿಸ್ತ ರಾಮಮೂರ್ತಿ ಅವರು ಹಾಜರಿದ್ದರು.

‘ಬೆಚ್ಚಗಿನ ಅನುಭೂತಿ ನೀಡುವ ಸೈನಿಕರ ಶೌರ್ಯ’

ಕೆ.ಆರ್.ಪುರ: ಭಾರತೀಯ ಸೈನಿಕರ ಶೌರ್ಯ ಮತ್ತು ಅಂತಃಸ್ಥೈರ್ಯವನ್ನು ಮೆಲುಕು ಹಾಕುವ ನಿದರ್ಶನಗಳು ಮನಸ್ಸಿಗೆ ಬೆಚ್ಚಗಿನ ಅನುಭೂತಿ ನೀಡುತ್ತವೆ ಎಂದು ಪರಮ ವೀರಚಕ್ರ ಪ್ರಶಸ್ತಿ ಪುರಸ್ಕೃತ ಕ್ಯಾಪ್ಟನ್ ಯೋಗೇಂದ್ರ ಸಿಂಗ್ ಯಾದವ್ ಹೇಳಿದರು.

ಕೆ.ಆರ್.ಪುರ ಸಮೀಪದ ಮಾರತ್ತಹಳ್ಳಿಯ ಎಚ್‌ಎಎಲ್ ಮ್ಯಾನೇಜ್‌ಮೆಂಟ್ ಅಕಾಡೆಮಿಯಲ್ಲಿ ಹಮ್ಮಿಕೊಂಡಿದ ‘ಸಶಕ್ತ ಮತ್ತು ಸಮೃದ್ಧ ಭಾರತಕ್ಕಾಗಿ’ ಪ್ರಾಜೆಕ್ಟ್ ಮ್ಯಾನೇಜ್ಮೆಂಟ್ ಪ್ರಾಕ್ಟೀಷನರ್ಸ್ ಸಮ್ಮೇಳನ ವನ್ನು ಉದ್ಘಾಟಿಸಿ ಮಾತನಾಡಿದರು. ‘ಭಾರತೀಯ ರಕ್ಷಣಾ ಪಡೆಗಳ ಶೌರ್ಯ ಕಥೆಗಳ ಆಧಾರಿತ ಉದಾಹರಣೆಗಳು ನಮ್ಮ ನರನಾಡಿ ಗಳನ್ನು ಉಕ್ಕಿನಂತಾಗಿಸುತ್ತದೆ’ ಎಂದರು.

ಈ ಸಂಧರ್ಭದಲ್ಲಿ ಕ್ಯಾಪ್ಟನ್ ನಿಕುಂಜ್ ಪರಶರ್, ರಾಂಪ್ಯೆಸಿಟಿ ಸಿಇಒ ಪ್ರತೀಕ್ ಖಾಂಡೆಲ್ವಾಲ್, ಸ್ವೆಸ್ ಕಿಡ್ಸ್ ಇಂಡಿಯಾ ಸಿಇಒ ಡಾ.ಕೆಸನ್, ಡಾ.ಶ್ರೀಕಾಂತ್ ಶರ್ಮ ಅವರು ಇದ್ದರು.

ಸಿಡಿಲು ಬಡಿದು ಬಾಲಕ ಸಾವು

ಬಂಟ್ವಾಳ: ತಾಲ್ಲೂಕಿನ ಕೆದಿಲ ಗ್ರಾಮದ ಮುರಿಯಾಜೆ ನಿವಾಸಿ ಚಂದ್ರಹಾಸ ಎಂಬುವರ ಪುತ್ರ ಸುಬೋಧ್ ಸಿ. (14) ಎಂಬುವರು ಭಾನುವಾರ ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಬಾಲಕ ಕಲ್ಲಡ್ಕ ಶ್ರೀರಾಮ ವಿದ್ಯಾಮಂದಿರದ ಎಂಟನೇ ತರಗತಿ ವಿದ್ಯಾರ್ಥಿ. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಪುತ್ತೂರು ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗಿದೆ.

ವಿಟ್ಲ ಕಂದಾಯ ನಿರೀಕ್ಷಕ ಪ್ರಶಾಂತ್ ಶೆಟ್ಟಿ, ಕೆದಿಲ ಗ್ರಾಮ ಆಡಳಿತ ಅಧಿಕಾರಿ ಅನಿಲ್ ಕುಮಾರ್, ಕೆದಿಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಹರೀಶ್ ವಾಲ್ತಾಜೆ ಪುತ್ತೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದರು.

₹6 ಕೋಟಿ ಶಿಷ್ಯವೇತನ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪನಾ ದಿನಾಚರಣೆ ಭಾನುವಾರ ನಡೆಯಿತು.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 187 ವಿದ್ಯಾರ್ಥಿಗಳಿಗೆ ಶಿಷ್ಯವೇತನ, 14 ವಿದ್ಯಾರ್ಥಿಗಳಿಗೆ ಕ್ರೀಡಾ ಪ್ರತಿಭಾ ವೇತನ ಪುರಸ್ಕಾರ, 20 ವಿದ್ಯಾರ್ಥಿಗಳಿಗೆ ನಾಯಕತ್ವ ಪ್ರತಿಭಾ ಪುರಸ್ಕಾರ ವೇತನ ಸೇರಿ ಒಟ್ಟು ₹6 ಕೋಟಿ ವಿತರಣೆ ಮಾಡಲಾಯಿತು.

ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಕೆ.ಸಿ.ರಾಮಮೂರ್ತಿ ಮಾತನಾಡಿ, ‘ಸಂಸ್ಥಾಪನಾ ದಿನದ ಸ್ಮರಣಾರ್ಥ ಪ್ರತಿವರ್ಷ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳು ಅದರಲ್ಲೂ ಬಡ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರತಿಭಾ ಪುರಸ್ಕಾರ ವೇತನ ಹಾಗೂ ಶಿಷ್ಯವೇತನ ನೀಡುವ ಮೂಲಕ ವಿದ್ಯಾರ್ಥಿಗಳು ಉನ್ನತ ಮಟ್ಟದ ನಾಯಕರಾಗಿ ಬೆಳೆಯಲು ಪ್ರೋತ್ಸಾಹ ನೀಡುತ್ತಿದ್ದೇವೆ. ಕ್ರೀಡಾ ಕ್ಷೇತ್ರವನ್ನು ಪ್ರೋತ್ಸಾಹಿಸುವುದಕ್ಕಾಗಿ ಬಾಗಲೂರಿನಲ್ಲಿರುವ ಸಿಎಂಆರ್ ವಿಶ್ವವಿದ್ಯಾಲಯದಲ್ಲಿ ವಿಶ್ವದರ್ಜೆಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡಿದ್ದೇವೆ’ ಎಂದು ಮಾಹಿತಿ ನೀಡಿದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜ್, ಎಫ್‌ಐಬಿಎ ಏಷ್ಯಾ ಮತ್ತು ಕರ್ನಾಟಕ ಒಲಿಂಪಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ಅರವಿಂದ ಲಿಂಬಾವಳಿ, ಏಷ್ಯನ್ ಫುಟ್ಬಾಲ್ ಕಾನ್ಫೆಡರೇಷನ್‌ನ ಸುಧೀರ್ ಮೆನನ್ ಚೆಂಬಜಿ, ಯುಎಸ್‌ಎ ಬೆಲ್ಟ್ಸ್‌ವಿಲ್ಲೆ ಇಂಡಸ್ಟ್ರಿಯಲ್ ಸಮೂಹದ ಬೆನ್ ಚಿಕ್ಕಸ್ವಾಮಿ ಅವರು ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಚಿಕ್ಕಮುನಿಯಪ್ಪ ರೆಡ್ಡಿ ಅವರ ದೂರದೃಷ್ಟಿಯನ್ನು ಸ್ಮರಿಸಿದರು.

ಸಿಎಂಆರ್ ವಿಶ್ವವಿದ್ಯಾಲಯ ಕುಲಾಧಿಪತಿ ಸಬಿತಾ ರಾಮಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಜ್ಞಾನಧಾರ ಟ್ರಸ್ಟ್‌ನ ಟ್ರಸ್ಟಿ ಕೆ.ಸಿ. ರಾಜುರೆಡ್ಡಿ, ಕಾರ್ಯದರ್ಶಿ ಕೆ.ಸಿ. ಜಗನ್ನಾಥ ರೆಡ್ಡಿ, ಸಹ ಕುಲಾಧಿಪತಿ ಜಯದೀಪ್ ಕೆ.ಆರ್. ರೆಡ್ಡಿ, ಪ್ರೊವೋಸ್ಟ್ ತ್ರಿಸ್ತಾ ರಾಮಮೂರ್ತಿ, ಕುಲಪತಿ ಎಚ್.ಬಿ. ರಾಘವೇಂದ್ರ ಉಪಸ್ಥಿತರಿದ್ದರು.

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಕಾರ್ಯಕ್ರಮ

‘ಮಾನವೀಯ ಮೌಲ್ಯ ಮೈಗೂಡಿಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ನಗರೀಕರಣ ಭರಾಟೆಯಲ್ಲಿ ಯುವಜನಾಂಗ ಪಾಶ್ಚಿಮಾತ್ಯ ಸಂಸ್ಕೃತಿ, ಮೊಬೈಲ್ ಗೀಳಿಗೆ ಜೋತು ಬಿದ್ದು ದಿನ ಪತ್ರಿಕೆ, ಪುಸ್ತಕಗಳನ್ನು ಓದುವ ಅಭಿರುಚಿ ಕಡಿಮೆಯಾಗುತ್ತಿದೆ ಎಂದು ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಂ.ಶಿವಕುಮಾರ್ ಅವರು ಹೇಳಿದರು.

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಅಂಗವಾಗಿ ನಗರ ಕೇಂದ್ರ ಪಶ್ಚಿಮ ವಲಯ ಮತ್ತು ವಿವಿಧ ಕಾಲೇಜು, ಸಂಘ ಸಂಸ್ಥೆಗಳ ವತಿಯಿಂದ ಕೆಂಗೇರಿ ಉಪನಗರದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ 2024 ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

‘ದಿನಪತ್ರಿಕೆಗಳು, ಪುಸ್ತಕಗಳ ನಿರಂತರ ಓದಿನಿಂದ ಯುವ ಜನಾಂಗ, ಸಾಮಾಜಿಕ ಬದ್ಧತೆ, ಸಮಾಜ ಮುಖಿ ಸೇವಾ ಅಭಿರುಚಿ, ಜ್ಞಾನ ಸಂಪಾದನೆ, ಮಾನವೀಯ ಮೌಲ್ಯಗಳನ್ನು ಮೈಗೂಡಿಸಿ ಕೊಳ್ಳಬಹುದು’ ಎಂದರು.

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಕಾರ್ಯಕ್ರಮಕ್ಕೆ ಸಾಹಿತಿ ಕರಿಗೌಡ ಬೀಚನಹಳ್ಳಿ ಚಾಲನೆ ನೀಡಿದರು

ಸಾಹಿತಿ ಕರಿಗೌಡ ಬೀಚನಹಳ್ಳಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ‘ಹಣ, ಆಸ್ತಿ, ಸಂಪಾದನೆ, ಅಧಿಕಾರವನ್ನು ಕೊಂಡುಕೊಳ್ಳಬಹುದು. ಜ್ಞಾನ ಸಂಪತ್ತು, ವಿದ್ಯೆ, ಸಂಸ್ಕೃತಿ ಪ್ರತಿಭೆಯನ್ನು ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ’ ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಲಕ್ಷ್ಮಿ ನಾರಾಯಣ್, ಉಪ ನಿರ್ದೇಶಕಿ ಎಚ್.ಸಿ.ಪಾರ್ವತಮ್ಮ, ಸಾಹಿತಿ ಎ.ಪಿ.ಕುಮಾರ್ ಮಾತನಾಡಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 400 ವಿದ್ಯಾರ್ಥಿಗಳು ಗ್ರಂಥಾಲಯದ ಸದಸ್ಯತ್ವ ಪಡೆದುಕೊಂಡರು. ನೂರಾರು ವಿದ್ಯಾರ್ಥಿಗಳು, ಸಾಹಿತಿಗಳು, ಕಲಾವಿದರು ಬೃಹತ್ ಜಾಥಾದ ಮೂಲಕ ಪುಸ್ತಕ, ದಿನ ಪತ್ರಿಕೆ ಓದಿ ಜ್ಞಾನ ಸಂಪಾದನೆ ಮಾಡಿಕೊಳ್ಳಿ ಎಂದು ಘೋಷಣೆ ಕೂಗಿ ಕರ ಪತ್ರಗಳನ್ನು ಹಂಚಿದರು.

ಕೋವಿಡ್ ಖರೀದಿ: ಉನ್ನತ ತನಿಖೆ ಮತ್ತು ಕಠಿಣ ಕಾನೂನು ಕ್ರಮಕ್ಕೆ ತನಿಖಾ ಆಯೋಗ ಶಿಫಾರಸು

ವೆಂಟಿಲೇಟರ್: ನೂರಾರು ಕೋಟಿ ಅಕ್ರಮ

● ಜಯಸಿಂಹ ಆರ್.

ಬೆಂಗಳೂರು: ಕೋವಿಡ್ ಅವಧಿಯಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು 1,137 ವೆಂಟಿಲೇಟರ್‌ಗಳನ್ನು ಖರೀದಿಸಿದೆ. ಇದರಲ್ಲಿ ₹16 ಕೋಟಿಯಷ್ಟು ಅಕ್ರಮ ನಡೆದಿದ್ದು, ಇನ್ನೂ ₹106 ಕೋಟಿಯಷ್ಟು ಶಂಕಾಸ್ಪದ ಅಕ್ರಮ ವಹಿವಾಟು ನಡೆದಿದೆ. ಈ ಬಗ್ಗೆ ಉನ್ನತ ತನಿಖೆ ನಡೆಸಿ, ಸಂಬಂಧಿತರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹ ಆಯೋಗವು ಶಿಫಾರಸು ಮಾಡಿದೆ.

ಆಯೋಗವು ಸಲ್ಲಿಸಿರುವ ಮಧ್ಯಂತರ ವರದಿಯ ಮೂರನೇ ಭಾಗದಲ್ಲಿ ಈ ಮಾಹಿತಿ ಇದೆ. ಅಷ್ಟೂ ವೆಂಟಿಲೇಟರ್‌ಗಳ ಖರೀದಿಗೆ ಸಂಬಂಧಿಸಿದ ಪೂರ್ಣ ದಾಖಲೆಗಳು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಬಳಿಯಾಗಲೀ, ಇಬ್ಬರು ಪೂರೈಕೆದಾರರ ಬಳಿಯಾಗಲೀ ಲಭ್ಯವಿಲ್ಲ ಎಂದು ಆಯೋಗ ಹೇಳಿದೆ.

ವಿವಿಧ ಅವತರಣಿಕೆಯ 647 ವೆಂಟಿಲೇಟರ್‌ಗಳನ್ನು ಒದಗಿಸುವ ಐದು ಪ್ರತ್ಯೇಕ ಪೂರೈಕೆ ಆದೇಶಗಳನ್ನು ನಿರ್ದೇಶನಾಲಯವು ಎನ್‌ಕಾರ್ಟಾ ಫಾರ್ಮಾಗೆ ನೀಡಿತ್ತು. ಈ ಖರೀದಿಯ ಒಟ್ಟು ಮೊತ್ತ ₹107.40 ಕೋಟಿ. ಇದರಲ್ಲಿ ಎನ್‌ಕಾರ್ಟಾ ಕಂಪನಿಗೆ ₹105.87 ಕೋಟಿ ಪಾವತಿ ಮಾಡಲಾಗಿದೆ ಎಂದು ನಿರ್ದೇಶನಾಲಯವು ವಿವರಣೆ ನೀಡಿತ್ತು. ಆದರೆ ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕಂಪನಿಯಾಗಲಿ, ನಿರ್ದೇಶನಾಲಯವಾಗಲಿ ಸಲ್ಲಿಸಿರಲಿಲ್ಲ ಎಂದು ಆಯೋಗ ವಿವರಿಸಿದೆ.

ಈ ವಹಿವಾಟಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಸಲ್ಲಿಸಿ ಎಂದು ಕಂಪನಿ ಮತ್ತು ನಿರ್ದೇಶನಾಲಯಕ್ಕೆ ಸೂಚಿಸಲಾಗಿತ್ತು. ಆಗಲೂ ಅಗತ್ಯ ದಾಖಲೆಗಳನ್ನು ಅವು ಸಲ್ಲಿಸಲಿಲ್ಲ. ಹೀಗಾಗಿ ಲಭ್ಯವಿರುವ ದಾಖಲೆಗಳನ್ನೇ ಪರಿಶೀಲಿಸಲಾಯಿತು. 647 ವೆಂಟಿಲೇಟರ್‌ಗಳನ್ನು ಪೂರೈಸಿದ್ದೇವೆ ಎಂದು ಎನ್‌ಕಾರ್ಟಾ ಮಾಹಿತಿ ನೀಡಿದೆ. ಆದರೆ ಅವುಗಳನ್ನು ಪಡೆದುಕೊಂಡಿದ್ದರ ಬಗ್ಗೆ ಅದು ಸಲ್ಲಿಸಿರುವ ದಾಖಲೆಗಳಲ್ಲಿ ಯಾವುದೇ ಸಹಿ ಮತ್ತು ಮೊಹರು ಇಲ್ಲ ಎಂದು ಆಯೋಗ ಹೇಳಿದೆ.

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಿಂದ ತನಗೆ ಪಾವತಿಯಾಗಿರುವ ಹಣದ ವಿವರ ಇರುವ ಲೆಡ್ಜರ್ ಅನ್ನು ಎನ್‌ಕಾರ್ಟಾ ಒದಗಿಸಿದೆ. ಕೋವಿಡ್ ಅವಧಿಯಲ್ಲಿ ನಿರ್ದೇಶನಾಲಯದಿಂದ ಆಗಿರುವ ಎಲ್ಲ ಪಾವತಿಗಳ ವಿವರ ಅದರಲ್ಲಿ ಇದೆಯೇ ಹೊರತು, ವೆಂಟಿಲೇಟರ್‌ಗಳ ಪೂರೈಕೆಗೆ ಸಂಬಂಧಿಸಿದ ಪಾವತಿ ಮಾಹಿತಿ ಅದರಲ್ಲಿ ಸ್ಪಷ್ಟವಾಗಿಲ್ಲ. ಹೀಗಾಗಿ ಈ ₹105.87 ಕೋಟಿ ಪಾವತಿ ನಡೆದಿರುವ ಬಗ್ಗೆಯೇ ಶಂಕೆಯಿದೆ ಎಂದು ವರದಿ ವಿವರಿಸಿದೆ.

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಕಡತಗಳನ್ನು ಪರಿಶೀಲಿಸಿದಾಗ 647 ವೆಂಟಿಲೇಟರ್‌ಗಳ ಪೂರೈಕೆಗೆ ಸಂಬಂಧಿಸಿದ ಕೆಲವು ಮೆಮೊಗಳು ಮತ್ತು ಬಿಡಿ ಹಾಳೆಗಳಲ್ಲಿ ಬರೆದುಕೊಂಡ ಕೆಲ ಮಾಹಿತಿಗಳು ದೊರೆತವು. ಎನ್‌ಕಾರ್ಟಾಗೆ ಐದು ಬಾರಿ ಹಣ ಪಾವತಿ ಮಾಡಲಾಗಿದೆ ಎಂಬ ಮಾಹಿತಿ ಬಿಡಿ ಹಾಳೆಗಳಲ್ಲಿ ಇದೆ. ₹105.87 ಕೋಟಿಯಷ್ಟು ದೊಡ್ಡ ಮೊತ್ತದ ಪಾವತಿ ನಡೆಸುವಾಗ, ಇಷ್ಟು ನಿರ್ಲಕ್ಷ್ಯದಿಂದ ದಾಖಲೆಗಳನ್ನು ನಿರ್ವಹಿಸಲಾಗಿದೆ ಎಂದು ಆಯೋಗ ಹೇಳಿದೆ.

ಈ ವಹಿವಾಟು ತೀರಾ ಅನುಮಾನಾಸ್ಪದವಾಗಿದೆ. ಹಣ ಯಾರಿಂದ ಯಾರಿಗೆ ಮತ್ತು ಯಾವಾಗ ಪಾವತಿಯಾಗಿದೆ ಎಂಬ ನಿಖರ ಮಾಹಿತಿ ಇಲ್ಲ. ಈ ವಿವರಗಳನ್ನು ಪತ್ತೆ ಮಾಡಲು ಕೂಲಂಕಷ ತನಿಖೆಯ ಅಗತ್ಯವಿದೆ. ಈ ವಹಿವಾಟಿನಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧವೂ ತನಿಖೆ ನಡೆಸಿ, ಅಗತ್ಯ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬೇಕು. ಅಗತ್ಯಬಿದ್ದರೆ ಹಣ ವಸೂಲಿಗೆ ಕ್ರಮ ವಹಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

ಪೂರೈಕೆ ಆಗದಿದ್ದರೂ ₹13.40 ಕೋಟಿ ಪಾವತಿ

ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿ 490 ವೆಂಟಿಲೇಟರ್‌ಗಳನ್ನು ಪೂರೈಸಿ, ಅಳವಡಿಸುವ ಗುತ್ತಿಗೆಯನ್ನು ಸನ್ ಝಿನ್ ಎಂಟರ್‌ಪ್ರೈಸಸ್‌ಗೆ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ನೀಡಿತ್ತು. ಕಂಪನಿಯು ಎಲ್ಲ ವೆಂಟಿಲೇಟರ್‌ಗಳನ್ನು ಪೂರೈಸದೇ ಇದ್ದರೂ ಪೂರ್ಣ ಪ್ರಮಾಣದಲ್ಲಿ ಹಣ ಪಾವತಿ ಮಾಡಲಾಗಿದೆ. ಇದರಲ್ಲಿ ₹13.40 ಕೋಟಿಯಷ್ಟು ಅಕ್ರಮ ನಡೆದಿದೆ ಎಂದು ವರದಿ ಹೇಳಿದೆ.

2020ರ ಮಾರ್ಚ್‌ನಿಂದ 2021ರ ಅಕ್ಟೋಬರ್ ನಡುವೆ ಒಟ್ಟು ನಾಲ್ಕು ಪೂರೈಕೆ ಆದೇಶಗಳಲ್ಲಿ 490 ವೆಂಟಿಲೇಟರ್‌ಗಳನ್ನು ಪೂರೈಸುವ ಗುತ್ತಿಗೆಯನ್ನು ಸನ್ ಝಿನ್ ಪಡೆದುಕೊಂಡಿತ್ತು. ಆದರೆ ಕಂಪನಿ ಪೂರೈಸಿ, ಅಳವಡಿಕೆ ಮಾಡಿದ್ದು 402 ವೆಂಟಿಲೇಟರ್‌ಗಳನ್ನು ಮಾತ್ರ. ಆದರೆ 490 ವೆಂಟಿಲೇಟರ್‌ಗಳಿಗೆ ಬಿಲ್ ಸಲ್ಲಿಸಿದೆ. ಇಲ್ಲಿ ಕಂಪನಿ ಕಡೆಯಿಂದ ಲೋಪವಾಗಿದೆ ಎಂದು ವರದಿ ವಿವರಿಸಿದೆ.

ಕಂಪನಿ ಎಲ್ಲ ವೆಂಟಿಲೇಟರ್‌ಗಳನ್ನು ಪೂರೈಸಿದೆಯೇ ಅಥವಾ ಇಲ್ಲವೇ ಎಂಬುದನ್ನು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಅಧಿಕಾರಿಗಳು ಖಚಿತಪಡಿಸಿಕೊಂಡಿಲ್ಲ. ವಿಳಂಬ ಪೂರೈಕೆಗೆ ₹24.70 ಲಕ್ಷ ದಂಡ ಮುರಿದುಕೊಂಡು ₹68.06 ಕೋಟಿಯನ್ನು ಕಂಪನಿಗೆ ಪಾವತಿ ಮಾಡಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹13.40 ಕೋಟಿ ನಷ್ಟವಾಗಿದೆ. ಇದು ನಿರ್ಲಕ್ಷ್ಯದಿಂದ ಆಗಿದೆಯೇ ಅಥವಾ ಉದ್ದೇಶಪೂರ್ವಕವಾಗಿ ಆಗಿದೆಯೇ ಎಂಬುದನ್ನು ಪತ್ತೆ ಮಾಡಲು ಆಳ ತನಿಖೆಯ ಅಗತ್ಯವಿದೆ ಎಂದು ಆಯೋಗ ಶಿಫಾರಸು ಮಾಡಿದೆ.

‘ಖರೀದಿ ಉದ್ದೇಶವೇ ವ್ಯರ್ಥ’

ವೆಂಟಿಲೇಟರ್‌ಗಳ ಖರೀದಿ ಒಪ್ಪಂದದಲ್ಲಿ, ‘30 ದಿನಗಳ ಒಳಗೆ ಪೂರೈಸಬೇಕು’ ಎಂದು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ಷರತ್ತು ಹಾಕಿದೆ. ಆದರೆ ಎನ್‌ಕಾರ್ಟಾ ಫಾರ್ಮಾ ಗಡುವಿನೊಳಗೆ ಒಂದೂ ವೆಂಟಿಲೇಟರ್ ಅನ್ನು ಪೂರೈಸಿಲ್ಲ. ಎರಡು ತಿಂಗಳಿಂದ ಎಂಟು ತಿಂಗಳವರೆಗೆ ಪೂರೈಕೆ ಆಗಿವೆ. ಆದರೆ ಈ ಎಲ್ಲ ವಿಳಂಬಕ್ಕೆ ದಂಡ ವಿಧಿಸಲು ಅವಕಾಶವಿದ್ದರೂ ದಂಡ ವಿಧಿಸಿಲ್ಲ. ಇದರಿಂದ ಬೊಕ್ಕಸಕ್ಕೆ ₹2.03 ಕೋಟಿ ನಷ್ಟವಾಗಿದೆ ಎಂದು ಆಯೋಗ ಹೇಳಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಕೋವಿಡ್ ತೀವ್ರತೆ ಸಂಪೂರ್ಣ ಇಳಿಕೆಯಾದ ನಂತರ, 2023ರಲ್ಲಿ ನೂರಾರು ವೆಂಟಿಲೇಟರ್‌ಗಳನ್ನು ಎನ್‌ಕಾರ್ಟಾ ಕಂಪನಿ ಪೂರೈಸಿದೆ. ಅವುಗಳ ಅಳವಡಿಕೆಯಲ್ಲಿ ಮತ್ತಷ್ಟು ವಿಳಂಬ ಮಾಡಿದೆ. ಹೀಗೆ ಹತ್ತಾರು ತಿಂಗಳು ವಿಳಂಬವಾದ ನಂತರ ಪೂರೈಕೆ ಆದ ಕಾರಣಕ್ಕೆ, ವೆಂಟಿಲೇಟರ್‌ಗಳ ಖರೀದಿಯ ಉದ್ದೇಶವೇ ವ್ಯರ್ಥವಾಗಿದೆ. ಜನರಿಗೆ ಉಪಯೋಗವೂ ಆಗಿಲ್ಲ, ಸರ್ಕಾರದ ಬೊಕ್ಕಸದ ಹಣ ವ್ಯರ್ಥವಾಗಿದೆ ಎಂದಿದೆ.

ಆಯೋಗ ಹೇಳಿದ್ದು...

- ಅಗತ್ಯವಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಿಕೊಳ್ಳದೆ ಸಾವಿರಕ್ಕೂ ಹೆಚ್ಚು ವೆಂಟಿಲೇಟರ್‌ಗಳನ್ನು ಖರೀದಿಸಲು ಆದೇಶಿಸಲಾಗಿದೆ. ತಾಂತ್ರಿಕ ಸಮಿತಿಯ ಅಭಿಪ್ರಾಯವನ್ನೂ ಪಡೆದುಕೊಳ್ಳದೆ ಪ್ರಕ್ರಿಯೆ ನಡೆಸಲಾಗಿದೆ
- ಎನ್‌ಕಾರ್ಟಾ ಕಂಪನಿಯಿಂದ ಬ್ಯಾಂಕ್ ಗ್ಯಾರಂಟಿ ಪಡೆದುಕೊಳ್ಳಬೇಕು ಎಂಬ ಷರತ್ತು ಇದ್ದರೂ, ಅದನ್ನು ಕಡೆಗಣಿಸಲಾಗಿದೆ. ಬ್ಯಾಂಕ್ ಗ್ಯಾರಂಟಿ ಪಡೆದುಕೊಳ್ಳದೆ ಶೇ 50ರಷ್ಟು ಹಣವನ್ನು ಮುಂಗಡವಾಗಿ ನೀಡಲಾಗಿದೆ
- ಎನ್‌ಕಾರ್ಟಾ ಕಂಪನಿಯು ಒಂದು ವರ್ಷ ವಿಳಂಬದ ನಂತರ ಯೂರೊ ಎಕ್ಸಿಮ್ ಬ್ಯಾಂಕ್ ಎಂಬ ವಿದೇಶಿ ಬ್ಯಾಂಕ್‌ನ ಬ್ಯಾಂಕ್ ಗ್ಯಾರಂಟಿ ಸಲ್ಲಿಸಿದೆ. ಇದೂ ನಿಯಮಬಾಹಿರ
- ಈ ವಹಿವಾಟುಗಳಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಎನ್‌ಕಾರ್ಟಾ ಫಾರ್ಮಾ ಮತ್ತು ಸನ್ ಝಿನ್ ಎಂಟರ್‌ಪ್ರೈಸಸ್‌ನಿಂದ ಕಲೆಹಾಕಲು ತನಿಖೆಯ ಅವಶ್ಯಕತೆ ಇದೆ



ಬೆಟ್ಟದ ನಂದಿಗೆ ಅಭಿಷೇಕ...

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ‘ಬೆಟ್ಟದ ಬಳಗ ಟ್ರಸ್ಟ್’ನಿಂದ ಭಾನುವಾರ ನಂದಿ ವಿಗ್ರಹಕ್ಕೆ ಅರಿಸಿನ ಅಭಿಷೇಕ ನೆರವೇರಿಸಲಾಯಿತು. ಆದಿಚುಂಚನಗಿರಿ ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಹೊಸಮಠದ ಚಿದಾನಂದ ಸ್ವಾಮೀಜಿ ಪಾಲ್ಗೊಂಡಿದ್ದರು

ಪ್ರಜಾವಾಣಿ ಚಿತ್ರ: ಹಂಪಾ ನಾಗರಾಜ್

ಗಾಣಗಾಪುರ: ಅರ್ಚಕರ ಮಾರಾಮಾರಿ– ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಅಫಜಲಪುರ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಪ್ರಸಿದ್ಧ ಯಾತ್ರಾ ಸ್ಥಳ ದೇವಲಗಾಣಗಾಪುರದ ದತ್ತಾತ್ರೇಯ ಮಹಾರಾಜರ ದೇವಸ್ಥಾನ ಅರ್ಚಕರಾದ ಕಿರಣ ಪೂಜಾರಿ ಹಾಗೂ ವಲ್ಲಭ ಪೂಜಾರಿ ವಿರುದ್ಧ ದೇವಲ ಗಾಣಗಾಪುರದ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.

ಗೌರಿ ಹುಣ್ಣಿಮೆಯಂದು ದತ್ತ ಮಹಾರಾಜರ ದರ್ಶನಕ್ಕೆ ಯಾತ್ರಿಕರನ್ನು ಸರತಿಯಲ್ಲಿ ಬಿಡುತ್ತಿರುವಾಗ ಎರಡು ಅರ್ಚಕ ಕುಟುಂಬಗಳ ಮಧ್ಯೆ ಹೊಡೆದಾಟವಾಗಿತ್ತು. ಈ ಬಗ್ಗೆ ಅರ್ಚಕರ ಕುಟುಂಬದವರು ಪೊಲೀಸ್ ಠಾಣೆಯಲ್ಲಿ ದೂರು ನೀಡಿರಲಿಲ್ಲ.

ದತ್ತ ಮಹಾರಾಜರ ದರ್ಶನಕ್ಕೆ ಯಾತ್ರಿಕರ ಮಧ್ಯೆ ನೂಕುನುಗ್ಗಲು ಉಂಟಾಗಿತ್ತು. ತಮ್ಮ ತಮ್ಮ ಪರಿಚಯದ ಭಕ್ತರನ್ನು ದರ್ಶನಕ್ಕೆ ಗರ್ಭಗುಡಿಯಲ್ಲಿ ಮುಂದೆ ಬಿಡಲು ಇಬ್ಬರೂ ಅರ್ಚಕರ ನಡುವೆ ಜಗಳವಾಗಿ ಹೊಡೆದಾಟವೂ ನಡೆದಿತ್ತು. ಇದು ದೇವಸ್ಥಾನದ ಸಿ.ಸಿ. ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು.

ಎರಡು ಅರ್ಚಕ ಕುಟುಂಬಗಳ ಮಧ್ಯೆ ಆಗಾಗ ಕಲಹ ನಡೆಯುತ್ತಿದ್ದವು. ಗೌರಿ ಹುಣ್ಣಿಮೆ ದಿನ ಯಾತ್ರಿಕರನ್ನು ದರ್ಶನಕ್ಕೆ ದೇವಸ್ಥಾನದ ಒಳಗೆ ಬಿಡುವ ವಿಷಯದಲ್ಲಿಯೂ ಜಗಳವಾಗಿದೆ ಎಂದು ತಿಳಿದುಬಂದಿದೆ.

ಚಲನಚಿತ್ರನಟ ಡಾಲಿ ಧನಂಜಯ ಹಾಗೂ ವೈದ್ಯೆ ಧನ್ಯತಾ ಅವರ ನಿಶ್ಚಿತಾರ್ಥವು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಕಾಳೇನಹಳ್ಳಿಯಲ್ಲಿ ಭಾನುವಾರ ನಡೆಯಿತು. ಸರಳ ಸಮಾರಂಭದಲ್ಲಿ ಕುಟುಂಬದ ಸದಸ್ಯರಷ್ಟೇ ಪಾಲ್ಗೊಂಡಿದ್ದರು. 2025ರ ಫೆ.16ರಂದು ಮೈಸೂರಿನಲ್ಲಿ ವಿವಾಹ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ

ವಿಂಟೇಜ್ ಕಾರು ಬೆಂಕಿಗೆ ಆಹುತಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಎಕ್ಸ್‌ಪ್ಲೋರ್ ಕರ್ನಾಟಕ ಹಿಸ್ಟಾರಿಕ್ ಡ್ರೈವ್ 2024’ ಎಂಬ ಹೆಸರಿನಲ್ಲಿ ವಿಂಟೇಜ್ ಕಾರುಗಳ ಪ್ರವಾಸದಲ್ಲಿದ್ದ 1985ರಲ್ಲಿ ನಿರ್ಮಾಣಗೊಂಡ ವಿದೇಶಿ ಕಾರೊಂದು ನಗರದ ರಾಯರಕೆರೆ ಬಳಿ ಭಾನುವಾರ ಬೆಂಕಿಗೆ ಆಹುತಿಯಾಯಿತು.

‘ಬೆಲ್ಜಿಯಂನ ಪೌಲ್ ಡೆಲುಷನ್ ಎಂಬುವರಿಗೆ ಸೇರಿದ ಕಾರು ಕಮಲಾಪುರದಿಂದ ಚಿಕ್ಕಮಗಳೂರಿನತ್ತ ತೆರಳುತ್ತಿತ್ತು. ಕಾರಿನ ಕೆಳಭಾಗದಲ್ಲಿ ಬೆಂಕಿ ಹೊತ್ತಿದ್ದು ಚಾಲಕನಿಗೆ ಗೊತ್ತಾಗಲಿಲ್ಲ. ಇತರ ವಾಹನದವರು ಎಚ್ಚರಿಕೆ ನೀಡಿದ ತಕ್ಷಣವೇ ಚಾಲಕ ಕಾರನ್ನು ರಸ್ತೆ ಬದಿ ನಿಲುಗಡೆ ಮಾಡಿದರು. ಕಾರಿನಲ್ಲಿದ್ದ ಇನ್ನಿಬ್ಬರ ಜೊತೆ ಚಾಲಕ ಕೂಡ ಕೆಳಗಿಳಿದರು. ನಂತರ ಬೆಂಕಿಯ ಪ್ರಮಾಣ ವ್ಯಾಪಿಸಿತು’ ಎಂದು ಅಗ್ನಿಶಾಮಕ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಭಾರತ ಐತಿಹಾಸಿಕ ವಾಹನಗಳ ಒಕ್ಕೂಟ (ಎಫ್‌ಎಚ್‌ವಿಐ) ಮತ್ತು ಬೆಲ್ಜಿಯಂನ ಡೆಸ್ಟಿನೇಷನ್ ರ‍್ಯಾಲಿ ಸಂಸ್ಥೆ ಜೊತೆಗೂಡಿ ವಿಂಟೇಜ್ ಕಾರುಗಳ ಪ್ರವಾಸ ಹಮ್ಮಿಕೊಂಡಿದೆ. ಬೆಂಗಳೂರಿನಿಂದ ದೇಶದ 20 ಕಾರುಗಳು ಮತ್ತು ಗೋವಾದಿಂದ ವಿದೇಶದ 20 ಕಾರುಗಳು ಹಂಪಿಗೆ ಬಂದಿದ್ದವು. ಹೊಸಪೇಟೆಯಿಂದ ಕಾರುಗಳು ನಿರ್ಗಮಿಸುವಾಗ ಘಟನೆ ನಡೆದಿದೆ.

ಸಮಬಾಳು ಸಮಪಾಲು ತತ್ವದ ಕನಕ

● ನಿಂಗಪ್ಪ ಮುದೇನೂರು

ಕನಕ ಜಯಂತಿ ಇಂದು

ಮಧ್ಯಕಾಲೀನ ಸಮಾಜದಲ್ಲಿ ನಿಂತುಕೊಂಡು ಕನಕದಾಸರು ‘ಕಲಿ ಏರಿ ಬಂತು’ ಎನ್ನುವ ಕೀರ್ತನೆಯನ್ನು ಬರೆಯುವ ಮೂಲಕ ತಮ್ಮ ಬಂಡುಕೋರ ಮನೋಧರ್ಮವನ್ನು ತೋರಿರುವರು. ಅವರ ರಾಮಧಾನ್ಯಚರಿತೆ ಒಂದೇ ಸಾಕು ಎಲ್ಲ ಕಾಲಮಾನಕ್ಕೂ ಕನ್ನಡಿ ಹಿಡಿಯಲು. ಅದರ ಸಣ್ಣ ಸಣ್ಣ ಬಿಂಬಗಳಂತೆ ಪ್ರಖರ ವೈಚಾರಿಕ ಚಿಂತನೆಯನ್ನು ಕನಕದಾಸರು ತಮ್ಮ ಹಲವು ಕೀರ್ತನೆಗಳಲ್ಲಿ, ಕೃತಿಗಳ ಒಡಲಲ್ಲಿ ಸಾರಿರುವರು.

ಅತ್ತೆ ಸೊಸೆಯಾಗುವ, ಸೊಸೆ ಅತ್ತೆಯಾಗುವ, ಪುತ್ರ ಪಿತನಾಗುವ, ಪಿತ ಪುತ್ರನಾಗುವ ಇಂತಹ ಕೌಟುಂಬಿಕ ಯಾಜಮಾನ್ಯ ವ್ಯವಸ್ಥೆಯ ನಡುವೆ ತಮ್ಮ ಅನ್ನ ವಸ್ತ್ರಗಳಿಂದ ಚೆನ್ನಾಗಿ ಬಾಳುವವರನ್ನೂ ಭಿನ್ನ ತಂತ್ರವ ಮಾಡಿ ಕೆಡಿಸುತ್ತಿರುವ ಜನರ ಕುರಿತು ಕನಕ ಮಾತನಾಡಿದರು.

ಸತ್ಯ–ಧರ್ಮಗಳೆಲ್ಲ ಎತ್ತಪೋದವೋ ಕಾಣೆ. ಉತ್ತಮರ ಜೀವನಕ್ಕೆ ದಾರಿ ಇಲ್ಲವೇ ಎನ್ನುವ ಆತಂಕಭರಿತ ಮಾತುಗಳಲ್ಲೇ ಕನಕರು, ನಿತ್ಯದಲ್ಲಿ ಕಳವು ಮಾಡುವ, ವ್ಯಭಿಚಾರ ಮಾಡುವ, ಅರ್ಥಸಂಪದರಾಗಿ ಮೆರೆಯುವ ಗರ್ವಿಗಳು ಇರುವಾಗ ಹರಿಹರರ ಪೂಜೆಗಳು ಹಗರಣಗಳಾಗದೆ ಇರಲು ಸಾಧ್ಯವೇ ಎನ್ನುವ ನಿತ್ಯಸತ್ಯದ ಮಾತುಗಳನ್ನು ಪ್ರಶ್ನೆಯಾಗಿಸಿದ್ದಾರೆ. ವಿಜಯನಗರ ಸಾಮ್ರಾಜ್ಯದ ಒಳ–ಹೊರಗನ್ನು ಚೆನ್ನಾಗಿ ಬಲ್ಲವರಾಗಿದ್ದ ಕನಕದಾಸರು ತಮ್ಮ ಮೋಹನತರಂಗಿಣಿ ಹಾಗೂ ರಾಮಧಾನ್ಯಚರಿತೆ ಕಾವ್ಯಗಳಲ್ಲಿ ಕಾಲಮಾನದ ಕಡು ಚರಿತ್ರೆಯನ್ನು ಕಟ್ಟಿಕೊಟ್ಟಿರುವರು. ಅವರ ಸಾಹಿತ್ಯದೊಳಗಿರುವ ವಿಜಯನಗರದ ಇತಿಹಾಸ ನಮಗೆ ಮುಖ್ಯವಾಗಲೇ ಇಲ್ಲ. ಆ ಕಾಲದ ಕವಿ ಕೃತಿಗಳನ್ನು ಶೋಧಿಸಿದರೆ ಪ್ರಭುತ್ವದ ಚರಿತ್ರೆಯಷ್ಟೇ ಅಲ್ಲ, ಜನಚರಿತ್ರೆಯೂ ತೆರೆದುಕೊಳ್ಳುತ್ತದೆ.

ಭಕ್ತಿ ಎನ್ನುವುದು ಆಡಂಬರವಾಗಬಾರದು. ದೇವಾಲಯಗಳು ವ್ಯಾಪಾರ ಕೇಂದ್ರಗಳಾಗಬಾರದು. ಪುರೋಹಿತರು ಜನಸಾಮಾನ್ಯರ ವಿರೋಧಿಗಳಾಗಬಾರದು. ದೇವರು ಧರ್ಮದ ಹೆಸರಿನಲ್ಲಿ ಕೇಡನ್ನು ಬಯಸುವ ಸಂಗತಿಗಳಿಂದ ಮುಕ್ತವಾದ ಮಾನವ ಸಮಾಜ ರೂಪಗೊಳ್ಳಬೇಕಾದ ಸಂಗತಿಗಳತ್ತ ಕನಕದಾಸರು ನಮ್ಮ ಗಮನ ಸೆಳೆಯುತ್ತಾರೆ. ಕನಕರು ನಂಬಿಕೆಯಲ್ಲಿ ವಿಶ್ವಾಸ ಇಟ್ಟವರು. ಸಮಾಜದ ಹಲವು ವೈರುಧ್ಯಗಳಿಗೆ ಸಮತೆಯ ಹಕ್ಕುಗಳನ್ನು ಒದಗಿಸಿದವರು. ದ್ವೇಷ ಇರುವಲ್ಲಿ ಪ್ರೀತಿಯ ಜೇನ ಹನಿಸಿದವರು. ಜನಕ ಹಿತದವನೆಂದು ನಂಬಬಹುದೇ, ಸಹೋದರನು ಮಮತೆ ಉಳ್ಳವನೆಂದು ನಂಬಬಹುದೇ; ಅದಿರಲಿ, ದೇಹಾನುಬಂಧಗಳೇ ತನಗೆ ಬಂಧುಗಳೆಂದು ಮನದ ನಿಚ್ಚಳವಾಗಿ ನಂಬಬಹುದೇ, ಆರು ಹಿತದವರೆಂದು ನಂಬುವುದು? ಈ ಪ್ರಶ್ನೆಗಳನ್ನ ನಾವು ವರ್ತಮಾನದಲ್ಲೂ ಕೇಳಿಕೊಳ್ಳಬಹುದು. ಕನಕರು ಇಂದು ನಮ್ಮ ಮಧ್ಯೆ ನಿಂತು ಮತ್ತೆ ಕೇಡುಗಳಿಲ್ಲದ, ಜಾತಿ, ವರ್ಗ ಅಸಮಾನತೆಗಳಿಲ್ಲದ ಭಾರತೀಯ ಸಮ ಸಮಾಜದ ಕನಸ ಬಿತ್ತುವವರಾಗಿ ಕಾಣಿಸುತ್ತಾರೆ.

ಕನಕರೇ ಒಂದೆಡೆ ಹೇಳಿರುವಂತೆ ‘ಗಳಿಸದಿರು ಸೀಮೆಯನು ಗಳಿಸದಿರು ದ್ರವ್ಯವನು...’ ಇದು ವರ್ತಮಾನದಲ್ಲಾಗಲಿ, ಭವಿಷ್ಯದಲ್ಲಾಗಲಿ ಸಾಧ್ಯವೇ?

ಸೀಮೆಯನ್ನು ಗಳಿಸಿ, ಭೂಮಿಯನ್ನು ನಾವು ಹೇಗೆ ಬಂಜರು ಮಾಡಿದ್ದೇವೆ. ಭೂಮಿಯ ಒಡಲಲ್ಲಿರುವ ಬೇರುಗಳನ್ನು ನಾವು ಹೇಗೆಲ್ಲಾ ನಾಶ ಮಾಡಿದ್ದೇವೆ. ಧನ ಕನಕ ಸಂಪತ್ತನ್ನು ನಾವು ಹೇಗೆ ಲೂಟಿ ಮಾಡಿದ್ದೇವೆ. ನಮ್ಮ ಸಾಮಾಜಿಕ ಅಧಃಪತನ, ರಾಜಕೀಯ ಹೊಸ ಪತನಗಳ ನಡುವೆ ಮಾನವೀಯ ಜೀವಸೆಲೆಯೇ ಇಂದು ಕಣ್ಮರೆಯಾಗುತ್ತಿರುವ ಕಾಲಮಾನದಲ್ಲಿ ಕನಕರ ನುಡಿಯನ್ನು, ಸಂತರ ನುಡಿಯನ್ನು ಬಾಳಿಸುವವರು ಯಾರು ಎನ್ನುವ ಪ್ರಶ್ನೆ ನಮ್ಮೆದುರಿಗಿದೆ.

‘ಮುತ್ತು ಬಂದಿದೆ ಕೇರಿಗೆ ಜನರು ಕೇಳಿ ಭಕ್ತಿಯುಳ್ಳವರೆಲ್ಲ ಕಟ್ಟಿಕೊಳ್ಳಿ ಸೆರಗಿನಲ್ಲಿ’ ಎಂದು ತಮ್ಮನ್ನು ತಾವೇ ಸುಜ್ಞಾನಕ್ಕೆ ಒಡ್ಡಿಕೊಂಡು ದಾಸಪಂಥದ ಯುಗಮಾನವನ್ನು ಕಾವ್ಯಗಂಧದ ಮೂಲಕ ಪಸರಿಸಿದ ಸಂತರು ಕನಕದಾಸರು. ಬದುಕುವ ಹಕ್ಕು, ಸ್ವಾಭಿಮಾನ, ಹೊಸ ಅರಿವು, ಆತ್ಮವಿಶ್ವಾಸವನ್ನು ತುಂಬಿದವರು ಅವರು. ದುಡಿಮೆ ಮತ್ತು ಶ್ರಮಕ್ಕೆ ತಮ್ಮ ತನುವಿನ ನೇಗಿಲು ನೀಡಿದವರು. ಬಿತ್ತಿ ಬೆಳೆಯುವುದರ ಸಮತೆಯನು ಪ್ರಜ್ಞಾಪೂರ್ವಕವಾಗಿ ಸಾರಿದವರು.

ಕನಕರೇ ನುಡಿವಂತೆ- ‘ಒಳಗಿವಿಯಲ್ಲಿ ಕಾಣೋ ನಾದದ ಬೇರ’. ಕನಕದಾಸರ ಕಾವ್ಯದ ಕರುಳ ಸಂವಾದಗಳೇ ಎಣಿಕೆಗೆ ನಿಲುಕಲಾರದಷ್ಟು. ಅವರು ಎಷ್ಟೊಂದು ಆಧ್ಯಾತ್ಮಿಕವಾದಿಯೋ ಅಷ್ಟೇ ಪ್ರಖರ ವಿಚಾರವಂತರು ಕೂಡ. ದೇವನಾಗಲೀ, ಮನುಷ್ಯನಾಗಲೀ ಬದ್ಧತೆ ಇರಬೇಕು ಎಂದು ನಂಬಿದವರು. ಕೆಳ ಹಂತದಿಂದ ಮೇಲು ಹಂತಕ್ಕೆ ಮುಟ್ಟುವ ಸಾಂಸ್ಕೃತಿಕ ವ್ಯವಧಾನವಂತೂ ಕನಕರಲ್ಲಿ ಅಪಾರವಾಗಿದೆ. ಹಾಗಾಗಿ ನಾವು ಕನಕರೊಂದಿಗೆ ಇಂದೂ ಮತ್ತು ನಾಳೆಯೂ ಸಂವಾದಿಸುತ್ತಲೇ ಇರಬಹುದು.



ರೆಸಾರ್ಟ್ ಈಜುಕೊಳದಲ್ಲಿ ಮೂವರು ಯುವತಿಯರ ಸಾವು

ಒಂದನೇ ಪುಟದಿಂದ...

ಸುರಕ್ಷಾ ಲೋಪ?: ರೆಸಾರ್ಟ್‌ನ ಈಜುಕೊಳದ ಸುರಕ್ಷಾ ಕ್ರಮಗಳಲ್ಲಿ ಲೋಪ ಕಂಡುಬಂದಿವೆ ಎಂದು ಆಯುಕ್ತರು ತಿಳಿಸಿದ್ದಾರೆ.

‘ರೆಸಾರ್ಟ್‌ಗಳ ಈಜುಕೊಳಗಳಲ್ಲಿ ಜೀವರಕ್ಷಾ ಪರಿಕರಗಳು ಕಡ್ಡಾಯವಾಗಿ ಇರಬೇಕು, ಸುರಕ್ಷಾ ಸಿಬ್ಬಂದಿಯೂ ಇರಬೇಕು. ಇದ್ಯಾವುದೂ ಈ ಕೊಳದಲ್ಲಿ ಇರಲಿಲ್ಲ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದಿದ್ದಾರೆ.

‘ಸುರಕ್ಷತೆಗೆ 7 ಮಂದಿ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ ಎಂದು ರೆಸಾರ್ಟ್‌ನ ಆಡಳಿತದವರು ತಿಳಿಸಿದ್ದಾರೆ. ಆದರೆ ಮುಳುಗುತ್ತಿದ್ದ ವೇಳೆ ಯುವತಿಯರು ನೆರವಿಗಾಗಿ ಕೂಗಿದಾಗ ಯಾರೊಬ್ಬರೂ ಅಲ್ಲಿ ಇರಲಿಲ್ಲ ಎಂದು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳಿಂದ ಖಾತರಿಯಾಗಿದೆ. ಆಡಳಿತದವರ ನಿರ್ಲಕ್ಷ್ಯ ಮತ್ತು ಲೋಪ ಸ್ಪಷ್ಟವಾಗಿ ಎದ್ದುಕಂಡಿದೆ’ ಎಂದು ಆಯುಕ್ತರು ವಿವರಿಸಿದ್ದಾರೆ.

‘ಸ್ಥಳ ಮಹಜರು ನಡೆಸಿದ ನಂತರ ರೆಸಾರ್ಟ್‌ಗೆ ಬೀಗ ಹಾಕಲಾಗಿದೆ. ವಾಣಿಜ್ಯ ಪರವಾನಗಿ ಮತ್ತು ಪ್ರವಾಸೋದ್ಯಮ ಚಟುವಟಿಕೆಗೆ ನೀಡಿದ್ದ ಅನುಮತಿಯನ್ನು ರದ್ದು ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಪಿಡಿಒ ಪರೀಕ್ಷೆ: ಕೆಪಿಎಸ್‌ಸಿ ವಿರುದ್ಧ ಅಭ್ಯರ್ಥಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕೆಪಿಎಸ್‌ಸಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹೈದರಾಬಾದ್ ಕರ್ನಾಟಕ ಸ್ಥಳೀಯ ವೃಂದದ -97 ಹುದ್ದೆಗಳಿಗೆ ಭಾನುವಾರ ನಡೆದ ಪರೀಕ್ಷೆ ವೇಳೆ ಕಲಬುರಗಿ ನಗರ ಹಾಗೂ ರಾಯಚೂರು ಜಿಲ್ಲೆಯ ಸಿಂಧನೂರಿನ ಸರ್ಕಾರಿ ಕಾಲೇಜಿನಲ್ಲಿ ಕೊಠಡಿ ಮೇಲ್ವಿಚಾರಕರ ಎಡವಟ್ಟಿನಿಂದಾಗಿ ಸಕಾಲದಲ್ಲಿ ಪರೀಕ್ಷಾರ್ಥಿಗಳಿಗೆ ಪಶ್ನೆಪತ್ರಿಕೆ ದೊರೆಯದೇ ಅವಾಂತರಕ್ಕೆ ಕಾರಣವಾಯಿತು.

ಪರೀಕ್ಷಾ ಕೊಠಡಿಯಲ್ಲಿನ ಅರ್ಧ ಪರೀಕ್ಷಾರ್ಥಿಗಳಿಗೆ ಮಾತ್ರ ಪಶ್ನೆಪತ್ರಿಕೆ ಕೊಟ್ಟು, ಉಳಿದ ಅರ್ಧ ಅಭ್ಯರ್ಥಿಗಳಿಗೆ ಪಶ್ನೆಪತ್ರಿಕೆ ಕೊಡಲು ಅರ್ಧತಾಸು ವಿಳಂಬ ಮಾಡಲಾಯಿತು. ಅಲ್ಲದೇ ಮೊದಲೇ ಒಡೆದ ಕವರ್‌ನಲ್ಲಿದ್ದ ಪ್ರಶ್ನೆ ಪತ್ರಿಕೆಗಳನ್ನು ಅಭ್ಯರ್ಥಿಗಳಿಗೆ ನೀಡಿದ್ದರಿಂದ ಸಂಶಯಗೊಂಡ ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಯೇ ಲೀಕ್ ಆಗಿದೆ ಎಂದು ಭಾವಿಸಿ ಪರೀಕ್ಷಾ ಕೊಠಡಿಗಳಿಂದ ಹೊರಗೆ ಬಂದು ಕುಷ್ಟಗಿ–ರಾಯಚೂರು ಹೆದ್ದಾರಿ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ಪರೀಕ್ಷಾ ಕೇಂದ್ರದಲ್ಲಿ ಮೇಲ್ವಿಚಾರಕರ ಎಡವಟ್ಟು
- ಪರೀಕ್ಷಾ ಸಿಬ್ಬಂದಿಯಿಂದ ಆಗದ ಸಮಯ ಪಾಲನೆ

ಒಂದು ಬ್ಲಾಕ್‌ನಲ್ಲಿ 24 ಅಭ್ಯರ್ಥಿಗಳು ಇದ್ದರೂ ಒಂದೇ ಬಂಡಲ್ ತಂದು 12 ಅಭ್ಯರ್ಥಿಗಳಿಗೆ ಮಾತ್ರ ಪ್ರಶ್ನೆ ಪತ್ರಿಕೆ ವಿತರಿಸಲಾಯಿತು. 12 ಪರೀಕ್ಷಾರ್ಥಿಗಳಿಗೆ ಅರ್ಧಗಂಟೆ ಕಳೆದರೂ ಪ್ರಶ್ನೆ ಪತ್ರಿಕೆ ಕೊಡಲಿಲ್ಲ. ಇದರಿಂದಾಗಿ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಿಂದ ಹೊರಗೆ ಬಂದು ಆಕ್ರೋಶ ವ್ಯಕ್ತಪಡಿಸಿದರು.

ಕಲಬುರಗಿಯ ಪರೀಕ್ಷಾ ಕೇಂದ್ರವೊಂದರಲ್ಲಿ ನಿಗದಿತ ಸಮಯಕ್ಕಿಂತ 20 ನಿಮಿಷ ತಡವಾಗಿ ಪ್ರಶ್ನೆಪತ್ರಿಕೆಗಳನ್ನು ವಿತರಿಸಲಾಯಿತು. ಪತ್ರಿಕೆಯ ಬಂಡಲ್ ಸೀಲ್ ಆಗಿಲ್ಲದೇ ಇರುವುದರಿಂದ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂದು ಅಭ್ಯರ್ಥಿಗಳು ದೂರಿ ಪ್ರತಿಭಟನೆ ನಡೆಸಿದರು.

ರಾಯಚೂರು ಜಿಲ್ಲೆ ಸಿಂಧನೂರಿನ ಸರ್ಕಾರಿ ಕಾಲೇಜಿನ ಎದುರು ಪರೀಕ್ಷಾರ್ಥಿಗಳು ಪ್ರತಿಭಟಿಸಿದರು

ಮಾಜಿ ಸಂಸದ, ಅಧಿಕಾರಿಗಳ ಜಟಾಪಟಿ

ವಕ್ಫ್ ವಿವಾದಿತ ಜಾಗದಲ್ಲಿ ಹೈ ಡ್ರಾಮಾ

ಪ್ರಜಾವಾಣಿ ವಾರ್ತೆ

ಚಿಂತಾಮಣಿ (ಚಿಕ್ಕಬಳ್ಳಾಪುರ): ನಗರದ ಹೊರವಲಯದ ತಿಮ್ಮಸಂದ್ರ ಗ್ರಾಮದ ವಕ್ಫ್ ವಿವಾದಿತ ಜಮೀನಿಗೆ ಭಾನುವಾರ ಭೇಟಿ ನೀಡಲು ಮುಂದಾದ ಮಾಜಿ ಸಂಸದ ಮುನಿಸ್ವಾಮಿ ನೇತೃತ್ವದ ಬಿಜೆಪಿ ಕಾರ್ಯಕರ್ತರ ತಂಡ ಮತ್ತು ಪೊಲೀರ ನಡುವೆ ವಾಗ್ವಾದ ನಡೆಯಿತು.

ಕನಂಪಲ್ಲಿ ದೇವಾಲಯ ಬಳಿ ರೈತರ ಸಭೆ ನಡೆಸಿದ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ತಿಮ್ಮಸಂದ್ರದ ವಿವಾದಿತ ಜಮೀನಿಗೆ ಭೇಟಿ ನೀಡಲು ಮುಂದಾದಾಗ ಪೊಲೀಸರು ತಡೆದರು.

ಆಗ ಮಾಜಿ ಸಂಸದ ಮತ್ತು ಅಧಿಕಾರಿಗಳ ನಡುವೆ ಮಾತಿನ ಚಕಮಕಿ ನಡೆಯಿತು. ನಾಲ್ವರನ್ನು ಮಾತ್ರ ತಾವೇ ಸ್ಥಳಕ್ಕೆ ಕರೆದುಕೊಂಡು ಹೋಗುವುದಾಗಿ ಪೊಲೀಸ್ ಅಧಿಕಾರಿಗಳು ತಿಳಿಸಿದರು.

ರೈತರ ಜೊತೆಯಲ್ಲೇ ಸ್ಥಳಕ್ಕೆ ಹೋಗಬೇಕು ಎಂದು ಸಂಸದ ಮುನಿಸ್ವಾಮಿ ಪಟ್ಟು ಹಿಡಿದರು. ಅವರ ಹಟಕ್ಕೆ ಮಣಿದ ಅಧಿಕಾರಿಗಳು ಕೊನೆಗೆ ಹತ್ತು ಜನರ ತಂಡವನ್ನು ಸ್ಥಳದ ಸಮೀಪ ಹೋಗಲು ಅವಕಾಶ ಮಾಡಿಕೊಟ್ಟರು.

ಆದರೆ, ಈ ತಂಡಕ್ಕೆ ವಿವಾದಿತ ಜಮೀನಿನ ಒಳಗಡೆ ಹೋಗಲು ಅವಕಾಶ ನೀಡಲಿಲ್ಲ. ಇದರಿಂದ ಸಿಟ್ಟಿಗೆದ್ದ ಮಾಜಿ ಸಂಸದ ಅಲ್ಲಿಯೇ ಧರಣಿ ಕೂರುವುದಾಗಿ ಪಟ್ಟು ಹಿಡಿದರು. ಕಾನೂನು ಮೀರಿದರೆ ಬಂಧಿಸಬೇಕಾಗುತ್ತದೆ ಎಂದು ಪೊಲೀಸ್ ಅಧಿಕಾರಿಗಳು ಎಚ್ಚರಿಕೆ ನೀಡಿದರು. ಆಗ ಮತ್ತೊಮ್ಮೆ ಉಪವಿಭಾಗಧಿಕಾರಿ, ತಹಶೀಲ್ದಾರ್ ವಿರುದ್ಧ ಬಿಜೆಪಿ ಕಾರ್ಯಕರ್ತರು ಮುಗಿಬಿದ್ದರು.

ಚಿಕ್ಕಬಳ್ಳಾಪುರ ಹಾಗೂ ಕೋಲಾರ ಎಸ್‌ಪಿ, ತಲಾ ಮೂವರು ಎಎಸ್‌ಪಿ, ಮೂವರು ಡಿವೈಎಸ್‌ಪಿಗಳು ಈ ವೇಳೆ ಸ್ಥಳದಲ್ಲಿದ್ದರು. ಐದು ಕೆಎಸ್‌ಆರ್‌ಪಿ ತುಕಡಿ ಹಾಗೂ ಎರಡು ಜಿಲ್ಲೆಗಳ ಪೊಲೀಸರನ್ನು ನಿಯೋಜಿಸಲಾಗಿತ್ತು.

ತಿಮ್ಮಸಂದ್ರ ಗ್ರಾಮದ ಸರ್ವೆ ನಂಬರ್ 13 ಮತ್ತು 20 ಜಮೀನಿನಲ್ಲಿ ಉಳುಮೆ ಮಾಡುವ ಸಂಬಂಧ ರೈತರು ಮತ್ತು ಜಾಮಿಯಾ ಮಸೀದಿ ಸಮಿತಿ ಪದಾಧಿಕಾರಿಗಳ ನಡುವೆ ಶುಕ್ರವಾರ ಜಟಾಪಟಿ ನಡೆದಿತ್ತು. ಪೊಲೀಸರು ಮಧ್ಯ ಪ್ರವೇಶಿಸಿ ಎರಡೂ ಗುಂಪುಗಳನ್ನು ಸಮಾಧಾನಪಡಿಸಿ ಕಳಿಸಿದ್ದರು. ಸ್ಥಳದಲ್ಲಿ ಪೊಲೀಸ್ ಕಾವಲು ಹಾಕಲಾಗಿತ್ತು.

ಚಿಂತಾಮಣಿಯ ಕನಂಪಲ್ಲಿ ದೇವಾಲಯದ ಬಳಿ ಜಮಾಯಿಸಿದ್ದ ಬಿಜೆಪಿ ಕಾರ್ಯಕರ್ತರು ಮತ್ತು ಪೊಲೀಸರು

‘ಕಾನೂನು ಸುವ್ಯವಸ್ಥೆ ಕದಡಿದರೆ ಸುಮ್ಮನಿರಲ್ಲ’

ಬೆಂಗಳೂರು: ‘ಬಿಜೆಪಿಯವರು ವಕ್ಫ್ ಆಸ್ತಿ ವಿಷಯವನ್ನು ರಾಜಕೀಯ ಅಸ್ತ್ರ ಮಾಡಿಕೊಳ್ಳುತ್ತಿದ್ದಾರೆ. ಕೋಮುಗಲಭೆ, ಶಾಂತಿಯನ್ನು ಕದಡಲು ಅವರು ಏನು ಬೇಕಾದರೂ ಮಾಡಬಹುದು. ಕಾನೂನು ಸುವ್ಯವಸ್ಥೆಗೆ ತೊಂದರೆ ಮಾಡಿದರೆ ಸುಮ್ಮನೆ ಇರುವುದಿಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಎಚ್ಚರಿಕೆ ನೀಡಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ವಕ್ಫ್ ವಿಚಾರದಲ್ಲಿ ಬಿಜೆಪಿಯವರು ಪಾದಯಾತ್ರೆ ಹಮ್ಮಿಕೊಂಡಿದ್ದಾರೆ. ಇದು ಮುಂದೆ ಯಾವ ಹಂತಕ್ಕೆ ಹೋಗುತ್ತದೆ ಎನ್ನುವುದನ್ನು ಊಹೆ ಮಾಡಲು ಆಗುವುದಿಲ್ಲ’ ಎಂದೂ ಹೇಳಿದರು.

ಅರ್ಹತೆ ಸಡಿಲಿಸಿದ್ದಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ಎಂಜಿನಿಯರಿಂಗ್ ಪದವಿ ಹೊಂದಿರುವವರೂ ಅರ್ಜಿ ಸಲ್ಲಿಸಬಹುದು ಎಂದು ರಾಜ್ಯ ಸರ್ಕಾರ ಹೊರಡಿಸಿರುವ ನೇಮಕಾತಿ ಅಧಿಸೂಚನೆಗೆ ಆಕ್ಷೇಪ ವ್ಯಕ್ತವಾಗಿದೆ.

ಅರಣ್ಯ ಮತ್ತು ಪರಿಸರ ಇಲಾಖೆ ಈ ಸಂಬಂಧ ಇದೇ 11ರಂದು ಅಧಿಸೂಚನೆ ಹೊರಡಿಸಿತ್ತು.

2020ರ ಜೂನ್ 19ರಂದು ಹೊರಡಿಸಿದ್ದ ಮಾರ್ಗಸೂಚಿಯ ಪ್ರಕಾರ, ಪರಿಸರ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದವರು ಮತ್ತು ಪರಿಸರ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದವರನ್ನಷ್ಟೇ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ಪರಿಗಣಿಸಬಹುದು.

‘ಆದರೆ ಸರ್ಕಾರದ ಈಗಿನ ಅಧಿಸೂಚನೆ 2020ರ ಮಾರ್ಗಸೂಚಿಗೆ ವಿರುದ್ಧವಾಗಿದೆ. ಜತೆಗೆ ಸರ್ಕಾರವು ಹೈಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣ-ಪತ್ರಕ್ಕೂ ವ್ಯತಿರಿಕ್ತವಾಗಿದೆ’ ಎಂದು ಆಂಜನೇಯ ರೆಡ್ಡಿ ಆರೋಪಿಸಿದ್ದಾರೆ.

ಶಿವಲಿಂಗೇಶ್ವರ ಸ್ವಾಮೀಜಿ ಲಿಂಗೈಕ್ಯ

ಶಿವಲಿಂಗೇಶ್ವರ ಸ್ವಾಮೀಜಿ

ಹುಬ್ಬಳ್ಳಿ: ತಾಲ್ಲೂಕಿನ ಮಂಟೂರು ಮತ್ತು ಕಲಘಟಗಿ ತಾಲ್ಲೂಕಿನ ಬಮ್ಮಿಗಟ್ಟಿ ಅಡವಿಸಿದ್ಧೇಶ್ವರಮಠದ ಪೀಠಾಧಿಪತಿ ಶಿವಲಿಂಗೇಶ್ವರ ಸ್ವಾಮೀಜಿ (82) ಭಾನುವಾರ ನಗರದ ಆಸ್ಪತ್ರೆಯಲ್ಲಿ ಲಿಂಗೈಕ್ಯರಾದರು. ಪಾರ್ಥಿವ ಶರೀರವನ್ನು ಮಂಟೂರು ಮಠದ ಅವರಣದಲ್ಲಿ ಭಕ್ತರ ದರ್ಶನಕ್ಕೆ ಇಟ್ಟು, ಸಂಜೆ ಅಂತ್ಯಕ್ರಿಯೆ ನಡೆಸಲಾಯಿತು.

ಶಿವಲಿಂಗೇಶ್ವರ ಸ್ವಾಮೀಜಿ ಅವರು ಹುಬ್ಬಳ್ಳಿ ಹರುಷದೇವರ ಮಠ, ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಗೆರಕೊಪ್ಪ-ಬೊಪ್ಪಗೊಂಡನಕೊಪ್ಪ ಇಂದೂಧರೇಶ್ವರ ಮಠ, ಬೆಳ್ಳಿಗಾವಿಯ ಶ್ರೀಅಲ್ಲಮಪ್ರಭು ಅನುಭಾವ ಪೀಠ ವಿರಕ್ತಮಠ ಮತ್ತು ಬೀದರ ಜಿಲ್ಲೆ ಬಸವಕಲ್ಯಾಣ ಕೆಳಗಿ ಮಠದ ಪೀಠಾಧಿಪತಿಗಳಾಗಿದ್ದರು.

ಶಿವಲಿಂಗೇಶ್ವರ ಸ್ವಾಮೀಜಿ ಅನಾರೋಗ್ಯದಿಂದ ಬಳಲುತ್ತಿದ್ದ ಹಿನ್ನೆಲೆಯಲ್ಲಿ ಅವರ ಕೋರಿಕೆ ಮೇರೆಗೆ ಎರಡು ದಿನಗಳ ಹಿಂದೆ ಇಂದೂಧರ ದೇವರು ಅವರನ್ನು ಮಂಟೂರು ಮತ್ತು ಬಳ್ಳಿಗಾವಿಯ ಅಲ್ಲಮಪ್ರಭು ಅನುಭಾವ ಪೀಠದ ಉತ್ತರಾಧಿಕಾರಿಯನ್ನಾಗಿ ಸಾಂಕೇತಿಕವಾಗಿ ಘೋಷಿಸಲಾಗಿತ್ತು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂ:ಮುಇಂವಿ/ಆರ್ ಟಿ ಮತ್ತು ಆರ್&ಡಿ/ಕಾಇಂ(ವಿ)/ಕೆಸಿಒ–79/2024–25/ 400 ದಿನಾಂಕ: 16.11.2024

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ/ಕಾಮಗಾರಿಯ ವಿವರ
ಕವಿಪ್ರನಿನಿ/2024–25/ಆರ್‌ಸಿ/ವರ್ಕ್_ಇಂಡೆಂಟ್ 1473
ದರ ಒಪ್ಪಂದ ಆಧಾರದ ಮೇಲೆ 220 ಕೆ.ವಿ ಮತ್ತು ಅಧಿಕ ವೋಲ್ಟೇಜ್ ಶ್ರೇಣಿಯ ಪರಿವರ್ತಕಗಳನ್ನು ಡಿಸ್‌ಮ್ಯಾಂಟಲ್ ಮಾಡುವುದು, ಸಾಗಿಸುವುದು (to & fro), ರಿಪೇರಿ ಮಾಡುವುದು, ಪರೀಕ್ಷಿಸುವುದು, ಜೋಡಣೆ ಮಾಡಿ ಸ್ಥಾಪಿಸುವುದು ಮತ್ತು ಕವಿಪ್ರನಿನಿಯು ನಿಯೋಜಿಸಿದ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕಾರ್ಯಾರಂಭಗೊಳಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.inನ ಹೈಪರ್‌ಲಿಂಕ್ ’ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ’ ಅಥವಾ https://kppp.karnataka.gov.inನಲ್ಲಿ ಲಾಗಿನ್ ಆಗಿ **ದಿನಾಂಕ 21.11.2024 ರಂದು ಅಪರಾಹ್ನ 15.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 17.12.2024 ರಂದು ಅಪರಾಹ್ನ 15.00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್(ವಿದ್ಯುತ್),
ಆರ್‌ಟಿ ಮತ್ತು ಆರ್&ಡಿ, ಕವಿಪ್ರನಿನಿ,
5ನೇ ಮಹಡಿ, ಕಾವೇರಿ ಭವನ, ಬೆಂಗಳೂರು–560009

ಹಂಪಿಯಲ್ಲಿ ಅರಿವು ಶಾಲೆಯ ಶೈಕ್ಷಣಿಕ ಪ್ರವಾಸ (ಸಾಂದರ್ಭಿಕ ಚಿತ್ರ)

ಶೈಕ್ಷಣಿಕ ಪ್ರವಾಸ ಆನಂದವೂ.. ಅನ್ವೇಷಣೆಯೂ..

ಕೆ.ನರಸಿಂಹಮೂರ್ತಿ

ಪ್ರವಾಸವೆಂದರೆ ಆನಂದ ಮತ್ತು ಅನ್ವೇಷಣೆಯ ಅನುಭವಗಳ ಗಣಿ. ಚಿಕ್ಕಮಕ್ಕಳಾದರೂ, ಇಳಿವಯಸ್ಸಿನವರಾದರೂ ಇವೆರಡಕ್ಕೇ ಆದ್ಯತೆ. ಸ್ಥಳ ಹೊಸದಾಗಿರಲಿ, ಹಳೆಯದಾಗಿರಲಿ, ಸ್ನೇಹಿತರೊಂದಿಗೆ ಚಾರಣವಿರಲಿ, ಸಹಪಾಠಿಗಳ ಜೊತೆ ಸೈಕಲ್ ಪ್ರವಾಸವಿರಲಿ, ಕೌಟುಂಬಿಕ ಪ್ರವಾಸವಿರಲಿ, ದೂರದ-ಹತ್ತಿರದ ಊರುಗಳಿಗೆ ಶೈಕ್ಷಣಿಕ ಪ್ರವಾಸವಿರಲಿ, ಆನಂದ-ಅನ್ವೇಷಣೆಗಳಿಲ್ಲದೆ ಅಪೂರ್ಣ.

ಸರಿ, ಸುರಕ್ಷತೆ ಬೇಡವೆ ಎಂದು ಕೇಳಿಕೊಳ್ಳಲೇಬೇಕು. ಸುರಕ್ಷಿತವಲ್ಲದ ಪ್ರವಾಸದಲ್ಲಿ ಆತಂಕ, ನೋವುಗಳೇ ಹೆಚ್ಚಿರುತ್ತವೆ. ಹೀಗಾಗಿಯೇ, ಪ್ರವಾಸ ಆಯೋಜನೆ ಮಾಡುವ ಪ್ರತಿಯೊಬ್ಬರೂ ಸುರಕ್ಷತೆಗೆ ಒತ್ತು ಕೊಡಲೇಬೇಕು.

ಸಿ.ಎಸ್. ಜನಾರ್ದನ್

ಶೈಕ್ಷಣಿಕ ಪ್ರವಾಸಕ್ಕೆ ಬರುವ ಬಹುತೇಕ ವಿದ್ಯಾರ್ಥಿಗಳಲ್ಲಿ ಆನಂದ ಮತ್ತು ಅನ್ವೇಷಣೆಯ ಅನುಭವಗಳಿಗೆ ತೆರೆದುಕೊಳ್ಳುವ ಅತ್ಯುತ್ಸಾಹವಿರುತ್ತದೆ. ಪ್ರವಾಸಿತಾಣ ಎಂಥ ಅಪಾಯಕಾರಿಯೇ ಆಗಿದ್ದರೂ, ಮನೆಯಲ್ಲಿ ಅಪ್ಪ-ಅಮ್ಮ, ಶಾಲೆ-ಕಾಲೇಜಿನಲ್ಲಿ ಶಿಕ್ಷಕರು ಎಷ್ಟೇ ಮುನ್ನೆಚ್ಚರಿಕೆ ಕೊಟ್ಟಿದ್ದರೂ, ಅವರಿಗೆ ಸುರಕ್ಷತೆ ಎಂಬುದು ಎರಡನೇ ಆದ್ಯತೆಯೇ.

ಹಾಗೆಂದು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು-ಶಿಕ್ಷಕರು ಸುಮ್ಮನಿರುವಂತಿಲ್ಲ. ಪ್ರವಾಸಕ್ಕೆ ಬರುವ ಪ್ರತಿಯೊಬ್ಬ ವಿದ್ಯಾರ್ಥಿಯ ಸುರಕ್ಷತೆಯೂ ಅವರ ಜವಾಬ್ದಾರಿಯೇ ಆಗಿರುತ್ತದೆ. ಹೀಗಾಗಿ ಪ್ರವಾಸ ಹೊರಡುವ ಕೆಲವು ತಿಂಗಳ ಮುಂಚಿನಿಂದಲೇ ಯೋಜನೆ ಹಾಕಿಕೊಳ್ಳಬೇಕಾಗುತ್ತದೆ. ಅದು ಸುರಕ್ಷತೆಗೆ ಸಂಬಂಧಿಸಿದಂಥ ರೂಪುರೇಷೆ. ಅದು ಇಲ್ಲದಿದ್ದರೆ ಪ್ರವಾಸ ಬಹುಮಟ್ಟಿಗೆ ಪ್ರಯಾಸವೇ.

ಐತಿಹಾಸಿಕ, ಪಾರಂಪರಿಕ ಪ್ರವಾಸಿ ಸ್ಥಳಗಳು, ಸಮುದ್ರತೀರಗಳು, ನದಿ ತೀರಗಳು, ಕಾಡು-ಬೆಟ್ಟ, ಜಲಪಾತಗಳಿರುವ ಪ್ರದೇಶಗಳು- ಪ್ರವಾಸಿಗರು ಹೆಚ್ಚು ಇಷ್ಟಪಡುವ ತಾಣಗಳು. ಪಾರಂಪರಿಕ ತಾಣಗಳನ್ನು ಹೊರತುಪಡಿಸಿದರೆ, ಉಳಿದವು ಹೆಚ್ಚು ಮನಮೋಹಕವಾಗಿರುವಂತೆಯೇ ಅತಿ ಅಪಾಯಕಾರಿಯೂ ಆಗಿರುತ್ತವೆ. ಇಂಥ ಸ್ಥಳಗಳಲ್ಲೇ ಹೆಚ್ಚು ಮಂದಿ ಮೋಜಿಗಾಗಿ ಪ್ರಾಣ ಕಳೆದುಕೊಂಡ ಉದಾಹರಣೆಗಳೂ ಇವೆ. ಇಂಥ ಕಡೆಗೆ ಶೈಕ್ಷಣಿಕ ಪ್ರವಾಸ ಏರ್ಪಡಿಸುವುದು ನಿಜಕ್ಕೂ ಸವಾಲು. ಅಂಥ ಸ್ಥಳಗಳಿಗೆ ತೆರಳುವ ಮಾರ್ಗಗಳೂ ದುರ್ಗಮವೇ ಆಗಿರುತ್ತವೆ.

ಆನಂದವಿರಲಿ, ಅನಗತ್ಯ ಗಾಬರಿ ಬೇಡ

'ಸುರಕ್ಷತೆಯ ಹೆಸರಿನಲ್ಲಿ ಅನಗತ್ಯ ಗಾಬರಿಪಟ್ಟು, ವಿದ್ಯಾರ್ಥಿಗಳ ಆನಂದವನ್ನು ತಪ್ಪಿಸಬಾರದು, ಆತ್ಮವಿಶ್ವಾಸ ಕುಂದಿಸಬಾರದು' ಎನ್ನುತ್ತಾರೆ ಬಳ್ಳಾರಿಯ ನೂಪಾಸನಾ ಸಂಸ್ಥೆಯ ನಿರ್ದೇಶಕ ಎಂ.ಎ.ಶಕೀಬ್.

ಬಳ್ಳಾರಿಯ ಸಂಗನಕಲ್ಲು, ಸಂಡೂರಿನ ಬೆಟ್ಟಶ್ರೇಣಿ, ಹಂಪಿ, ಚಿತ್ರದುರ್ಗ, ಬೀದರ್, ಬೆಳಗಾವಿ ಸೇರಿದಂತೆ ರಾಜ್ಯದ ಪ್ರಖ್ಯಾತ ಬೆಟ್ಟಗುಡ್ಡಗಳಲ್ಲಿ ಟ್ರೆಕ್ಕಿಂಗ್ ಜತೆಗೆ, ರಾಕ್ ಕ್ಲೈಂಬಿಂಗ್, ಪ್ಯಾರಾ ಗ್ಲೈಡಿಂಗ್, ಪ್ಯಾರಾ ಜಂಪಿಂಗ್, ಝಿಪ್‌ಲೈನ್‌ನಂಥ ಸಾಹಸ ಚಟುವಟಿಕೆಗಳನ್ನು ಯಶಸ್ವಿಯಾಗಿ ಆಯೋಜಿಸಿರುವ ಅವರು, 'ತರಬೇತಿ ಪಡೆದ ತಜ್ಞರು, ಸುರಕ್ಷತಾ ಪರಿಕರಗಳಿದ್ದರೆ ಮಾತ್ರ ಯಾವುದೇ ಪ್ರವಾಸ ಅರ್ಥಪೂರ್ಣ' ಎನ್ನುತ್ತಾರೆ.

'ಪ್ರತಿ ಶೈಕ್ಷಣಿಕ ಪ್ರವಾಸವನ್ನು ಹಮ್ಮಿಕೊಳ್ಳುವ ಮುನ್ನ ಶಿಕ್ಷಣ ಸಂಸ್ಥೆಗಳು ಕೈಗೊಂಡ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸುವ ಪ್ರಯತ್ನ ಗಂಭೀರವಾಗಿ ನಡೆದರೆ, ಸಾವು ನೋವುಗಳನ್ನು ತಪ್ಪಿಸಬಹುದು' ಎಂಬುದು ಅವರ ಸಲಹೆ.

ನೂಪಾಸನಾ ಸಂಸ್ಥೆಯ ಚಾರಣದಲ್ಲಿ ಪಾಲ್ಗೊಂಡ ಮಕ್ಕಳು. (ಸಾಂದರ್ಭಿಕ ಚಿತ್ರ)

ಹೀಗಾಗಿ, ಪ್ರವಾಸಿ ತಾಣದಲ್ಲಿ ಸುರಕ್ಷತೆ ಮತ್ತು ಅಲ್ಲಿಗೆ ತೆರಳುವ ಮಾರ್ಗದಲ್ಲಿ ಸುರಕ್ಷತೆ –ಈ ಎರಡನ್ನೂ ಶೈಕ್ಷಣಿಕ ಪ್ರವಾಸದಲ್ಲಿ ಗಮನಿಸಲೇಬೇಕು. ಖಾಸಗಿ ಬಸ್ ಬುಕ್ ಮಾಡಿಕೊಂಡು ಹೋಗುವುದಾದರೆ ರಾತ್ರಿ ವೇಳೆ ಪ್ರಯಾಣವನ್ನು ಖಂಡಿತ ಮಾಡಬಾರದು. ರಾತ್ರಿ ಬಸ್ ಚಾಲನೆ ಮಾಡಿದ ಚಾಲಕರೇ ಮತ್ತೆ ಮಾರನೇ ದಿನವೂ ಬಸ್ ಚಾಲನೆ ಮಾಡಬೇಕಲ್ಲವೇ?

'ರಾತ್ರಿ ವೇಳೆ ಪ್ರಯಾಣ ಬಯಸುವ ಪ್ರವಾಸಗಳಾಗಿದ್ದರೆ, ಸ್ಲೀಪರ್ ಬಸ್ ಅಥವಾ ರೈಲಿನಲ್ಲಿ ಪ್ರಯಾಣಿಸುವುದು ಹೆಚ್ಚು ಸುರಕ್ಷಿತ' ಎನ್ನುತ್ತಾರೆ ಮೈಸೂರಿನ 'ಅರಿವು ಶಾಲೆ'ಯ ಕಾರ್ಯದರ್ಶಿ ಸಿ.ಎಸ್. ಜನಾರ್ದನ್.

ಯಾವುದೇ ಸ್ಥಳಕ್ಕೆ ಮಕ್ಕಳನ್ನು ಕರೆದೊಯ್ಯುವ ಮುನ್ನ, ಅವರು ಅಲ್ಲಿಗೆ ಮೊದಲು ಭೇಟಿ ಕೊಡುತ್ತಾರೆ. ಪ್ರವಾಸ ನಡೆಯುವ ಮತ್ತು ವಾಸ್ತವ್ಯ ಹೂಡುವ ಸ್ಥಳಗಳನ್ನು ಪರಿಶೀಲಿಸುತ್ತಾರೆ. ಅಲ್ಲಿ ಎಂಥ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎಂಬ ಯೋಜನೆ ಅಲ್ಲಿಯೇ ರೂಪಿಸಿ ವಾಪಸಾಗುತ್ತಾರೆ. ನಂತರ ಪ್ರವಾಸದ ಚಟುವಟಿಕೆಗಳು ಶುರುವಾಗುತ್ತವೆ. ಶಿಕ್ಷಕರಿಗೆ ಕಿರು ತರಬೇತಿಯೂ ನಡೆಯುತ್ತದೆ- ಇದು ಅವರು ಪ್ರತಿ ಪ್ರವಾಸಕ್ಕೂ ಮುನ್ನ ನಡೆಸುವ ಪ್ರಾಥಮಿಕ ಸಿದ್ಧತೆ.

'ಇಂಥ ಸಿದ್ಧತೆಗಳಿಂದಲೇ ಶೈಕ್ಷಣಿಕ ಪ್ರವಾಸ ಯಶಸ್ವಿಯಾಗುತ್ತದೆ' ಎಂಬುದು ಅವರು ಇದುವರೆಗೂ ನೆಚ್ಚಿಕೊಂಡಿರುವ ಸೂತ್ರ. ಈ ಸೂತ್ರವೇ ಅವರನ್ನು ವಿದ್ಯಾರ್ಥಿಸ್ನೇಹಿ ಪ್ರವಾಸದ ಯಶಸ್ವಿ ಆಯೋಜಕರನ್ನಾಗಿಸಿದೆ.

ಶಿಕ್ಷಕರ ಹೊಣೆಗಾರಿಕೆ ಏನು?

- ಮಕ್ಕಳ ಸುರಕ್ಷತೆಯಲ್ಲಿ ತಮ್ಮ ಪಾತ್ರವೇನು ಎಂಬ ಬಗ್ಗೆ ಶಿಕ್ಷಕರಿಗೆ ಅರಿವು ಮೂಡಿಸಬೇಕು. ಎಲ್ಲ ಶಿಕ್ಷಕರಲ್ಲೂ ಈ ಬಗ್ಗೆ ಸಮನ್ವಯ ಭಾವವಿರಬೇಕು.
- ಪ್ರವಾಸದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಲಭ್ಯವಿರುವ ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ವಿಭಜಿಸಿ, ತಂಡಗಳನ್ನಾಗಿ ಮಾಡಿ, ಪ್ರತಿ ತಂಡದ ಹೊಣೆಯನ್ನೂ ಪ್ರತಿ ಶಿಕ್ಷಕರಿಗೆ ವಹಿಸುವುದು ಹೆಚ್ಚು ಸುರಕ್ಷಿತ.
- ವಿದ್ಯಾರ್ಥಿಗಳ ಒಟ್ಟು ತಂಡವನ್ನು ಮುನ್ನಡೆಸುವವರು ಯಾರು?, ತಂಡದ ಮಧ್ಯಭಾಗದಲ್ಲಿ ಕಣ್ಗಾವಲಿಟ್ಟು ನಡೆಯುವವರು ಯಾರು?, ತಂಡದ ಕೊನೆಯಲ್ಲಿರುವ ವಿದ್ಯಾರ್ಥಿಯ ಹಿಂದೆ ಬರುವವರು ಯಾರು? ಎಂಬುದು ಮೊದಲೇ ಸ್ಪಷ್ಟವಾಗಬೇಕು. ಸಾಧ್ಯವಾದರೆ ಪ್ರತಿ ಶಿಕ್ಷಕರ ಬಳಿಯೂ ಚಿಕ್ಕ ಪ್ರಥಮ ಚಿಕಿತ್ಸೆಯ ಟೂಲ್ ಕಿಟ್ ಇರಬೇಕು.
- ಬಾಲಕ-ಬಾಲಕಿಯರು ಸಂಖ್ಯೆಗೆ ಅನುಗುಣವಾಗಿ ಎಷ್ಟು ಪುರುಷ ಮತ್ತು ಮಹಿಳಾ ಶಿಕ್ಷಕರಿರಬೇಕು ಎಂಬುದನ್ನೂ ಮೊದಲೇ ನಿರ್ಧರಿಸಬೇಕು. ಶಿಕ್ಷಕರ ಕೊರತೆ ಇದ್ದರೆ, ಕಾಳಜಿಯುಳ್ಳ ಇತರೆ ಸಿಬ್ಬಂದಿ ಅಥವಾ ಪೋಷಕರನ್ನೂ ಒಳಗೊಳ್ಳುವ ಬಗ್ಗೆ ಚಿಂತಿಸಬೇಕು.
- ಪ್ರವಾಸಕ್ಕೆ ಹೊರಡುವ ಸ್ಥಳಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮೊದಲೇ ಮಾಹಿತಿ ಕೊಡಬೇಕು. ತರಬೇಕಾದ ಸುರಕ್ಷತಾ ಸಾಮಗ್ರಿಗಳ ಬಗ್ಗೆಯೂ ತಿಳಿಸಿರಬೇಕು. ನಿರ್ದಿಷ್ಟ ಅನಾರೋಗ್ಯಕ್ಕೆ ನಿಯಮಿತವಾಗಿ ಔಷಧಿ ಬಳಸುತ್ತಿದ್ದರೆ, ಆ ಬಗ್ಗೆ ಪೋಷಕರಿಂದ ಮಾಹಿತಿ ಪಡೆದು, ಆ ಔಷಧಿ ಕೊಟ್ಟುಕೊಳಿಸುವಂತೆ ಸೂಚಿಸಬೇಕು.
- ಪ್ರವಾಸಿ ಸ್ಥಳದಲ್ಲಿ ಊಟ, ವಸತಿಯನ್ನು ಮೊದಲೇ ಖಚಿತಪಡಿಸಿಕೊಳ್ಳಬೇಕು. ಸ್ಥಳಕ್ಕೆ ಹೋದ ನಂತರ, ಸ್ಥಳೀಯರ ಪರಿಚಿತರನ್ನು ಗೋಗರೆಯುವಂತಿರಬಾರದು. ಹಣ ಉಳಿಸುವ ಉದ್ದೇಶದಿಂದ, ಪೂರ್ವ ಮಾಹಿತಿ ನೀಡದೆ, ಸಾಮೂಹಿಕ ಅನ್ನದಾಸೋಹ ನಡೆಯುವ ಸ್ಥಳಗಳನ್ನು ನೆಚ್ಚಿಕೊಂಡರೆ ಅನನುಕೂಲವೇ ಹೆಚ್ಚು.

ಎಂಬಿಎ, ಎಂಟೆಕ್ ಯಾವುದು ಸೂಕ್ತ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

- **ಸರ್, ಈಗ ದ್ವಿತೀಯ ಪಿಯು ಮಾಡುತ್ತಿದ್ದು, ಮನೆಯವರು ಮುಂದೆ ಎಂಬಿಬಿಎಸ್ ಮಾಡು ಎನ್ನುತ್ತಿದ್ದಾರೆ. ಆದರೆ, ನನಗೆ ಎಂಜಿನಿಯರಿಂಗ್ ಮಾಡುವಾಸೆಯಿದೆ. ಈ ಗೊಂದಲಕ್ಕೆ ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ.

ವೈದ್ಯರಾಗಲು ಸೇವಾ ಮನೋಭಾವ, ಜ್ಞಾಪಕ ಶಕ್ತಿ, ನಿಷ್ಠೆ, ಪ್ರಾಮಾಣಿಕತೆ, ಸಮಯದ ನಿರ್ವಹಣೆ, ವೃತ್ತಿ ಮತ್ತು ವೈಯಕ್ತಿಕ ಬದುಕಿನ ಸಮತೋಲನ ಅಗತ್ಯವಾದರೆ, ಎಂಜಿನಿಯರಿಂಗ್ ವೃತ್ತಿಗೆ ಗಣಿತದಲ್ಲಿ ತಜ್ಞತೆ, ವಿಶ್ಲೇಷಾತ್ಮಕ ಕೌಶಲ, ಯೋಜನೆಯ ನಿರ್ವಹಣೆ, ತಾಂತ್ರಿಕ ಕೌಶಲ ಅಗತ್ಯವಾಗುತ್ತದೆ. ಹಾಗಾಗಿ, ಸ್ವಾಭಾವಿಕ ಪ್ರತಿಭೆ, ಆಸಕ್ತಿ, ಒಲವು ಮತ್ತು ಕೌಶಲಗಳ ಮೌಲ್ಯಮಾಪನ ಮಾಡಿ, ವೈಯಕ್ತಿಕ/ಕುಟುಂಬದ ಮೌಲ್ಯಗಳು, ಸವಾಲುಗಳು, ಅಗತ್ಯಗಳು, ಧ್ಯೇಯಗಳನ್ನು ಗುರುತಿಸಿ, ವೃತ್ತಿ ಮತ್ತು ಕೋರ್ಸ್ ಆಯ್ಕೆ ಮಾಡುವುದು ಸೂಕ್ತ. ವೃತ್ತಿಯೋಜನೆಯ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=AwlDno1YduQ

- **ಮುಂದಿನ ವರ್ಷ ಬಿ.ಟೆಕ್ ಮುಗಿಸುತ್ತಿದ್ದೇನೆ. ನಂತರ ಎಂಬಿಎ ಅಥವಾ ಎಂ.ಟೆಕ್ ಮಾಡುವ ಆಲೋಚನೆಯಿದೆ. ನಿರ್ಧಾರ ಮಾಡುವುದು ಹೇಗೆ?**

ಹೆಸರು, ಊರು ತಿಳಿಸಿಲ್ಲ.

ನೀವು ಬಿ.ಟೆಕ್ ಯಾವ ವಿಭಾಗದಲ್ಲಿ ಮಾಡುತ್ತಿದ್ದೀರಿ ಎಂದು ತಿಳಿಸಿಲ್ಲ. ನಿಮ್ಮ ಆಸಕ್ತಿ, ಅಭಿರುಚಿ ಮತ್ತು ಕೌಶಲಗಳ ಮೌಲ್ಯಮಾಪನ ಮಾಡಿ ಯಾವ ಕ್ಷೇತ್ರದಲ್ಲಿ ವೃತ್ತಿಯನ್ನು ರೂಪಿಸಿಕೊಳ್ಳಬೇಕೆಂದು ನಿರ್ಧರಿಸಿ. ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿಯಿದ್ದಲ್ಲಿ ಎಂ.ಟೆಕ್ ಮಾಡಬಹುದು; ಮ್ಯಾನೇಜ್‌ಮೆಂಟ್ ಕ್ಷೇತ್ರ ಅಥವಾ ಅನುಭವದ ನಂತರ ಸ್ವಂತ ಉದ್ದಿಮೆಯನ್ನು ಮಾಡುವ ಆಸಕ್ತಿಯಿದ್ದರೆ ಎಂಬಿಎ ಮಾಡಬಹುದು. ಎಂಬಿಎ ಕೋರ್ಸಿನಲ್ಲಿ ವೃತ್ತಿಗೂ, ಜೀವನಕ್ಕೂ ಅಗತ್ಯವಾದ ಅನೇಕ ಮೂಲಭೂತ ತತ್ವಗಳ, ಮೌಲ್ಯಗಳ ಕಲಿಕೆಯಾಗುವುದರಿಂದ, ವೃತ್ತಿ ಮತ್ತು ಖಾಸಗೀ ಜೀವನಗಳೆರಡರಲ್ಲೂ ಯಶಸ್ಸನ್ನು ಸಾಧಿಸಲು ಅನುಕೂಲವಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ:

https://www.youtube.com/watch?v=7ex7tjtoMlw

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಸೆನ್ಸೊಡೈನ್ ಸ್ಕಾಲರ್‌ಷಿಪ್

ಸೆನ್ಸೊಡೈನ್‌ನ ತಯಾರಕರಾದ ಹೇಲಿಯಾನ್ ಇಂಡಿಯಾ ಪ್ರತಿಭಾನ್ವಿತರನ್ನು ಬೆಂಬಲಿಸಲು ಸ್ಕಾಲರ್‌ಷಿಪ್ ನೀಡುತ್ತಿದೆ.

- **ಅರ್ಹತೆ:** ಸರ್ಕಾರಿ ಮತ್ತು ಸರ್ಕಾರಿ-ಅನುದಾನಿತ ಕಾಲೇಜುಗಳಲ್ಲಿ ಮಾತ್ರವೇ ಬಿಡಿಎಸ್ ಕೋರ್ಸ್ ಮಾಡುತ್ತಿರುವ ಮೊದಲ ವರ್ಷದ ವಿದ್ಯಾರ್ಥಿಗಳು ಅರ್ಹರು. ಎಸ್ಸೆಸ್ಸೆಲ್ಸಿಯಲ್ಲಿ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. ನಾಲ್ಕು ವರ್ಷವೂ ಈ ಸ್ಕಾಲರ್‌ಷಿಪ್ ಬೇಕೆಂದರೆ ಪ್ರತಿ ಸೆಮಿಸ್ಟರ್‌ನಲ್ಲಿ ಶೇ 60ರಷ್ಟು ಅಂಕಗಳನ್ನು ಪಡೆಯಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ಎಲ್ಲ ಮೂಲಗಳಿಂದ ₹8,00,000ಕ್ಕಿಂತ ಹೆಚ್ಚಿರಬಾರದು.
- **ಆರ್ಥಿಕ ಸಹಾಯ:** 4 ವರ್ಷಕ್ಕೆ ₹ 4,20,000 (ಪ್ರತಿ ವರ್ಷಕ್ಕೆ ₹ 1,05,000)
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-11-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/pjvi/SSPPS4

ನಿಕಾನ್ ಸ್ಕಾಲರ್‌ಷಿಪ್

ಇದು ಸಮಾಜದ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಅದರಲ್ಲಿಯೂ ಛಾಯಾಗ್ರಹಣ-ಸಂಬಂಧಿತ ಕೋರ್ಸ್‌ಗಳನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿ ವೇತನ.

12ನೇ ತರಗತಿಯನ್ನು ಪೂರ್ಣಗೊಳಿಸಿರುವ ಮತ್ತು ಮೂರು ತಿಂಗಳು ಅಥವಾ ಹೆಚ್ಚಿನ ಸಮಯದ ಛಾಯಾಗ್ರಹಣ-ಸಂಬಂಧಿತ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವಂತಹ ಭಾರತೀಯ ವಿದ್ಯಾರ್ಥಿಗಳಿಗೆ ಲಭ್ಯವಿದೆ. ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷಕ್ಕಿಂತ ಕಡಿಮೆ ಇರಬೇಕು.

- **ಆರ್ಥಿಕ ಸಹಾಯ:** ₹ 10,000ದ ವರೆಗೆ
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-11-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/pjvi/NIKON12

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಸಮಾಜವಿಜ್ಞಾನ: ಇತಿಹಾಸ

ಅಧ್ಯಾಯ–3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

ಬಹು ಆಯ್ಕೆ ಪ್ರಶ್ನೆಗಳು

4) ರಾಜಮುಡಿ ಎಂಬ ಕಿರೀಟವನ್ನು ಮೇಲುಕೋಟೆ ಚೆಲುವನಾರಾಯಣ ಸ್ವಾಮಿಗೆ ಅರ್ಪಿಸಿದವರು ಯಾರು?
ಎ) ರಾಜ ಒಡೆಯರು ಬಿ) ಜಯಚಾಮರಾಜ ಒಡೆಯರು
ಸಿ) ಕೃಷ್ಣರಾಯ ಒಡೆಯರು ಡಿ) ಮೇಲಿನ ಯಾರೂ ಅಲ್ಲ
ಉತ್ತರ:- ಎ

5) ಮೈಸೂರಿನಲ್ಲಿ ನವರಾತ್ರಿ ಉತ್ಸವ ಪ್ರಾರಂಭಿಸಿದವರು ಯಾರು?
ಎ) ಚಿಕ್ಕದೇವರಾಜ ಒಡೆಯರು ಬಿ) ರಾಜ ಒಡೆಯರು
ಸಿ) ಕೃಷ್ಣರಾಯ ಒಡೆಯರು ಡಿ) ಮೇಲಿನ ಯಾರೂ ಅಲ್ಲ
ಉತ್ತರ:-ಬಿ

6) ಈ ಕೆಳಗಿನ ಯಾರು ಶಿವಾಜಿಯ ಸೇನೆಯನ್ನು ಮಧುರೆ, ಇಕ್ಕೇರಿ ಮತ್ತು ಬಿಜಾಪುರಗಳಲ್ಲಿ ಹಿಮ್ಮೆಟ್ಟಿಸಿದರು. ಮಾಗಡಿ, ಮಧುಗಿರಿ, ಕೊರಟಗೆರೆ ಮತ್ತಿತರ ಪ್ರಾಂತ್ಯಗಳನ್ನು ವಶಪಡಿಸಿಕೊಂಡರು?
ಎ) ರಾಜ ಒಡೆಯರು ಬಿ) ಚಿಕ್ಕದೇವರಾಜ ಒಡೆಯರು
ಸಿ) ಕೃಷ್ಣ ರಾಜ ಒಡೆಯರು
ಡಿ) ಜಯಚಾಮರಾಜ ಒಡೆಯರು
ಉತ್ತರ:- ಬಿ

7) ಯಾರಿಗೆ ಕರ್ನಾಟಕ ಕವಿಚಕ್ರವರ್ತಿ, ಅಪ್ರತಿಮ ವೀರ, ತೆಂಕಣರಾಜ, ನವಕೋಟಿ ನಾರಾಯಣ ಎಂಬ ಬಿರುದುಗಳಿದ್ದವು?
ಎ) ಚಿಕ್ಕದೇವರಾಜ ಒಡೆಯರು
ಸಿ) ಕೃಷ್ಣ ರಾಜ ಒಡೆಯರು ಸಿ) ರಾಜ ಒಡೆಯರು
ಡಿ) ಮೇಲಿನ ಯಾರಿಗೂ ಅಲ್ಲ
ಉತ್ತರ:- ಎ

8) ಚಿಕ್ಕದೇವರಾಜ ಒಡೆಯರು ಆಡಳಿತದಲ್ಲಿ ನೆರವು ನೀಡಲು ಒಂದು ಸಚಿವ ಸಂಪುಟವನ್ನು ನೇಮಕ ಮಾಡಿದ್ದರು. ಅದರ ಹೆಸರು?
ಎ) ಅಠಾರ ಕಛೇರಿ ಬಿ) ನವಕೋಟಿ ನಾರಾಯಣ
ಸಿ) ದಶಮಹಾ ದರ್ಶನ ಡಿ) ದಶಕೋಟಿ ನಾರಾಯಣ
ಉತ್ತರ:- ಎ

9) ತಿರುಮಲಾರ್ಯ, ಸಂಚಿ ಹೊನ್ನಮ್ಮ ಮುಂತಾದವರು ಯಾರ ಕಾಲದಲ್ಲಿ ಮೈಸೂರು ಸಾಮ್ರಾಜ್ಯದಲ್ಲಿ ಇದ್ದರು?
ಎ) ಕೃಷ್ಣ ರಾಜ ಒಡೆಯರು ಬಿ) ರಾಜ ಒಡೆಯರು
ಸಿ) ಚಿಕ್ಕದೇವರಾಜ ಒಡೆಯರು
ಡಿ) ಮೇಲಿನ ಯಾರ ಆಸ್ಥಾನದಲ್ಲಿಯೂ ಅಲ್ಲ
ಉತ್ತರ:- ಸಿ

10) ಹೈದರಾಲಿಯು ಯಾವ ಅರಸನನ್ನು ಗೃಹ ಬಂಧನದಲ್ಲಿರಿಸಿ ಅಧಿಕಾರವನ್ನು ತನ್ನ ಕೈಗೆತ್ತಿಕೊಂಡನು.?
ಎ) ಚಿಕ್ಕದೇವರಾಜ ಒಡೆಯರು
ಬಿ) ಎರಡನೇ ಕೃಷ್ಣರಾಜ ಒಡೆಯ
ಸಿ) ಜಯಚಾಮರಾಜ ಒಡೆಯರ್
ಡಿ) ಯದು ರಾಜ ಉತ್ತರ:- ಬಿ

11) ಆರ್ಥಿಕ ವ್ಯವಸ್ಥೆಯನ್ನು ಬಲಗೊಳಿಸಲು ಅನೇಕ ನೀತಿ–ನಿಯಮಗಳನ್ನು ರೂಪಿಸಿದ್ದರು. ಶ್ರೀಗಂಧ ಮತ್ತು ತಂಬಾಕು ಮತ್ತಿತರ ಪದಾರ್ಥಗಳನ್ನು ರಾಜ್ಯದ ಏಕಸ್ವಾಮ್ಯದಡಿಗೆ ತಂದಿದ್ದರು. ಫ್ರೆಂಚ್ ತಂತ್ರಜ್ಞರನ್ನು ಕರೆಯಿಸಿ ಮೈಸೂರಿನ ಸಾಂಪ್ರದಾಯಿಕ ಕರಕುಶಲ ವಸ್ತುಗಳ ಗುಣಮಟ್ಟವನ್ನು ಹೆಚ್ಚಿಸಿ ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ವ್ಯಾಪಾರ ಚಟುವಟಿಕೆಗಳನ್ನು ವೃದ್ಧಿಸುವ ಯೋಜನೆಯಲ್ಲಿದ್ದರು.
ಈ ಮೇಲಿನ ಟಿಪ್ಪಣಿ ಯಾರಿಗೆ ಸರಿ ಹೊಂದುತ್ತದೆ?
ಎ) ಹೈದರಾಲಿ ಬಿ) ಎರಡನೇ ಕೃಷ್ಣರಾಜ ಒಡೆಯರ್
ಸಿ) ಟಿಪ್ಪು ಸುಲ್ತಾನ್ ಡಿ) ಮೇಲಿನ ಯಾರಿಗೂ ಅಲ್ಲ
ಉತ್ತರ:- ಸಿ

12) ಮೂರನೇ ಆಂಗ್ಲೋ ಮೈಸೂರು ಯುದ್ಧದ ಕಾಲದಲ್ಲಿ ಬ್ರಿಟಿಷ್ ಸೈನ್ಯ ಯಾರ ನೇತೃತ್ವದಲ್ಲಿ ಕೋಲಾರ ಮತ್ತು ಹೊಸಕೋಟೆಗಳನ್ನು ವಶಪಡಿಸಿಕೊಂಡಿತು?
ಎ) ಕಾರ್ನ್‌ವಾಲೀಸನ ಬಿ) ಲಾರ್ಡ್ ವೆಲ್ಲೆಸ್ಲಿ
ಸಿ) ಲಾರ್ಡ್ ಮೌಂಟ್ ಬ್ಯಾಟನ್
ಡಿ) ಮೇಲಿನ ಯಾರಿಗೂ ಅಲ್ಲ
ಉತ್ತರ:- ಎ

13) ಮೈಸೂರು ರಾಜ್ಯಗೀತೆ "ಕಾಯೋಶ್ರೀ ಗೌರಿ"ಯನ್ನು ಯಾರು ರಚಿಸಿದವರು.?
ಎ) ಬಸಪ್ಪಶಾಸ್ತ್ರಿಗಳು ಬಿ) ಸಂಚಿ ಹೊನ್ನಮ್ಮ
ಸಿ) ಕುಮಾರವ್ಯಾಸ ಡಿ) ಹರಿಹರ
ಉತ್ತರ:- ಎ

14) ಯಾವ ಯುದ್ಧವು 1769ರಲ್ಲಿ ಆದ ಮದ್ರಾಸ್ ಒಪ್ಪಂದದೊಂದಿಗೆ ಕೊನೆಯಾಯಿತು.?
ಎ) ಎರಡನೆಯ ಆಂಗ್ಲೋ–ಮೈಸೂರು ಯುದ್ಧ
ಬಿ) ಮೂರನೇ ಆಂಗ್ಲೋ–ಮೈಸೂರು ಯುದ್ಧ
ಸಿ) ಮೊದಲನೇ ಆಂಗ್ಲೋ–ಮೈಸೂರು ಯುದ್ಧ
ಡಿ) ಯಾವುದೂ ಅಲ್ಲ ಉತ್ತರ:- ಸಿ

15) 1781ರಲ್ಲಿ ಪೋರ್ಟೋನೋವೆ ಎಂಬಲ್ಲಿ ನಡೆದ ಕದನದಲ್ಲಿ ಯಾರು ಪರಾಭವಗೊಂಡನು?
ಎ) ಟಿಪ್ಪು ಸುಲ್ತಾನ್ ಬಿ) ರಾಜ ಒಡೆಯರ್
ಸಿ) ರಾಮಸ್ವಾಮಿ ಮುದಲಿಯಾರ್ ಡಿ) ಹೈದರಾಲಿ
ಉತ್ತರ:- ಡಿ

16) ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬಿಟ್ಟುಕೊಡುವುದು, ಮೂರು ಕೋಟಿ ರೂಪಾಯಿಗಳನ್ನು ಯುದ್ಧ ನಷ್ಟ ಭರ್ತಿಯಾಗಿ ಕೊಡುವುದು, ಯುದ್ಧ ನಷ್ಟ ಭರ್ತಿಗೆ ಗ್ಯಾರಂಟಿಯಾಗಿ ಟಿಪ್ಪುಸುಲ್ತಾನ್ ತನ್ನ ಇಬ್ಬರು ಗಂಡು ಮಕ್ಕಳನ್ನು ಒತ್ತೆಯಾಗಿ ನೀಡುವುದು, ಮತ್ತು ಯುದ್ಧದ ಸಂದರ್ಭದಲ್ಲಿ ಸೆರೆ ಹಿಡಿಯಲಾಗಿದ್ದ ಸೈನಿಕರನ್ನು ಬಿಡುಗಡೆಗೊಳಿಸುವುದು.
ಈ ಷರತ್ತುಗಳು ಯಾವ ಒಪ್ಪಂದದಲ್ಲಿ ಇದ್ದವು?
ಎ) ಮದ್ರಾಸ್ ಒಪ್ಪಂದ ಬಿ) ಮಂಗಳೂರು ಒಪ್ಪಂದ
ಸಿ) ಶ್ರೀರಂಗಪಟ್ಟಣ ಒಪ್ಪಂದ ಡಿ) ಮೈಸೂರು ಒಪ್ಪಂದ
ಉತ್ತರ:- ಸಿ

17) ಟಿಪ್ಪು ಸುಲ್ತಾನ್ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಮಡಿದನು ಆ ಸಂದರ್ಭದಲ್ಲಿ ಬ್ರಿಟಿಷ್ ಭಾರತದ ಗವರ್ನರ್ ಜನರಲ್‌ನಾಗಿ ಯಾರು ಇದ್ದರು?
ಎ) ಲಾರ್ಡ್ ವೆಲ್ಲೆಸ್ಲಿ ಬಿ) ಲಾರ್ಡ್ ಮೌಂಟ್ ಬ್ಯಾಟನ್
ಸಿ) ಲಾರ್ಡ್ ಬೆಂಟಿಂಕ್ ಡಿ) ಲಾರ್ಡ್ ಕಾರ್ನ್ ವಾಲೀಸ್
ಉತ್ತರ:- ಎ

18) ಬ್ರಿಟಿಷ್ ಸರಕಾರವು 1881ರಲ್ಲಿ ಮೈಸೂರಿನ ಸಿಂಹಾಸನವನ್ನು ಹತ್ತನೆಯ ಚಾಮರಾಜೇಂದ್ರ ಒಡೆಯರಿಗೆ ವಹಿಸಿತು. ಕಮೀಷನರ್ ಆಡಳಿತ ಕೊನೆಗೊಂಡು …………ಎಂಬ ಬ್ರಿಟಿಷ್ ಪ್ರತಿನಿಧಿಯನ್ನು ನೇಮಿಸಲಾಯಿತು.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - MATHEMATICS

APPLICATIONS OF DERIVATIVES

MAXIMA AND MINIMA

26. Show that x^x is minimum at $x=\frac{1}{e}$

Soln:- (…….Contd/-)

$$\therefore\left(\frac{d^2y}{dx^2}\right)_{x=\frac{1}{e}}=\left(\frac{1}{e}\right)^{\frac{1}{e}}.e>0$$

$\Rightarrow y=x^x$ attains minimum at $x=\frac{1}{e}$ and

the minimum value is $\left(\frac{1}{e}\right)^{\frac{1}{e}}$

27. Find the maximum and minimum values of

$$\frac{1+x+x^2}{1-x+x^2}$$

Soln :- Let $f(x)=\frac{1+x+x^2}{1-x+x^2}$

Differentiating f(x) w.r.t 'x', we get

$$f'(x)=\frac{(1-x+x^2)(1+2x)-(1+x+x^2)(-1+2x)}{(1-x+x^2)^2}$$

$$=\frac{2(1-x^2)}{(1-x+x^2)^2}$$

Now $f'(x)=0$ gives $1-x^2=0$ (or) $x=\pm1$

Differentiating $f''(x)$, w.r.t 'x', we get

$$f''(x)=\frac{\left[(1-x+x^2)^2\,2(-2x)-2(1-x^2).2(1-x+x^2)(-1+2x)\right]}{(1-x+x^2)^4}$$

$$=\frac{-4x}{(1-x+x^2)^2}-\frac{4(1-x^2)(-1+2x)}{(1-x+x^2)^3}$$

$$f''(x)=\frac{-4}{(1-1+1)^2}-0=-4<0$$

$$f''(-1)=\frac{-4(-1)}{(1+1+1)^2}-0=\frac{4}{9}>0$$

$\therefore f(x)$ attains a maximum at $x=1$ and a minimum at $x=-1$

$\therefore$ Maximum of $f(x)=f(1)=\frac{(1+1+1)^2}{(1-1+1)^2}=3$

& minimum of $f(x)=f(-1)=\frac{1-1+1}{1+1+1}=\frac{1}{3}$

Application of Maxima and Minima to practical problems:-

1. Show that the area of the sector is maximum when its radius is $\frac{l}{4}$.

(Given that - The perimeter of a sector is l)

Soln:- **Let r be the radius and θ be the angle of the sector. Arc AB = rθ**

$$l=OA+\text{arc }AB+OB$$



$$l=r+r\theta+r$$
$$=2r+r\theta\ ......(i)$$

Area of the sector

$$A=\frac{1}{2}r^2\theta$$

From (1), $\theta=\frac{l-2r}{r}$

$$\therefore A=\frac{1}{2}r^2\left(\frac{l-2r}{r}\right)$$

$$A=\frac{1}{2}(lr-2r^2)............(ii)$$

Differentiating w.r.t 'r', we get

$$\frac{dA}{dr}=\frac{1}{2}(l-4r)\ \text{and}$$

$$\frac{d^2A}{dr^2}=\frac{1}{2}(0-4)=-2$$

Now $\frac{dA}{dr}=0\Rightarrow l=4r$ (or) $r=\frac{l}{4}$

$$\frac{d^2A}{dr^2}=-2<0$$

Area of the sector is maximum when $r=\frac{l}{4}$

2. Show that the maximum rectangle inscribed in a given circle is a square.

Soln:- Let x and y be the length and breadth of the rectangle inscribed in a given circle



$$x^2+y^2=4a^2\ ......(i)$$

Given that, xy is maximum

let $xy=A$ ....(ii)

From (i) & (ii), $A=x\sqrt{4a^2-x^2}$

$$\frac{dA}{dx}=x.\frac{-2x}{2\sqrt{4a^2-x^2}}+\sqrt{4a^2-x^2}$$

$$=\frac{-x^2+4a^2-x^2}{\sqrt{4a^2-x^2}}=\frac{2(2a^2-x^2)}{\sqrt{4a^2-x^2}}$$

For A to be maximum, $\frac{dA}{dx}=0$,

$$x^2=2a^2\ \text{(or)}\ x=\sqrt{2}\,a$$

when $x=a\sqrt{2}$, $y=a\sqrt{2}$; i.e., $x=y$.

Hence, the rectangle is a square.

(Contd………)

ಚುನಾವಣೆ: ನೇಪಥ್ಯಕ್ಕೆ ಸರಿದ ಗಡಿ ವಿವಾದ • 35 ಕ್ಷೇತ್ರಗಳಲ್ಲಿ ಕನ್ನಡಿಗರ ಮತ ನಿರ್ಣಾಯಕ

ಮಹಾರಾಷ್ಟ್ರ: ಗಟ್ಟಿಯಾದ ಕನ್ನಡ ಅಸ್ಮಿತೆ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಕರ್ನಾಟಕ– ಮಹಾರಾಷ್ಟ್ರ ಗಡಿ ವಿಷಯವು ಈ ಸಲದ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಸದ್ದೇ ಮಾಡಲಿಲ್ಲ. ಗಡಿ ವಿವಾದದ ಬಗ್ಗೆ ಯಾವ ಪಕ್ಷವೂ ಪ್ರಸ್ತಾಪಿಸಿಲ್ಲ.

ಶಿವಸೇನಾ ಸೇರಿ ಕಾಂಗ್ರೆಸ್, ಬಿಜೆಪಿ, ಎನ್‌ಸಿಪಿ ಹಾಗೂ ಮಹಾ ವಿಕಾಸ ಅಘಾಡಿಯಲ್ಲಿರುವ ಯಾವುದೇ ಪಕ್ಷ ಈ ಬಾರಿ ಗಡಿ ವಿವಾದವನ್ನು ಪ್ರಣಾಳಿಕೆಯಲ್ಲಿ ಸೇರಿಸಿಲ್ಲ.

'ಗಡಿ ವಿವಾದವನ್ನೇ ಪ್ರಣಾಳಿಕೆಯಲ್ಲಿ ಮುಖ್ಯ ವಿಷಯ ಮಾಡಬೇಕು' ಎಂದು ಬೆಳಗಾವಿಯ ಎಂಇಎಸ್ ಮುಖಂಡರು ಕೋರಿದ್ದರು. ಶರದ್ ಪವಾರ್, ಉದ್ಧವ್ ಠಾಕ್ರೆ, ಏಕನಾಥ ಶಿಂದೆ ಸೇರಿದಂತೆ ಎಲ್ಲ ನಾಯಕರ ಮನೆ ಮುಂದೆ ವಾರಗಟ್ಟಲೇ ಠಿಕಾಣಿ ಹೂಡಿ, ಬಾಗಿಲು ಕಾದಿದ್ದರು. ಆದರೆ, ಅವರಿಗೆ ಸ್ಪಂದನೆ ಸಿಗಲಿಲ್ಲ.

ಕನ್ನಡ ಅನುರಣನ: ಮಹಾರಾಷ್ಟ್ರದ 288 ವಿಧಾನಸಭಾ ಕ್ಷೇತ್ರಗಳ ಪೈಕಿ 35 ಕ್ಷೇತ್ರಗಳಲ್ಲಿ ಕನ್ನಡಿಗರ ಮತಗಳು ನಿರ್ಣಾಯಕ. ಅದರಲ್ಲೂ ಗಡಿಗೆ ಹೊಂದಿಕೊಂಡ 15 ಕ್ಷೇತ್ರಗಳಲ್ಲಿ ಶೇ 60ಕ್ಕೂ ಹೆಚ್ಚು ಕನ್ನಡಿಗ ಮತದಾರರು ಇದ್ದಾರೆ.

ಕನ್ನಡದಲ್ಲೇ ಪ್ರಚಾರ ನಡೆಸಿದ ಮಹಾರಾಷ್ಟ್ರದ ವಿಕ್ರಮಸಿಂಹ ಬಾಳಾಸೊ ಸಾವಂತ ಅವರ ಕರಪತ್ರ

ಎಲ್ಲ 35 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳು ಕನ್ನಡದಲ್ಲೇ ಭಾಷಣ ಮಾಡುತ್ತಿದ್ದಾರೆ. ಬ್ಯಾನರ್, ಪೋಸ್ಟರ್, ಕರಪತ್ರಗಳನ್ನು ಕನ್ನಡದಲ್ಲೇ ಹಂಚುತ್ತಿದ್ದಾರೆ. ಮತಯಂತ್ರದ ಮೇಲೂ ಮರಾಠಿ ಜೊತೆ ಕನ್ನಡ ಬಳಕೆಗೂ ಆದ್ಯತೆ ಸಿಕ್ಕಿದೆ.

ಜತ್ತ, ಮಂಗಳವೇಡೆ, ಅಕ್ಕಲಕೋಟ, ಲಾಥೂರ್, ಸೊಲ್ಲಾಪುರ, ದಕ್ಷಿಣ ಸೊಲ್ಲಾಪುರ, ಕೊಲ್ಹಾಪುರ, ಸಾಂಗ್ಲಿ, ಮೀರಜ್, ಮುಂತಾದ ಕ್ಷೇತ್ರಗಳಲ್ಲಿ ಕನ್ನಡದ್ದೇ ಅಬ್ಬರ ಕಾಣಿಸುತ್ತಿದೆ. ಮೇಲಾಗಿ, ಮುಂಬೈ ಪರಿಸರದಲ್ಲಿ ಬರುವ ರಾಯಗಡ, ಠಾಣೆ ಹಾಗೂ ಪಾಲ್ಘರ್ ಮೂರೂ ಜಿಲ್ಲೆಗಳಲ್ಲಿ 20 ಲಕ್ಷಕ್ಕೂ ಅಧಿಕ ಕನ್ನಡಿಗರು ಇದ್ದಾರೆ. ಇದರಲ್ಲಿ ಅಂದಾಜು 8 ಲಕ್ಷಕ್ಕೂ ಹೆಚ್ಚು ಮತದಾರರಾಗಿದ್ದಾರೆ. ಬಹುಪಾಲು ಶೆಟ್ಟಿ ಸಮುದಾಯವೇ ದೊಡ್ಡ ಸಂಖ್ಯೆಯಲ್ಲಿದೆ. ಅಲ್ಲಿಯೂ ಈಗ ಕನ್ನಡ ಕಂಪು ಸೂಸುತ್ತಿದೆ.

ಗಡಿ ವಿವಾದಕ್ಕೆ ಕಾಲವೇ ಉತ್ತರ ಕಂಡುಕೊಳ್ಳುವ ಲಕ್ಷಣಗಳು ಗೋಚರಿಸುತ್ತಿವೆ. ಗಡಿ ತಂಟೆ ನೇಪಥ್ಯಕ್ಕೆ ಸರಿದಿದ್ದು, ಕನ್ನಡ ಅಸ್ಮಿತೆ ಗಟ್ಟಿಗೊಳ್ಳುತ್ತ ಸಾಗಿದೆ

ಅಶೋಕ ಚಂದರಗಿ, ಸದಸ್ಯ, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ

ಇದೇ ಮೊದಲ ಬಾರಿಗೆ ಪ್ರಣಾಳಿಕೆಯಿಂದ ಇವಿಎಂ ಯಂತ್ರದವರೆಗೆ ಎಲ್ಲ ಕಡೆಯೂ ಮರಾಠಿ ಜೊತೆಗೆ ಕನ್ನಡ ಬಳಸಲಾಗಿದೆ. ಮತದಾನದಲ್ಲಿ ಪಾಲ್ಗೊಳ್ಳಲು ಹೊಸ ಹುಮ್ಮಸ್ಸು ಬಂದಿದೆ

ಮಲ್ಲೇಶಪ್ಪ ತೇಲಿ, ಕನ್ನಡ ಹೋರಾಟಗಾರ

'1980ರಿಂದ ಎಲ್ಲ ಚುನಾವಣೆಗಳಲ್ಲಿ ಗಡಿ ವಿವಾದವೇ ಪ್ರಮುಖ ಅಸ್ತ್ರವಾಗಿತ್ತು. ಕನ್ನಡಿಗರು ಮತದಾನ ಮಾಡುವುದಕ್ಕೂ ಹಿಂಸೆ ಆಗುತ್ತಿತ್ತು. ಬೆಳಗಾವಿಯಲ್ಲಿ ಎಂಇಎಸ್ ಗಲಾಟೆ ಶುರು ಮಾಡಿದರೆ ಇಲ್ಲಿ ಭಯದ ವಾತಾವರಣ ನಿರ್ಮಾಣವಾಗುತ್ತಿತ್ತು. ಈಗ ಚಿತ್ರಣ ತಿಳಿಯಾಗಿದೆ. ಕನ್ನಡಿಗರ ಹೊರತಾಗಿ ಸರ್ಕಾರ ರಚನೆ ಕಷ್ಟ ಎಂಬುದು ಇಲ್ಲಿನ ಎಲ್ಲ ನಾಯಕರಿಗೂ ಗೊತ್ತಾಗಿದೆ' ಎಂದು ಮಹಾರಾಷ್ಟ್ರದ ಸಂಗನಬಸವ ಪೊಲೀಸ್ ಪಾಟೀಲ ತಿಳಿಸಿದರು.

'ಕನ್ನಡಿಗರಿಗೆ ಶಿಕ್ಷಣ, ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿ ನೀಡಬೇಕು, ಗಡಿ ಭಾಗಕ್ಕೆ ಸಮರ್ಪಕ ನೀರು ಪೂರೈಸಬೇಕು ಎಂಬುದು ಸೇರಿ ಕನ್ನಡಿಗರ ಬೇಡಿಕೆಗಳಿಗೂ ಈಗ ಕಸುವು ಬಂದಿದೆ' ಎಂದು ಅವರು ಹೇಳಿದರು.

'ಒಡೆದಾಳುವ, ಉಂಡ ಮನೆಗೆ ಎರಡು ಬಗೆಯುವ ಮಹಾರಾಷ್ಟ್ರ ಏಕೀಕರಣ ಸಮಿತಿ ಈಗ ಬೋರಲು ಬಿದ್ದಿದೆ. ಮಹಾರಾಷ್ಟ್ರದಲ್ಲೂ ಸಮಷ್ಟಿ ಪ್ರಜ್ಞೆ ಬೆಳೆಯುತ್ತಿರುವುದು ಆಶಾದಾಯಕ ಸಂಗತಿ' ಎಂದು ಹೋರಾಟಗಾರ ಅಶೋಕ ಚಂದರಗಿ ತಿಳಿಸಿದರು.

ಇದೆಲ್ಲದರ ಮಧ್ಯೆ 'ಕನ್ನಡ ಮಾತನಾಡುವವರಿಗೆ, ಕನ್ನಡಿಗರಿಗೆ ಗೌರವ ಕೊಡುವವರಿಗೆ, ಬೇಡಿಕೆ ಈಡೇರಿಸುವವರಿಗೆ ಮಾತ್ರ ನಮ್ಮ ಮತ ನೀಡಬೇಕು. ಇದರಿಂದ 'ಮಹಾ' ವಿಧಾನ ಸಭೆಯಲ್ಲಿ ಕನ್ನಡ ಪ್ರತಿಧ್ವನಿ ಕೇಳಲಿದೆ' ಎಂಬ ಸಾಮಾಜಿಕ ಜಾಲತಾಣ ಆಂದೋಲನವನ್ನು ಜತ್ತ ಕನ್ನಡಿಗರ ವೇದಿಕೆ ಜೋರಾಗಿಯೇ ನಡೆಸಿದೆ.

'ಇಲ್ಲಿ ಏಕೈಕ ವ್ಯಕ್ತಿಯಷ್ಟೆ ಸುರಕ್ಷಿತ'

'ಏಕ್ ಹೈ ತೋ ಸೇಫ್ ಹೈ' ಹೇಳಿಕೆಗೆ ಪ್ರಿಯಾಂಕಾ ತಿರುಗೇಟು

ಪ್ರಜಾವಾಣಿ ವಾರ್ತೆ

ಮುಂಬೈ: ಪ್ರಧಾನಿ ನರೇಂದ್ರ ಮೋದಿಯವರ 'ಏಕ್ ಹೈ ತೋ ಸೇಫ್ ಹೈ' (ಒಗ್ಗಟ್ಟಿನಿಂದ ಇದ್ದರೆ ಸುರಕ್ಷಿತವಾಗಿರುತ್ತೇವೆ) ಮತ– ನಿರೂಪಣೆಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು, 'ಸುರಕ್ಷಿತ ವ್ಯಕ್ತಿ ಮಾತ್ರ ಇಲ್ಲಿ ಸುರಕ್ಷಿತವಾಗಿದ್ದಾರೆ' ಎಂದು ಕಟಕಿಯಾಡಿದ್ದಾರೆ.

ಮೋದಿಯವರ ಉದ್ಯಮ ಮಿತ್ರ ಹಾಗೂ ಅದಾನಿ ಗ್ರೂಪ್‌ನ ಅಧ್ಯಕ್ಷ ಗೌತಮ್ ಅದಾನಿಯ ಹೆಸರು ಪ್ರಸ್ತಾಪಿಸಿ, 'ಸುರಕ್ಷಿತ ವ್ಯಕ್ತಿ' ಎಂದು ಭಾನುವಾರ ವಾಗ್ದಾಳಿ ನಡೆಸಿದ್ದಾರೆ.

'ಒಗ್ಗಟ್ಟಿನಿಂದ ಇದ್ದರೆ ಸುರಕ್ಷಿತವಾಗಿರುತ್ತೇವೆ' ಎಂಬುದನ್ನು ಇದೀಗ ನಾವು ಕೇಳುತ್ತಿದ್ದೇವೆ. ಏನು ಸುರಕ್ಷಿತ...? ಸುರಕ್ಷಾ ಎನ್ನುವುದಕ್ಕೆ ಎರಡು ಅರ್ಥಗಳಿವೆ. ಸುರಕ್ಷತೆ ಎನ್ನುವುದು ಒಂದು ಅರ್ಥವಾದರೆ, ತಿಜೋರಿ ಎನ್ನುವುದು ಇನ್ನೊಂದು ಅರ್ಥ. ಈ ತಿಜೋರಿ ಯಾರಲ್ಲಿ ಇದೆ? ಅದಾನಿ ಬಳಿಯಿದೆ... ಹೌದು... ಇದೇ ಮೋದಿಯವರ 'ಏಕ್ ಹೈ ತೋ ಸೇಫ್ ಹೈ' ಎನ್ನುವುದರ ಮರ್ಮ ಎಂದು ಚಂದ್ರಪುರ ಜಿಲ್ಲೆಯ ಚಿಮುರ್‌ನಲ್ಲಿ ಹಾಗೂ ನಾಗ್ಪುರದಲ್ಲಿ ನಡೆದ ಚುನಾವಣಾ ಪ್ರಚಾರದಲ್ಲಿ ವ್ಯಾಖ್ಯಾನಿಸಿದರು.

ನಾಗ್ಪುರ ಪಶ್ಚಿಮ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿಕಾಸ್ ಠಾಕ್ರೆ ಪರ ಪ್ರಿಯಾಂಕಾ ಗಾಂಧಿ ಅವರು ಭಾನುವಾರ ರೋಡ್ ಷೋ ನಡೆಸಿ ಮತಯಾಚಿಸಿದರು —ಪಿಟಿಐ ಚಿತ್ರ

ಈ ಹಿಂದಿನ ಮಹಾ ವಿಕಾಸ್ ಅಘಾಡಿ ನೇತೃತ್ವದ ಸರ್ಕಾರವನ್ನು ಉರುಳಿಸಲು ಕಾರಣವಾದ ಸಭೆಗಳಲ್ಲಿ ಅದಾನಿ ಹೇಗೆ ಉಪಸ್ಥಿತರಿದ್ದರು ಎಂದು ನೆರೆದಿದ್ದ ಜನಸ್ತೋಮವನ್ನುದ್ದೇಶಿಸಿ ಕೇಳಿದರು.

ಮಹಾರಾಷ್ಟ್ರದಿಂದ ಯೋಜನೆಗಳನ್ನು ಬೇರೆಡೆಗೆ ವರ್ಗಾಯಿಸಿದ್ದಕ್ಕಾಗಿ ಮಹಾಯುತಿ ನೇತೃತ್ವದ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಪ್ರಿಯಾಂಕಾ, '₹10 ಲಕ್ಷ ಕೋಟಿ ಮೊತ್ತದ ಯೋಜನೆಗಳನ್ನು ಗುಜರಾತ್ ಸೇರಿದಂತೆ ಇತರೆ ರಾಜ್ಯಗಳಿಗೆ ವರ್ಗಾಯಿಸಲಾಗಿದೆ. ಇದರಿಂದ ಮಹಾರಾಷ್ಟ್ರವು 5 ಲಕ್ಷ ಉದ್ಯೋಗ ನಷ್ಟ ಅನುಭವಿಸಿದೆ. 6 ಸಾವಿರ ಕಂಪನಿಗಳು ಬಾಗಿಲು ಮುಚ್ಚಿವೆ' ಎಂದು ಆರೋಪಿಸಿದರು.

'ಮಹಾಯುತಿ' ಸರ್ಕಾರದಿಂದ ಲೂಟಿ: ಸುರ್ಜೇವಾಲಾ

ಮುಂಬೈ (ಪಿಟಿಐ): 'ಮಹಾಯುತಿ' ಸರ್ಕಾರವು ಮಹಾರಾಷ್ಟ್ರ ಮತ್ತು ಮುಂಬೈ ನಗರದ ಸಂಪನ್ಮೂಲವನ್ನು ಲೂಟಿ ಮಾಡುತ್ತಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಆರೋಪಿಸಿದರು.

ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಬಿಜೆಪಿ, ಶಿವಸೇನಾ (ಶಿಂದೆ ಬಣ) ಮತ್ತು ಎನ್‌ಸಿಪಿ (ಅಜಿತ್ ಪವಾರ್ ಬಣ) ಪಕ್ಷಗಳನ್ನು ಒಳಗೊಂಡ 'ಮಹಾಯುತಿ' ಮೈತ್ರಿಕೂಟದ ವಿರುದ್ಧ ವಾಗ್ದಾಳಿ ನಡೆಸಿದರು.

'ಹಾಲಿ ಸರ್ಕಾರವು ಗ್ಯಾಂಗ್‌ಸ್ಟರ್‌ಗಳಿಗೆ ರಕ್ಷಣೆ ನೀಡುತ್ತಿದ್ದು, ವಿವಿಧ ಅಪರಾಧ ಪ್ರಕರಣಗಳಲ್ಲಿ ಭಾಗಿಯಾದವರ ಪರ ನಿಂತಿದೆ. ಬಾಲಿವುಡ್‌ನ ಹಲವು ನಟರಿಗೆ ಬೆದರಿಕೆ ಒಡ್ಡಲಾಗಿದೆ. ರಾಜಕೀಯ ನಾಯಕರನ್ನು ಹಾಡಹಗಲೇ ಹತ್ಯೆ ಮಾಡಲಾಗಿದೆ. ಅಧಿಕಾರದಲ್ಲಿರುವವರ ಸಹಕಾರ ಇಲ್ಲದೆಯೇ ಇಂತಹ ಘಟನೆಗಳು ನಡೆಯಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್, ಮಾಜಿ ಸಚಿವ ಬಾಬಾ ಸಿದ್ದೀಕಿ ಅವರ ಹತ್ಯೆ ಮಾಡಿರುವ ಘಟನೆ ಇಡೀ ದೇಶಕ್ಕೆ ಆಘಾತ ಉಂಟುಮಾಡಿದೆ. ಮಹಾರಾಷ್ಟ್ರದಲ್ಲಿರುವ 'ಗನ್ ಮತ್ತು ಗೂಂಡಾ-ರಾಜ್'ಅನ್ನು ಈ ಘಟನೆ ಬಯಲು ಮಾಡಿದೆ' ಎಂದರು.

ರಣದೀಪ್ ಸುರ್ಜೇವಾಲಾ

ಎಂವಿಎಗೆ ಬಹುಮತ– ಚೆನ್ನಿತ್ತಲ: ಮಹಾ ವಿಕಾಸ ಆಘಾಡಿ (ಎಂವಿಎ) ಮೈತ್ರಿಕೂಟವು ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೇರಲಿದೆ ಎಂದು ಕಾಂಗ್ರೆಸ್‌ನ ಮಹಾರಾಷ್ಟ್ರ ಉಸ್ತುವಾರಿ ರಮೇಶ್ ಚೆನ್ನಿತ್ತಲ ವಿಶ್ವಾಸ ವ್ಯಕ್ತಪಡಿಸಿದರು.

ಪ್ರಧಾನಿ ಅವರ 'ಏಕ್ ಹೈ ತೊ ಸೇಫ್ ಹೈ' (ಒಗ್ಗಟ್ಟಿನಿಂದ ಇದ್ದರೆ ನಾವು ಸುರಕ್ಷಿತವಾಗಿರುತ್ತೇವೆ) ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ 'ಬಟೇಂಗೆ ತೊ ಕಟೇಂಗೆ' (ಒಗ್ಗಟ್ಟಿಲ್ಲದಿರುವುದು ವಿನಾಶಕ್ಕೆ ಕಾರಣವಾಗುತ್ತದೆ) ಹೇಳಿಕೆಗಳು ಮಹಾರಾಷ್ಟ್ರದ ಸಂಸ್ಕೃತಿಗೆ ವಿರುದ್ಧವಾಗಿರುವುದರಿಂದ ಇಲ್ಲಿನ ಜನರು ತಿರಸ್ಕರಿಸಲಿದ್ದಾರೆ ಎಂದು ಹೇಳಿದರು.

ತೀವ್ರ ಹಿಂಸೆ, 5 ಜಿಲ್ಲೆ ಪ್ರಕ್ಷುಬ್ಧ

ಒಂದನೇ ಪುಟದಿಂದ...

ಮೂವರು ಸಚಿವರು ಮತ್ತು ಆರು ಶಾಸಕರ ಮನೆಗಳ ಮೇಲೆ ದಾಳಿ ನಡೆಸಿದ್ದರು. ಬಳಿಕ, ಕರ್ಫ್ಯೂ ಹೇರಲಾಗಿದೆ.

ಕುಕಿ ಬುಡಕಟ್ಟು ಸಮುದಾಯದ ವ್ಯಕ್ತಿಯೊಬ್ಬರ ಮೃತದೇಹ ಜಿರಿಬಾಮ್ ಜಿಲ್ಲೆಯಲ್ಲಿ ಭಾನುವಾರ ಸಿಕ್ಕಿದೆ. ಜಿರೀಬಾಮ್ ಜಿಲ್ಲೆಯ ನದಿಯಲ್ಲಿ ಮಹಿಳೆ, ಎರಡೂವರೆ ವರ್ಷದ ಮಗುವಿನ ಶವ ಪತ್ತೆಯಾಗಿದ್ದು, ಇವು ನಾಪತ್ತೆ ಆಗಿದ್ದ ಮೈತೇಯಿ ಕುಟುಂಬದವರದು ಇರಬಹುದು ಎಂದು ಅಂದಾಜಿಸಲಾಗಿದೆ. ಶುಕ್ರವಾರ ಇಲ್ಲಿಯೇ ಇಬ್ಬರು ಮಕ್ಕಳು ಸೇರಿ ಮೂವರ ಶವಗಳು ಪತ್ತೆ ಆಗಿದ್ದವು.

27 ವರ್ಷದ ಹಾವೊಜೊಯೆಲ್ ಡೌಂಜೆಲ್ ಎಂಬ ವ್ಯಕ್ತಿಯ ಮೃತದೇಹವು ಜಿರೀಬಾಮ್‌ನ ಅಗಲ್ಪುರ ಎಂಬಲ್ಲಿನ ಕಾಲುವೆಯೊಂದರಲ್ಲಿ ಸಿಕ್ಕಿದೆ ಎಂದು ಕುಕಿ ಸಮುದಾಯದ ಸಂಘಟನೆಯಾದ ದಿ ಇಂಡಿಜಿನಸ್ ಟ್ರೈಬಲ್ ಲೀಡರ್ಸ್ ಫೋರಂ (ಐಟಿಎಲ್‌ಎಫ್) ಹೇಳಿದೆ. ನವೆಂಬರ್ 7ರಂದು ಆರಂಭವಾದ ಹಿಂಸಾಚಾರದ ಕೇಂದ್ರ ಬಿಂದು ಈ ಸ್ಥಳವೇ ಆಗಿದೆ.

ಮೈತೇಯಿ ಸಮುದಾಯದ ಜನರ ಸಂಘಟನೆಯಾದ ಅರಂಬಾಯಿ ತೆಂಗೋಲ್‌ನ ಸದಸ್ಯರು ಈ ವ್ಯಕ್ತಿಯನ್ನು ಕೊಂದಿದ್ದಾರೆ ಎಂದು ಐಟಿಎಲ್‌ಎಫ್ ಆರೋಪಿಸಿದೆ. ಮೃತದೇಹದ ಕೈಗಳು ಕಟ್ಟಿದ ಸ್ಥಿತಿಯಲ್ಲಿದ್ದವು.

ಕುಕಿ ಬುಡಕಟ್ಟು ಸಮುದಾಯಕ್ಕೆ ಸೇರಿದವರ ಐದು ಚರ್ಚುಗಳು, ಒಂದು ಶಾಲೆ, ಒಂದು ಪೆಟ್ರೋಲ್ ಬಂಕ್ ಮತ್ತು 14 ಮನೆಗಳಿಗೆ ಮೈತೇಯಿ ಸಮುದಾಯದ ಜನರು ಶನಿವಾರ ರಾತ್ರಿ ಬೆಂಕಿ ಹಚ್ಚಿದ್ದಾರೆ ಎಂದು ಐಟಿಎಲ್‌ಎಫ್ ಹೇಳಿದೆ. ನವೆಂಬರ್ 7ರ ನಂತರ ಈವರೆಗೆ 20 ಮಂದಿ ಸಂಘರ್ಷದಿಂದಾಗಿ ಮೃತಪಟ್ಟಿದ್ದಾರೆ.

ಮೈತೇಯಿ ಸಮುದಾಯವು ಪ್ರಬಲವಾಗಿರುವ ಇಂಫಾಲ್ ಕಣಿವೆಯಲ್ಲಿ ಭಾನುವಾರವೂ ಕರ್ಫ್ಯೂ ಮುಂದುವರಿದಿದೆ. ಹಿಂಸಾಚಾರಕ್ಕೆ ಸಂಬಂಧಿಸಿ 23 ಮಂದಿಯನ್ನು ಬಂಧಿಸಲಾಗಿದೆ. ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಸೇರಿದ 13 ಶಾಸಕರ ಮನೆಗಳಿಗೆ ಬೆಂಕಿ ಹಚ್ಚಲಾಗಿದೆ ಅಥವಾ ಹಾನಿ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಗಲಭೆಪೀಡಿತ ಜಿಲ್ಲೆಗಳಾದ ಇಂಫಾಲ್ ಪಶ್ಚಿಮ, ಇಂಫಾಲ್ ಪೂರ್ವ, ಬಿಷ್ಣುಪುರ್, ತೌಬಲ್, ಕಾಕ್‌ಚಿಂಗ್, ಕಾಂಗ್‌ಪೋಕ್ಪಿ, ಚುರಾಚಾಂದ್‌ಪುರ ವ್ಯಾಪ್ತಿಯಲ್ಲಿ ಶನಿವಾರದಿಂದ ಜಾರಿಗೆ ಬರುವಂತೆ ಎರಡು ದಿನ ಇಂಟರ್‌ನೆಟ್ ಸೇವೆಯನ್ನು ಸರ್ಕಾರ ರದ್ದುಪಡಿಸಿದೆ.

ರಾಜಧಾನಿಯಲ್ಲಿ ಸಚಿವಾಲಯದ ಕಟ್ಟಡದ 200 ಮೀಟರ್ ದೂರದಲ್ಲಿನ ತಂಗ್‌ಮೀಬಂದ್ ವಲಯದಲ್ಲಿ ರಸ್ತೆಗಳ ನಡುವೆ ಟೈರ್‌ಗಳಿಗೆ ಬೆಂಕಿ ಹಚ್ಚಿ ಇಡಲಾಗಿತ್ತು. ರಾಜಭವನ ದತ್ತ ಮೆರವಣಿಗೆ ಹೊರಟಿದ್ದ ಗುಂಪು ಚದುರಿಸಲು ಪೊಲೀಸರು ಅಶ್ರುವಾಯು ಪ್ರಯೋಗಿಸಿದರು.

ಆಫ್‌ಸ್ಪಾ ವಾಪಸ್– ಸರ್ಕಾರ ಮನವಿ

ರಾಜ್ಯದ ಆರು ಪೊಲೀಸ್ ಠಾಣೆಗಳ ವ್ಯಾಪ್ತಿಗೆ ಅನ್ವಯಿಸಿ ಆಫ್‌ಸ್ಪಾ ಕಾಯ್ದೆಯನ್ನು ಹಿಂಪಡೆಯುವುದನ್ನು ಪರಿಶೀಲಿಸಬೇಕು ಎಂದು ಮಣಿಪುರ ಸರ್ಕಾರವು ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದೆ.

ಹಿಂಸಾಚಾರ ಪೀಡಿತ ಜಿರೀಬಾಮ್ ಪ್ರದೇಶ ಸೇರಿದಂತೆ ಆರು ಠಾಣೆಗಳ ವ್ಯಾಪ್ತಿಯಲ್ಲಿ ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ, 1958 (ಆಫ್‌ಸ್ಪಾ) ಅನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ.

ಕಾಯ್ದೆ ವಾಪಸಾತಿಗೆ ಕೋರಿ ರಾಜ್ಯ ಗೃಹ ಇಲಾಖೆ ಜಂಟಿ ಕಾರ್ಯದರ್ಶಿ ಕೇಂದ್ರಕ್ಕೆ ಪತ್ರ ಬರೆದಿದ್ದಾರೆ. ನವೆಂಬರ್ 15ರಂದು ನಡೆದ ರಾಜ್ಯ ಸಚಿವ ಸಂಪುಟ ಈ ಕುರಿತು ಶಿಫಾರಸು ಮಾಡಲು ತೀರ್ಮಾನಿಸಿದೆ ಎಂದು ತಿಳಿಸಿದೆ.

ಜಿರೀಬಾಮ್ ಜಿಲ್ಲೆಯಲ್ಲಿ ಆರು ಜನರ ಹತ್ಯೆ ಖಂಡಿಸಿ ಮೈತೇಯಿ ಸಮನ್ವಯ ಸಮಿತಿಯ ಮಹಿಳಾ ಘಟಕ, ಮಣಿಪುರ ವಿದ್ಯಾರ್ಥಿ ಸಂಘಟನೆಯ ಸದಸ್ಯರು ದೆಹಲಿಯ ಜಂತರ್ ಮಂತರ್‌ನಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

'ಮಣಿಪುರ ಉರಿಯಲಿ ಎಂಬುದೇ ಬಿಜೆಪಿ ಉದ್ದೇಶ'

ನವದೆಹಲಿ (ಪಿಟಿಐ): 'ಮಣಿಪುರ ಹೊತ್ತಿ ಉರಿಯಲಿ ಎಂಬುದೇ ಬಿಜೆಪಿಯ ಉದ್ದೇಶ. ಇದರಿಂದ ಅದರ ದ್ವೇಷಕಾರಿ ರಾಜಕೀಯದ ಗುರಿ ಈಡೇರಲಿದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಇಲ್ಲಿ ಟೀಕಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ನಮ್ಮ ನೋವು ಆಲಿಸಲು ರಾಜ್ಯಕ್ಕೆ ಭೇಟಿ ನೀಡಿಲ್ಲ ಮತ್ತು ನೋವು ಶಮನಗೊಳಿಸಲು ಆದ್ಯತೆ ನೀಡಿಲ್ಲ ಎಂಬುದನ್ನು ಮಣಿಪುರ ಜನರು ಎಂದಿಗೂ ಮರೆಯಲಾರರು ಎಂದು ಟೀಕಿಸಿದರು.

'ನರೇಂದ್ರ ಮೋದಿಯವರೇ ನಿಮ್ಮ ಡಬಲ್ ಎಂಜಿನ್ ಸರ್ಕಾರದ ಆಡಳಿತದಲ್ಲಿ 'ಮಣಿಪುರ ಒಂದಾಗಿಯೂ ಉಳಿದಿಲ್ಲ. ಸುರಕ್ಷಿತವಾಗಿಯೂ ಇಲ್ಲ' ಎಂದು ಖರ್ಗೆ 'ಎಕ್ಸ್' ಮೂಲಕ ಹೇಳಿದ್ದಾರೆ.

ಮೇ 2023ರಿಂದಲೂ ಮಣಿಪುರ ಊಹಿಸಲಾಗದ ನೋವು ಅನುಭವಿಸುತ್ತಿದೆ, ವಿಭಜನಗೊಂಡಿದೆ. ಹಿಂಸೆಗೆ ಗುರಿಯಾಗಿದೆ. ಈ ಬೆಳವಣಿಗೆಗಳು ಅಲ್ಲಿನ ಜನರ ಭವಿಷ್ಯವನ್ನೇ ನಾಶಪಡಿಸಿವೆ ಎಂದಿದ್ದಾರೆ.

ದ್ವೇಷ ರಾಜಕಾರಣದ ಉದ್ದೇಶ ಈಡೇರುವ ಕಾರಣ, ಮಣಿಪುರ ಉರಿಯಲಿ ಎಂದು ಬಿಜೆಪಿ ಬಯಸುತ್ತಿದೆ ಎಂದು ಜವಾಬ್ದಾರಿಯಿಂದಲೇ ಹೇಳುತ್ತಿದ್ದೇವೆ. ನ.7ರಿಂದ ಕನಿಷ್ಠ 17 ಜನ ಸತ್ತಿದ್ದಾರೆ. ಮಣಿಪುರವನ್ನು ರಕ್ಷಿಸಲು ಆಗಿಲ್ಲ. ಭವಿಷ್ಯದಲ್ಲಿ ನೀವು ಅಲ್ಲಿಗೆ ಭೇಟಿ ನೀಡಿದರೂ ಸಮಸ್ಯೆಗೆ ಸ್ಪಂದಿಸಲಿಲ್ಲ ಎಂಬುದನ್ನು ಜನ ಮರೆಯಲಾರರು ಎಂದು ಟೀಕಿಸಿದ್ದಾರೆ.

ಬಿಜೆಪಿ ವಿರುದ್ಧ ಆಯೋಗಕ್ಕೆ ದೂರು

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾರ್ಖಂಡ್ ಬಿಜೆಪಿ ಘಟಕವು ಬಳಸುತ್ತಿರುವ ಫೇಸ್‌ಬುಕ್ ಮತ್ತು 'ಎಕ್ಸ್' ಜಾಲತಾಣದ ಖಾತೆಗಳನ್ನು ನಿರ್ಬಂಧಿಸುವಂತೆ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ಭಾನುವಾರ ದೂರು ಸಲ್ಲಿಸಿದೆ.

ಸಾಮಾಜಿಕ ಜಾಲತಾಣದ ತನ್ನ ಖಾತೆಗಳಲ್ಲಿ ಬಿಜೆಪಿಯು ಪೋಸ್ಟ್ ಮಾಡಿರುವ 'ಕೋಮು, ವಿಭಜನೆ ಹಾಗೂ ದ್ವೇಷಪೂರಿತ' ಹೇಳಿಕೆಗಳು ಹಾಗೂ ವಿಡಿಯೊಗಳನ್ನು ತೆಗೆದುಹಾಕುವಂತೆ ಆದೇಶವನ್ನು ಜಾರಿಗೊಳಿಸಿ ಎಂದು ಇದೇ ಸಂದರ್ಭ ಆಗ್ರಹಿಸಿದೆ.

ಕಾಂಗ್ರೆಸ್ ಸಲ್ಲಿಸಿದ್ದ ದೂರಿಗೆ ಸಂಬಂಧಿಸಿದ ವಿಡಿಯೊವನ್ನು ತನ್ನ ಸಾಮಾಜಿಕ ಜಾಲತಾಣದ ಖಾತೆಗಳಿಂದ ತೆಗೆದುಹಾಕದ ಬಿಜೆಪಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಒತ್ತಾಯಿಸಿದ್ದಾರೆ.

ಬಿಜೆಪಿ ವಿರುದ್ಧ ಜೈರಾಮ್ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಆಯೋಗಕ್ಕೆ ಎರಡನೇ ಬಾರಿಗೆ ದೂರು ದಾಖಲಿಸಿದ್ದಾರೆ.

ಚುನಾವಣಾ ಆಯೋಗದ ಆದೇಶದ ಮೇರೆಗೆ ಪ್ರಕರಣ ದಾಖಲಾಗಿದೆ.

ಬಾಗಲಕೋಟೆಯಲ್ಲಿ ಭಾನುವಾರ ನಡೆದ 71ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 'ಸಹಕಾರ ರತ್ನ ಪ್ರಶಸ್ತಿ' ಪ್ರದಾನ ಮಾಡಿದರು. ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡ, ಸಚಿವರಾದ ಶಿವಾನಂದ ಪಾಟೀಲ, ಕೆ.ಎನ್.ರಾಜಣ್ಣ ಮತ್ತಿತರರು ಇದ್ದರು

ನಬಾರ್ಡ್ ಸಾಲ ಕಡಿತ: ಕೇಂದ್ರಕ್ಕೆ ಸಿ.ಎಂ ಪತ್ರ

ಒಂದನೇ ಪುಟದಿಂದ...

'ಸಹಕಾರ ಕ್ಷೇತ್ರ ರಾಜ್ಯ ವಲಯಕ್ಕೆ ಸಂಬಂಧಿಸಿದ್ದು ಎಂಬುದನ್ನು ಸಂವಿಧಾನದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆದರೆ, ಸಹಕಾರ ಇಲಾಖೆಯನ್ನು ಕೇಂದ್ರ ಸರ್ಕಾರ ಏಕಾಏಕಿ ಘೋಷಣೆ ಮಾಡಿದೆ. ಅಮಿತ್ ಶಾ ಕೇಂದ್ರ ಸಹಕಾರ ಸಚಿವರಾಗಿದ್ದಾರೆ. ಅದರಿಂದ ಏನಾದರೂ ಪ್ರಯೋಜನವಾಗಿದೆಯೇ ಎಂದು ಕೇಳಿದರು.

'ಪಡಿತರ ಕಾರ್ಡು ರದ್ದು ಇಲ್ಲ'

'ರಾಜ್ಯದ ಯಾವುದೇ ಅರ್ಹರ ಪಡಿತರ ಕಾರ್ಡು ರದ್ದು ಆಗುವುದಿಲ್ಲ. ತೆರಿಗೆ ಪಾವತಿಸುವವರು ಮತ್ತು ಸರ್ಕಾರಿ ನೌಕರಿಯಲ್ಲಿ ಇರುವವರು ಪಡೆದಿದ್ದ ಬಿಪಿಎಲ್ (ಬಡತನ ರೇಖೆಗಿಂತ ಕೆಳಗೆ) ಕಾರ್ಡ್‌ಗಳನ್ನು ಎಪಿಎಲ್ (ಬಡತನ ರೇಖೆಗಿಂತ ಮೇಲೆ) ಕಾರ್ಡ್ ಆಗಿ ಪರಿವರ್ತಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ಬಿಜೆಪಿ ಸರ್ಕಾರದಲ್ಲಿ ಶೇ 40ರಷ್ಟು ಕಮಿಷನ್ ಆರೋಪ ಸುಳ್ಳು ಎಂದು ವರದಿ ಸಲ್ಲಿಕೆ ಆಗಿದೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಗುತ್ತಿಗೆದಾರರ ಸಂಘದ ಕೆಂಪಣ್ಣ ಆರೋಪಿಸಿದ್ದರು. ಅದಕ್ಕಾಗಿ ಆಯೋಗ ರಚಿಸಲಾಗಿತ್ತು. ವರದಿ ಏನು ಬಂದಿದೆ ಎಂದು ಇನ್ನೂ ನೋಡಿಲ್ಲ. ನೋಡಿದ ಬಳಿಕ ಪ್ರತಿಕ್ರಿಯೆ ನೀಡುವೆ' ಎಂದರು.

'ಬಿಜೆಪಿ, ಆರ್‌ಎಸ್‌ಎಸ್ ವಿಷ ಇದ್ದಂತೆ'

ಪುಣೆ (ಪಿಟಿಐ): ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಅನ್ನು ವಿಷಕ್ಕೆ ಹೋಲಿಸಿ ವಾಗ್ದಾಳಿ ನಡೆಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ

ಸಾಂಗ್ಲಿಯಲ್ಲಿ ಭಾನುವಾರ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು,'ಭಾರತದಲ್ಲಿ ರಾಜಕೀಯವಾಗಿ ಅತ್ಯಂತ ಅಪಾಯಕಾರಿ ಎಂಬುದು ಇದ್ದರೆ ಅದು ಬಿಜೆಪಿ ಮತ್ತು ಆರ್‌ಎಸ್‌ಎಸ್. ಅವುಗಳು ವಿಷದಂತಿವೆ. ವಿಷಕಾರಿ ಹಾವು ಕಚ್ಚಿದರೆ, ಆ ವ್ಯಕ್ತಿ ಸಾಯುತ್ತಾನೆ. ಅಂತಹ ವಿಷಕಾರಿ ಹಾವನ್ನು ಕೊಲ್ಲಬೇಕು' ಎಂದು ಹೇಳಿದರು.

'ಮಣಿಪುರ ಹೊತ್ತಿ ಉರಿಯುತ್ತಿದ್ದು, ಅಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ನಡೆಯುತ್ತಿದೆ. ಆದರೆ ಪ್ರಧಾನಿ ಮೋದಿ ಅವರು ಅಲ್ಲಿಗೆ ಒಮ್ಮೆಯೂ ಭೇಟಿ ನೀಡಿಲ್ಲ. ಅವರು ವಿದೇಶ ಪ್ರವಾಸಕ್ಕೆ ತೆರಳಿದ್ದಾರೆ' ಎಂದು ಟೀಕಿಸಿದರು.

ಆದಾಯಕ್ಕಿಂತ ಹೆಚ್ಚು ಸ್ವತ್ತು ಹೊಂದಿದ ಆರೋಪ

ಜಮೀರ್‌ಗೆ 'ಲೋಕಾ' ಸಮನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಸಚಿವ ಜಮೀರ್ ಅಹಮದ್ ಖಾನ್ ಅವರಿಗೆ ಲೋಕಾಯುಕ್ತ ಪೊಲೀಸರು ಸಮನ್ಸ್ ನೀಡಿದ್ದಾರೆ.

ಲೋಕಾಯುಕ್ತದ ಅಧಿಕಾರಿಗಳು ಶನಿವಾರ ಜಮೀರ್ ಅವರಿಗೆ ಸಮನ್ಸ್ ನೀಡಿದ್ದು, ಡಿಸೆಂಬರ್ 3ರಂದು ವಿಚಾರಣೆಗೆ ಹಾಜರಾಗುವಂತೆ ಸಮನ್ಸ್‌ನಲ್ಲಿ ಸೂಚಿಸಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ನೀಡಿದ ಹೇಳಿಕೆ ಸಂಬಂಧ ಜಮೀರ್ ಅವರು ತೀವ್ರ ಟೀಕೆಗೆ ಗುರಿಯಾಗಿರುವ ಹೊತ್ತಿನಲ್ಲೇ ಈ ಸಮನ್ಸ್ ಜಾರಿಯಾಗಿದೆ. ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಹೈಕೋರ್ಟ್‌ನ ತೀರ್ಪು, 'ರಾಜಕೀಯ ಪ್ರೇರಿತವಾದುದು' ಎಂದು ಅವರು ನೀಡಿದ್ದ ಹೇಳಿಕೆ ಸಂಬಂಧ ಕ್ರಮ ತೆಗೆದುಕೊಳ್ಳುವಂತೆ ಅಡ್ವೊಕೇಟ್ ಜನರಲ್ ಅವರಿಗೆ ರಾಜ್ಯಪಾಲರು ಹಿಂದಿನ ವಾರವಷ್ಟೇ ಸೂಚನೆ ನೀಡಿದ್ದರು.

ಮುಖ್ಯಾಂಶಗಳು

- ಇ.ಡಿ ವರದಿ ಆಧಾರದಲ್ಲಿ, 2021ರಲ್ಲಿ ದಾಖಲಾಗಿದ್ದ ಪ್ರಕರಣ
- ಎಸಿಬಿ ರದ್ದಾದ ನಂತರ ನನೆಗುದಿಗೆ ಬಿದ್ದಿದ್ದ ತನಿಖೆಗೆ ಈಗ ಜೀವ
- ಡಿಸೆಂಬರ್ 3ರಂದು ವಿಚಾರಣೆಗೆ ಹಾಜರಾಗುವಂತೆ ಸಮನ್ಸ್

ಪ್ರಕರಣದ ವಿವರ: ಐಎಂಎ ಚಿಟ್‌ಫಂಡ್ ವಂಚನೆ ಪ್ರಕರಣದ ತನಿಖೆ ವೇಳೆ, ಐಎಂಎ ಮತ್ತು ಜಮೀರ್ ಅಹಮದ್ ಅವರ ನಡುವೆ ಹಣಕಾಸು ವ್ಯವಹಾರ ನಡೆದಿರುವುದನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಪತ್ತೆ ಮಾಡಿತ್ತು. ಹೆಚ್ಚಿನ ತನಿಖೆಗಾಗಿ ಜಮೀರ್ ಅವರಿಗೆ ಸೇರಿದ ಜಾಗಗಳ ಮೇಲೆ ಇ.ಡಿ ಅಧಿಕಾರಿಗಳು 2021ರ ಆಗಸ್ಟ್‌ನಲ್ಲಿ ದಾಳಿ ನಡೆಸಿದ್ದರು.

ಜಮೀರ್ ಅಹಮದ್

ಚಿಟ್‌ಫಂಡ್ ವಂಚನೆಗೆ ಸಂಬಂಧಿಸಿದಂತೆ ದಾಳಿ ಸಂದರ್ಭದಲ್ಲಿ ಯಾವ ದಾಖಲೆಗಳೂ ಪತ್ತೆಯಾಗಿರಲಿಲ್ಲ. ಆದರೆ ಜಮೀರ್ ಅವರು ತಮ್ಮ ಆದಾಯಕ್ಕಿಂತ ಹೆಚ್ಚು ಸ್ವತ್ತು ಹೊಂದಿರುವುದು ಪತ್ತೆಯಾಗಿತ್ತು. ಈ ಸಂಬಂಧ ರಾಜ್ಯದ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಇ.ಡಿ ವಿವರಣಾತ್ಮಕವಾದ ವರದಿಯನ್ನು ನೀಡಿತ್ತು. ಜತೆಗೆ ತನಿಖೆಯ ಅಗತ್ಯವಿದೆ ಎಂದು ಹೇಳಿತ್ತು.

2022ರ ಸೆಪ್ಟೆಂಬರ್‌ನಲ್ಲಿ ಎಸಿಬಿ ರದ್ದಾದ ಕಾರಣ, ಎಲ್ಲ ಪ್ರಕರಣಗಳು ಲೋಕಾಯುಕ್ತಕ್ಕೆ ವರ್ಗಾವಣೆಯಾಗಿದ್ದವು. ಆನಂತರ ಜಮೀರ್ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದಂತೆ ಗಣನೀಯ ಮಟ್ಟದ ತನಿಖೆ ನಡೆದಿರಲಿಲ್ಲ. ಆದರೆ, ಈಗ ಪ್ರಕರಣಕ್ಕೆ ಮರುಜೀವ ನೀಡಲಾಗಿದೆ.

ಕಾಲುವೆಯಲ್ಲಿ ಪತ್ತೆಯಾದ ಪ್ರಕರಣ; ಐವರ ಬಂಧನ

ಮತಪೆಟ್ಟಿಗೆ ಕದ್ದು ₹200ಕ್ಕೆ ಮಾರಾಟ

ಪ್ರಜಾವಾಣಿ ವಾರ್ತೆ

ಹಾವೇರಿ: ಇಲ್ಲಿಯ ಯತ್ತಿನಹಳ್ಳಿ ಹೊಸ ಬಡಾವಣೆಯ ರಸ್ತೆ ಬದಿಯ ಕಾಲುವೆಯಲ್ಲಿ 10 ಮತಪೆಟ್ಟಿಗೆಗಳು ಪತ್ತೆಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಿ ವ್ಯಾಪಾರಿ ಸೇರಿ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಗುತ್ತಲ ರಸ್ತೆಯ ವಿಜಯನಗರ ಬಡಾವಣೆಯ ಸಂತೋಷ ಮಾಳಗಿ, ಯತ್ತಿನಹಳ್ಳಿಯ ಗಣೇಶ ಹರಿಜನ, ಕೃಷ್ಣ ಹರಿಜನ ಪುರದ ಓಣಿಯ ಮುತ್ತಪ್ಪ ದೇವಿಹೊಸೂರು ಮತ್ತು ಸುಭಾಷ್ ಸರ್ಕಲ್ ಮಕಾನಗಲ್ಲಿಯ ಮಹಮ್ಮದ್ ಜಾವೀದ್ ಮಕಾನದಾರ ಬಂಧಿತರು. 27 ಮತಪೆಟ್ಟಿಗೆಗಳನ್ನು ಜಪ್ತಿ ಮಾಡಲಾಗಿದೆ. ಮತಪೆಟ್ಟಿಗೆ ಕಳವು ಕುರಿತು ತಹಶೀಲ್ದಾರ್ ಕಚೇರಿ ಅಧಿಕಾರಿ ದೂರು ನೀಡಿದ್ದರು' ಎಂದು ಹಾವೇರಿ ಶಹರ ಪೊಲೀಸರು ತಿಳಿಸಿದ್ದಾರೆ.

ಎರಡು ಬಾರಿ ಕಳವು: 'ಎಪಿಎಂಸಿಯಲ್ಲಿ ಕೂಲಿ ಕಾರ್ಮಿಕರಾಗಿದ್ದ ಈ ಆರೋಪಿಗಳಲ್ಲಿ ಬಹುತೇಕರು ಮದ್ಯವ್ಯಸನಿಗಳು. ಗೋದಾಮಿನಲ್ಲಿ ಕಬ್ಬಿಣದ ಪೆಟ್ಟಿಗೆಗಳನ್ನು ಕಳವು ಮಾಡಿ, ಗುಜರಿಗೆ ಮಾರಲು ಸಂಚು ರೂಪಿಸಿದ್ದರು. ಆದರೆ, ಅವು ಮತಪೆಟ್ಟಿಗೆ ಎಂಬುದು ಅವರಿಗೆ ಗೊತ್ತಿರಲಿಲ್ಲ. ಗೋದಾಮಿನ ಬಾಗಿಲು ಮೀಟಿ ಎರಡು ಬಾರಿ ಒಳಗೆ ನುಗ್ಗಿದ್ದ ಆರೋಪಿಗಳು, 17 ಮತಪೆಟ್ಟಿಗೆಗಳನ್ನು ಕದ್ದು, ಗುಜರಿ ವ್ಯಾಪಾರಿ ಮಹಮ್ಮದ್ ಜಾವೀದ್ ಮಕಾನದಾರ ಬಳಿ ಒಯ್ದಿದ್ದರು. ತಲಾ ಒಂದು ಮತಪೆಟ್ಟಿಗೆಯನ್ನು ₹200ಕ್ಕೆ ಮಾರಾಟ ಮಾಡಿ ₹3,400 ಪಡೆದಿದ್ದರು. ಅದೇ ಹಣದಲ್ಲಿ ಮದ್ಯ ಕುಡಿದಿದ್ದರು' ಎಂದು ಅವರು ತಿಳಿಸಿದ್ದಾರೆ.

ಹಾವೇರಿ ಯತ್ನಳ್ಳಿ ಹೊಸ ಬಡಾವಣೆಯ ರಸ್ತೆ ಬದಿಯ ಕಾಲುವೆಯಲ್ಲಿ ಪತ್ತೆಯಾಗಿದ್ದ ಮತಪೆಟ್ಟಿಗೆಗಳು

ಗ್ರಾ.ಪಂ. ಚುನಾವಣೆಗೆ ಬಳಸಿದ್ದ ಮತಪೆಟ್ಟಿಗೆಗಳನ್ನು ಕದ್ದಿದ್ದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ವಿಜಯ ಮಹಾಂತೇಶ ದಾನಮ್ಮನವರ, ಜಿಲ್ಲಾಧಿಕಾರಿ, ಹಾವೇರಿ

ಮೂರನೇ ಬಾರಿ ಖರೀದಿಗೆ ನಿರಾಕರಣೆ: 'ಮೂರನೇ ಬಾರಿ ಗೋದಾಮಿನೊಳಗೆ ಈಚೆಗೆ ನುಗ್ಗಿದ್ದ ಆರೋಪಿಗಳು, 10 ಮತಪೆಟ್ಟಿಗೆಗಳನ್ನು ಕದ್ದು ಗುಜರಿ ವ್ಯಾಪಾರಿ ಬಳಿ ಒಯ್ದಿದ್ದರು. ಆದರೆ, ಆತ ಮತಪೆಟ್ಟಿಗೆ ಖರೀದಿಸಲು ನಿರಾಕರಿಸಿದ್ದಕ್ಕೆ ಸಿಟ್ಟಿಗೆದ್ದ ಆರೋಪಿಗಳು, ರಸ್ತೆ ಬದಿಯ ಕಾಲುವೆಯಲ್ಲಿ ಎಸೆದು ಹೋಗಿದ್ದರು. ಶಿಗ್ಗಾವಿ ಉಪಚುನಾವಣೆಯ ಮತದಾನ ನಡೆದ ಮರುದಿನವೇ ಮತಪೆಟ್ಟಿಗೆಗಳು ಪತ್ತೆಯಾಗಿದ್ದವು. ಇನ್‌ಸ್ಪೆಕ್ಟರ್ ಮೋತಿಲಾಲ್ ಪವಾರ ನೇತೃತ್ವದ ತಂಡವು ಆರೋಪಿಗಳನ್ನು ಬಂಧಿಸಿತು' ಎಂದು ಅವರು ತಿಳಿಸಿದ್ದಾರೆ.

'ಒಳ ಮೀಸಲಾತಿ ಚಿಂತನ-ಮಂಥನ ಶಿಬಿರ'ದಲ್ಲಿ ಮಾದಾರ ಚನ್ನಯ್ಯ ಸ್ವಾಮೀಜಿ

ಮುನಿಯಪ್ಪ, ತಿಮ್ಮಾಪೂರ ಸಿ.ಎಂ. ಆಗಲು ಅರ್ಹರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾದಿಗ ಸಮುದಾಯದ ಸಚಿವರಾದ ಕೆ.ಎಚ್. ಮುನಿಯಪ್ಪ ಹಾಗೂ ಆರ್.ಬಿ. ತಿಮ್ಮಾಪೂರ ಅವರಿಗೆ ಮುಖ್ಯಮಂತ್ರಿ ಆಗುವ ಅರ್ಹತೆಗಳಿವೆ. ಆದರೂ, ಅವರಿಗೆ ಉಪಯೋಗವಿಲ್ಲದ ಖಾತೆಗಳನ್ನು ನೀಡಲಾಗಿದೆ' ಎಂದು ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಮಾದಿಗ ಪ್ರಾಧ್ಯಾಪಕರ ವೇದಿಕೆ ಭಾನುವಾರ ಆಯೋಜಿಸಿದ್ದ 'ಒಳ ಮೀಸಲಾತಿ: ಚಿಂತನ–ಮಂಥನ' ಎಂಬ ಎರಡು ದಿನಗಳ ಶಿಬಿರದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

'ಕಾಂಗ್ರೆಸ್ ನೇತೃತ್ವದ ಸರ್ಕಾರದ ಸಂಪುಟ ರಚನೆಯ ಮುನ್ನವೇ ಪ್ರಬಲ ಖಾತೆಯನ್ನು ಪಡೆದುಕೊಳ್ಳುವಂತೆ ಮುನಿಯಪ್ಪ ಅವರಿಗೆ ಸಲಹೆ ನೀಡಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ. ಏಳು ಬಾರಿ ಸಂಸದರಾಗಿ, ಮೂರು ಬಾರಿ ಕೇಂದ್ರ ಸಚಿವರಾಗಿರುವ ಮುನಿಯಪ್ಪ ಅವರ ಸೇವೆ ಪರಿಗಣಿಸಿ ಉತ್ತಮ ಸ್ಥಾನಮಾನ ನೀಡಬೇಕು' ಎಂದು ಒತ್ತಾಯಿಸಿದರು.

ಒಳ ಮೀಸಲಾತಿ ಚಿಂತನ ಮಂಥನ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಎ. ನಾರಾಯಣ ಸ್ವಾಮಿ ಮತ್ತು ಮಾರಸಂದ್ರ ಮುನಿಯಪ್ಪ ಕುಶಲೋಪರಿಯಲ್ಲಿ ತೊಡಗಿದ್ದರು. ಎಲ್. ಹನುಮಂತಯ್ಯ, ಹೊಸಪೇಟೆಯ ಪೂರ್ಣಾನಂದ ಭಾರತಿ ಸ್ವಾಮೀಜಿ, ಮಾದಾರ ಚನ್ನಯ್ಯ ಸ್ವಾಮೀಜಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

'ಜೆ.ಸಿ. ಮಾಧುಸ್ವಾಮಿ ನೇತೃತ್ವದ ಸಂಪುಟ ಉಪ ಸಮಿತಿ ನಮ್ಮ ಸಮುದಾಯಕ್ಕೆ ಹಂಚಿಕೆ ಮಾಡಿದ್ದ ಮೀಸಲಾತಿಯಲ್ಲಿ ಶೇ1ರಷ್ಟು ಕಡಿಮೆಯಾದರೂ ಹೋರಾಟ ಮಾಡಲಾಗುವುದು. ಸಮುದಾಯ ಅಂತ ಬಂದರೆ ಎಡ-ಬಲ ಎಂಬ ಭೇದ– ಭಾವಗಳನ್ನು ಮರೆತು ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಬೇಕು' ಕರೆ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ, 'ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಉಪ ಪಂಗಡಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಿಂದುಳಿದಿರುವಿಕೆಯ ಆಧಾರದಲ್ಲಿ ಒಳ ಮೀಸಲಾತಿ ಹಂಚಿಕೆ ಮಾಡಬೇಕು. ಜನಸಂಖ್ಯೆ ಆಧಾರದ ಮೇಲೆ ಒಳಮೀಸಲಾತಿ ಹಂಚಿಕೆ ಮಾಡದಂತೆ ನ್ಯಾಯಮೂರ್ತಿ ನಾಗಮೋಹನದಾಸ್ ನೇತೃತ್ವದ ಆಯೋಗಕ್ಕೆ ಮನವಿ ಮಾಡಬೇಕು' ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಂಗ್ರೆಸ್ ಮುಖಂಡ ಎಲ್. ಹನುಮಂತಯ್ಯ, 'ಒಳ ಮೀಸಲಾತಿಯನ್ನು ಜಾರಿಗೊಳಿಸುವ ಸಂದರ್ಭದಲ್ಲಿ ನಿಖರವಾದ ಅಂಕಿ-ಅಂಶಗಳನ್ನು ಆಧಾರವಾಗಿ ಇಟ್ಟುಕೊಳ್ಳಬೇಕೆಂದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಹೇಳಿದೆ. ನಿಖರ ಅಂಕಿ-ಅಂಶಗಳ ಸಂಗ್ರಹಿಸುವ ಉದ್ದೇಶದಿಂದ ನಾಗಮೋಹನದಾಸ್ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಲಾಗಿದೆ. ಮೂರು ತಿಂಗಳಲ್ಲಿ ಒಳ ಮೀಸಲಾತಿ ಜಾರಿಗೊಳಿಸಲಾಗುವುದು' ಎಂದು ಭರವಸೆ ನೀಡಿದರು.

ವೇದಿಕೆಯ ಪ್ರಧಾನ ಪೋಷಕ ಭೀಮಾಶಂಕರ, ನರಸಿಂಹಮೂರ್ತಿ ಎನ್., ನಿವೃತ್ತ ಐಎಎಸ್ ಅಧಿಕಾರಿಗಳಾದ ಬಾಬುರಾವ್ ಮುಡಬಿ, ಗೋನಾಳ ಭೀಮಪ್ಪ ಉಪಸ್ಥಿತರಿದ್ದರು.

'ಜ್ಞಾನಪ್ರಕಾಶ ಸ್ವಾಮೀಜಿ ರಾಜಕಾರಣ ಮಾಡುವುದಿಲ್ಲವೆ?'

'ಮಾದಾರ ಚನ್ನಯ್ಯ ಸ್ವಾಮೀಜಿ ಅವರು ಒಳಮೀಸಲಾತಿ ಜಾರಿಗೊಳಿಸುವಂತೆ ಹೋರಾಟ ಮಾಡುತ್ತಿದ್ದಾರೆ. ಆದರೆ, ಕೆಲವರು ಇವರನ್ನು ಆರ್‌ಎಸ್‌ಎಸ್, ಬಿಜೆಪಿ ಏಜೆಂಟ್ ಎನ್ನುತ್ತಿದ್ದಾರೆ. ಅದೇ ರೀತಿ ಮೈಸೂರಿನ ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ ಅವರು ಮಾಡಿದಷ್ಟು ರಾಜಕಾರಣವನ್ನು ಬೇರೆ ಯಾರೂ ಮಾಡುವುದಿಲ್ಲ. ಅವರನ್ನು ಏಕೆ ಕಾಂಗ್ರೆಸ್ ಏಜೆಂಟ್ ಎಂದು ಯಾರೂ ಹೇಳುವುದಿಲ್ಲ' ಎಂದು ಅಖಿಲ ಭಾರತ ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಪ್ರಶ್ನಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸೋಲುವುದು ತಪ್ಪಲ್ಲ, ಅಲ್ಪಗುರಿ ಇರಿಸಿಕೊಳ್ಳುವುದು ತಪ್ಪು.

–ಚಾಣಕ್ಯ

ಅಗ್ನಿ ದುರಂತದಲ್ಲಿ ಶಿಶುಗಳ ಸಾವು ಅನಾಹುತಗಳಿಂದ ಕಲಿಯದ ಪಾಠ

ಉತ್ತರಪ್ರದೇಶದ ಝಾನ್ಸಿಯಲ್ಲಿನ ಮಹಾರಾಣಿ ಲಕ್ಷ್ಮಿಬಾಯಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ವಾರ್ಡ್‌ನಲ್ಲಿ ನಡೆದ ಅಗ್ನಿ ದುರಂತದಲ್ಲಿ 10 ನವಜಾತ ಶಿಶುಗಳು ಪ್ರಾಣ ಕಳೆದುಕೊಂಡಿರುವುದು ಹೃದಯ ವಿದ್ರಾವಕ. ಮಕ್ಕಳು, ಅದರಲ್ಲೂ ಮುಖ್ಯವಾಗಿ ನವಜಾತ ಶಿಶುಗಳು ಇಂತಹ ದುರಂತಗಳಲ್ಲಿ ಪ್ರಾಣ ಕಳೆದುಕೊಳ್ಳುವ ಅಪಾಯ ಹೆಚ್ಚು. ಶಿಶುಗಳ ಸಾವು ವೈಯಕ್ತಿಕ ಮಟ್ಟದಲ್ಲಿ ಹಾಗೂ ಸಮುದಾಯದ ಮಟ್ಟದಲ್ಲಿ ಬಹಳ ನೋವನ್ನು ಉಂಟುಮಾಡುತ್ತದೆ. ಬೆಂಕಿಗೆ ಆಹುತಿಯಾಗುವುದು ಘೋರ. ಅದರಲ್ಲೂ, ಆಸ್ಪತ್ರೆಯಲ್ಲಿ ಬೆಂಕಿಗೆ ಆಹುತಿಯಾಗಿ ಜೀವ ಕಳೆದುಕೊಳ್ಳುವುದು ಇತರ ಯಾವುದೇ ಸ್ಥಳದಲ್ಲಿ ಉಂಟಾಗುವ ಅಗ್ನಿ ಅನಾಹುತಗಳಿಗಿಂತ ಹೆಚ್ಚಿನ ಪ್ರಶ್ನೆಗಳನ್ನು ಮೂಡಿಸುತ್ತದೆ. ಈ ಆಸ್ಪತ್ರೆಯಲ್ಲಿ 18 ಜನರಿಗೆ ಮಾತ್ರ ಜಾಗ ಇರುವ ತೀವ್ರ ನಿಗಾ ಘಟಕದಲ್ಲಿ (ಐಸಿಯು) 49 ಶಿಶುಗಳು ಇದ್ದವು ಎಂದು ವರದಿಗಳು ಹೇಳುತ್ತವೆ. 31 ಶಿಶುಗಳನ್ನು ಬೆಂಕಿಯಿಂದ ರಕ್ಷಿಸಲಾಗಿದೆ. ಕೆಲವು ಶಿಶುಗಳ ಪರಿಸ್ಥಿತಿ ಚಿಂತಾಜನಕವಾಗಿದೆ. ಆಸ್ಪತ್ರೆಯ ಆಡಳಿತ ಮಂಡಳಿ ಹಾಗೂ ಉತ್ತರಪ್ರದೇಶ ಸರ್ಕಾರವು ಹಲವು ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗುತ್ತದೆ. ಆಸ್ಪತ್ರೆ ಮತ್ತು ಮುಖ್ಯವಾಗಿ ನವಜಾತ ಶಿಶುಗಳಿಗಾಗಿನ ಐಸಿಯು ಬೆಂಕಿ ದುರಂತಕ್ಕೆ ತುತ್ತಾದುದು ಹೇಗೆ? ಈ ದುರಂತಕ್ಕೆ ಕಾರಣ ಏನು? ಅಲ್ಲಿನ ಅಗ್ನಿ ಸುರಕ್ಷತಾ ವ್ಯವಸ್ಥೆಯು ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುತ್ತಿತ್ತೇ? ಎಲ್ಲ ಹಂತಗಳ ಅಗ್ನಿಶಾಮಕ ವ್ಯವಸ್ಥೆಗಳು ಕೆಲಸ ಮಾಡುತ್ತಿದ್ದವು ಎಂದು ಆಸ್ಪತ್ರೆಯ ಅಧಿಕಾರಿಗಳು ಹೇಳಿದ್ದಾರೆ. ಆದರೆ ಕೆಲವು ವರದಿಗಳ ಪ್ರಕಾರ, ಎಲ್ಲವೂ ಸರಿಯಾಗಿ ಕೆಲಸ ಮಾಡಿಲ್ಲ. ಈ ಆಸ್ಪತ್ರೆ ಮಾತ್ರವೇ ಅಲ್ಲದೆ ದೇಶದ ಬೇರೆ ಕಟ್ಟಡಗಳಲ್ಲಿಯೂ ಅಗ್ನಿ ದುರಂತಗಳನ್ನು ತಡೆಯುವಲ್ಲಿನ ಸಿದ್ಧತೆಗಳು ಹಾಗೂ ಸುರಕ್ಷತಾ ಕ್ರಮಗಳ ಬಗ್ಗೆ ಈ ದುರಂತವು ಹಲವು ಪ್ರಶ್ನೆಗಳನ್ನು ಹುಟ್ಟಿಸುತ್ತದೆ.

ಅಗ್ನಿ ದುರಂತಗಳನ್ನು ಎದುರಿಸಲು ಅಗತ್ಯವಿರುವ ಸಿದ್ಧತೆಗಳ ಕುರಿತು ನಡೆಯುವ ಚರ್ಚೆಯು ಕಾರ್ಯರೂಪಕ್ಕೆ ಬರಬೇಕಾಗಿದೆ

ಅಗ್ನಿ ಅನಾಹುತಗಳಲ್ಲಿ ಶಿಶುಗಳು ಜೀವ ಕಳೆದುಕೊಳ್ಳುವುದು ಹೊಸದೇನೂ ಅಲ್ಲ. ಈ ವರ್ಷದ ಮೇ ತಿಂಗಳಲ್ಲಿ ದೆಹಲಿಯ ಆಸ್ಪತ್ರೆಯೊಂದರಲ್ಲಿ ನಡೆದ ಬೆಂಕಿ ಅನಾಹುತದಲ್ಲಿ ಏಳು ನವಜಾತ ಶಿಶುಗಳು ಜೀವ ಕಳೆದುಕೊಂಡವು. 2021ರಲ್ಲಿ ನಾಗ್ಪುರ ಸಮೀಪದ ಆಸ್ಪತ್ರೆಯೊಂದರಲ್ಲಿ ನಡೆದ ಇಂತಹ ಅನಾಹುತದಲ್ಲಿ 10 ಶಿಶುಗಳು ಪ್ರಾಣ ಕಳೆದುಕೊಂಡವು. ಈ ವರ್ಷದ ಮೇ ತಿಂಗಳಲ್ಲಿ ರಾಜ್‌ಕೋಟ್‌ನ ಗೇಮಿಂಗ್ ಕೇಂದ್ರವೊಂದರಲ್ಲಿ ಹೊತ್ತಿಕೊಂಡ ಬೆಂಕಿಯ ಪರಿಣಾಮವಾಗಿ ಕನಿಷ್ಠ 33 ಮಂದಿ ಸಾವಿಗೀಡಾದರು. 1997ರಲ್ಲಿ ದೆಹಲಿಯ ಉಪಹಾರ್ ಸಿನಿಮಾ ಕಟ್ಟಡದಲ್ಲಿ ನಡೆದ ದುರಂತ, ಬೆಂಗಳೂರಿನ ಕಾರ್ಲ್‌ಟನ್ ಟವರ್ಸ್‌ನಲ್ಲಿ 2010ರಲ್ಲಿ ನಡೆದ ಅವಘಡ, ಕೋಲ್ಕತ್ತದ ಎಎಂಆರ್‌ಐ ಆಸ್ಪತ್ರೆಯಲ್ಲಿ 2011ರಲ್ಲಿ ನಡೆದ ಬೆಂಕಿ ಅನಾಹುತ ಸೇರಿದಂತೆ ಹಲವು ಅಗ್ನಿ ಅನಾಹುತಗಳು ದೇಶದಲ್ಲಿ ಆಗಿವೆ. ದುರಂತ ಸಂಭವಿಸಿದ ನಂತರ ನಡೆಸುವ ತನಿಖೆಗಳಿಂದ, ತನಿಖಾ ಸಮಿತಿಗಳು ನೀಡುವ ಶಿಫಾರಸುಗಳಿಂದ ಅಂತಹ ದುರಂತಗಳು ಆಗದಂತೆ ನೋಡಿಕೊಳ್ಳುವ ಯಾವ ಪಾಠವನ್ನೂ ಸಂಬಂಧಪಟ್ಟವರು ಕಲಿತಂತಿಲ್ಲ.

ಆಸ್ಪತ್ರೆಗಳು, ಮನೆಗಳು, ವಾಣಿಜ್ಯ ಮಳಿಗೆಗಳು, ಸಿನಿಮಾ ಮಂದಿರಗಳು, ಮನರಂಜನಾ ಕೇಂದ್ರಗಳನ್ನು ನಿರ್ಮಿಸುವಾಗ ಪಾಲನೆ ಮಾಡಬೇಕಿರುವ ಅಗ್ನಿ ಸುರಕ್ಷತಾ ಕ್ರಮಗಳು ಹಾಗೂ ಇತರ ಸುರಕ್ಷತಾ ಕ್ರಮಗಳ ಪಾಲನೆ ಆಗುತ್ತಿಲ್ಲ. ನಿಯಮಗಳನ್ನು ಉಲ್ಲಂಘಿಸುವ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕಟ್ಟಡಗಳ ಮಾಲೀಕರು ಹಾಗೂ ಗುತ್ತಿಗೆದಾರರ ಜೊತೆ ಷಾಮೀಲಾಗಿರುವುದೂ ಇದೆ. ಅವರಿಗೆ ರಾಜಕಾರಣಿಗಳ ಬೆಂಬಲವೂ ಹಲವು ಸಂದರ್ಭಗಳಲ್ಲಿ ಇರುತ್ತದೆ. ಮಹಾರಾಷ್ಟ್ರದಲ್ಲಿನ ಶೇಕಡ 80ರಷ್ಟು ಸರ್ಕಾರಿ ಆಸ್ಪತ್ರೆಗಳು ಅಗ್ನಿ ಸುರಕ್ಷತಾ ಪ್ರಮಾಣಪತ್ರ ಹೊಂದಿಲ್ಲದಿರುವುದು ಈಚೆಗೆ ನಡೆದ ಸಮೀಕ್ಷೆಯೊಂದರಿಂದ ತಿಳಿದುಬಂದಿದೆ. ಇದೇ ಪರಿಸ್ಥಿತಿ ಇತರೆಡೆಗಳಲ್ಲಿಯೂ ಇದ್ದಿರಬಹುದು. ಅಗ್ನಿಶಾಮಕ ಠಾಣೆಗಳ ಸಂಖ್ಯೆ ಸೇರಿದಂತೆ ಅಗ್ನಿಶಾಮಕ ವ್ಯವಸ್ಥೆಯು ದೇಶದ ಜನಸಂಖ್ಯೆಯ ಅಗತ್ಯಕ್ಕೆ ಅನುಗುಣವಾಗಿ ಇಲ್ಲ. ದೊಡ್ಡ ಪ್ರಮಾಣದ ಅಗ್ನಿ ದುರಂತ ಸಂಭವಿಸಿದಾಗ, ದುರಂತಗಳನ್ನು ಎದುರಿಸಲು ಅಗತ್ಯವಿರುವ ಸಿದ್ಧತೆಗಳು ಯಾವುವು ಎಂಬುದು ಚರ್ಚೆಗೆ ಬರುತ್ತದೆ. ಆದರೆ, ಆ ಚರ್ಚೆಗಳು ಕ್ರಿಯಾರೂಪದಲ್ಲಿ, ನಿರ್ದಿಷ್ಟ ಕ್ರಮಗಳ ರೂಪದಲ್ಲಿ ಮಾತ್ರ ಕಾಣಿಸಿಕೊಳ್ಳುವುದಿಲ್ಲ. ಇಂತಹ ದುರಂತಗಳಿಗೆ ಕಾರಣರಾದ ವ್ಯಕ್ತಿಗಳು ಸಾಮಾನ್ಯವಾಗಿ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳುತ್ತಾರೆ ಎಂಬುದು ವಿಷಾದಕರ.

ದಿನದ ಟ್ವೀಟ್

ಸಮತೋಲನದಿಂದ ಅರ್ಥಪೂರ್ಣ ಬದುಕು

ವೃತ್ತಿ–ವೈಯಕ್ತಿಕ ಬದುಕಿನ ನಡುವಿನ ಸಮತೋಲನದ ಬಗ್ಗೆ ನಾರಾಯಣಮೂರ್ತಿ ಅವರ ನಿಲುವಿಗೆ ಸಹಮತ ಇಲ್ಲ. ಜೀವನದ ಭಿತ್ತಿಯು ವೃತ್ತಿಯ ಆಚೆಗೂ ಇದೆ. ಅದು ಕುಟುಂಬ, ವಿರಾಮ, ಅಧ್ಯಾತ್ಮ, ಹವ್ಯಾಸಗಳು ಹಾಗೂ ನಮ್ಮನ್ನು ಬೆಳೆಸುವ ಇತರ ಅಸಂಖ್ಯ ಆಯಾಮಗಳನ್ನು ಹೊಂದಿದೆ. ಸಮತೋಲನವನ್ನು ಸಾಧಿಸುವುದರಿಂದ ಇನ್ನಷ್ಟು ಶ್ರೀಮಂತವಾಗಿ, ಅರ್ಥಪೂರ್ಣವಾಗಿ ಬದುಕು ಬೆಳೆಯುತ್ತದೆ.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ

‘ತೈವಾನ್ ವಿಚಾರ, ಪ್ರಜಾತಂತ್ರ ಮತ್ತು ಮಾನವ ಹಕ್ಕುಗಳು, ಚೀನಾದ ವ್ಯವಸ್ಥೆ, ಚೀನಾದ ಅಭಿವೃದ್ಧಿಯ ಹಕ್ಕುಗಳ ವಿಚಾರದಲ್ಲಿ ಯಾರೂ ನಮಗೆ ಎದುರಾಡಬಾರದು’ ಎಂದು ಲಿಮಾದಲ್ಲಿ ಷಿ ಅವರು ಬೈಡನ್ ಅವರಿಗೆ ಎಚ್ಚರಿಕೆ ನೀಡಿದ್ದಾರೆ. ವಿಧೇಯ ಬೈಡನ್ ತಂಡವು ಜಗತ್ತಿನ ಅತಿದೊಡ್ಡ ಪ್ರಜಾತಂತ್ರ ವ್ಯವಸ್ಥೆಯಾಗಿರುವ ಭಾರತದ ವಿರುದ್ಧವಾಗಿ ಪ್ರಜಾತಂತ್ರದ ವಿಷಯ ಪ್ರಸ್ತಾಪಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಬ್ರಹ್ಮ ಚೆಲಾನಿ, ಲೇಖಕ

25 ವರ್ಷಗಳ ಹಿಂದೆ

ಗುರುವಾರ, 18-11-1999

• ಚೆನ್ನೈ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ದಾಂದಲೆ: 11 ಸಾವು

ಚೆನ್ನೈ, ನ. 17– ಚೆನ್ನೈ ನಗರದ ಕೇಂದ್ರ ಕಾರಾಗೃಹದಲ್ಲಿ ಇಂದು ನಡೆದ ಭೀಕರ ಹಿಂಸಾಕೃತ್ಯ ಹಾಗೂ ಅದನ್ನು ಹತ್ತಿಕ್ಕಲು ಪೊಲೀಸರು ನಡೆಸಿದ ಗೋಲಿಬಾರ್‌ಗೆ 10 ಮಂದಿ ಕೈದಿಗಳು ಹಾಗೂ ಒಬ್ಬ ಜೈಲು ಅಧಿಕಾರಿ ಬಲಿಯಾಗಿದ್ದಾರೆ. ಉದ್ರಿಕ್ತ ಕೈದಿಗಳು ಆ ಅಧಿಕಾರಿಯನ್ನು ಜೀವಂತವಾಗಿ ಸುಟ್ಟಿದ್ದಾರೆ. ಘಟನೆಯಲ್ಲಿ 150ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಪೊಲೀಸರ ವಶದಲ್ಲಿದ್ದ ವಿಚಾರಣಾಧೀನ ಕೈದಿಯೊಬ್ಬ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟ ಹಿನ್ನೆಲೆಯಲ್ಲಿ ಹಿಂಸೆ ಭುಗಿಲೆದ್ದಿತು. ಜೈಲಿನಲ್ಲಿ ಕೈದಿಗಳು ನಡೆಸಿದ ದಾಂದಲೆಯನ್ನು ಸುಮಾರು ಮೂರೂವರೆ ಗಂಟೆಗಳವರೆಗೆ ರಹಸ್ಯವಾಗಿಡಲು ಸರ್ಕಾರ ಪ್ರಯತ್ನಿಸಿತು.

• ಬಸ್ ಪ್ರಯಾಣ ದರ ಇಳಿಕೆ ಇಲ್ಲ: ಸ್ಪಷ್ಟನೆ

ಬೆಂಗಳೂರು, ನ. 17– ಡೀಸೆಲ್ ಬೆಲೆ ಏರಿಕೆ ಹಿನ್ನೆಲೆಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಏರಿಸಿರುವ ಬಸ್ ಪ್ರಯಾಣ ದರವನ್ನು ಕಡಿಮೆ ಮಾಡುವ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಸಾರಿಗೆ ಸಚಿವ ಸಗೀರ್ ಅಹಮದ್ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಪ್ರತಿ ಕಿ.ಮೀ.ಗೆ ಒಂದು ಪೈಸೆಯಷ್ಟು ದರ ಕಡಿಮೆ ಮಾಡುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ ಎಂದು ತಾವು ವಿಧಾನಸಭೆ ಅಧಿವೇಶನದಲ್ಲಿ ಹೇಳಿದ್ದರೂ ದರ ಇಳಿಸುವ ಆಲೋಚನೆ ಸದ್ಯಕ್ಕೆ ಸರ್ಕಾರದ ಮುಂದಿಲ್ಲ ಎಂದು ಅವರು ಇಂದು ವರದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 18-11-1974

• ಬಿಹಾರದಲ್ಲಿ ವಿರೋಧಿ ಶಾಸಕರು ಕಾಂಗ್ರೆಸ್ಸಿಗೆ

ಪಟ್ನಾ, ನ. 17– ಬಿಹಾರದ 11 ಮಂದಿ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು (12 ಮಂದಿಯೂ ಸಂಸ್ಥಾ ಕಾಂಗ್ರೆಸ್ಸಿಗರು) ಇಂದು ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಬರೂವ ಅವರು ತಮ್ಮ ಪಕ್ಷಕ್ಕೆ ಸೇರಿಸಿಕೊಂಡರು.

ಅಲ್ಲದೆ ಜನಸಂಘದ ಮೂವರು ವಿಧಾನಸಭಾ ಸದಸ್ಯರೂ ಕಾಂಗ್ರೆಸ್ ಸೇರಲು ಬಯಸಿ ಅನುಮತಿ ಕೋರಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರಿಗೆ ಪ್ರತ್ಯೇಕವಾಗಿ ಪತ್ರ ಬರೆದಿದ್ದಾರೆ.

• ರಾಜ್ಯದಲ್ಲಿ ಮತ್ತಷ್ಟು ಬಸ್ ಮಾರ್ಗಗಳ ಸ್ವಾಧೀನ ಇಲ್ಲ

ಕಲ್ಬುರ್ಗಿ, ನ. 17– ಬಸ್ ಮಾರ್ಗಗಳನ್ನು ಹೊಸದಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ಯೋಜನೆಯನ್ನು ಸರ್ಕಾರ ಕೈಬಿಟ್ಟಿದೆಯೆಂದು ಸಾರಿಗೆ ಸಚಿವ ಮಹಮದ್ ಅಲಿ ಅವರು ಇಂದು ಇಲ್ಲಿ ತಿಳಿಸಿದರು.

ಈಗಾಗಲೇ ಸ್ವಾಧೀನ ಮಾಡಿಕೊಂಡಿರುವ ಮಾರ್ಗಗಳಲ್ಲಿ ಉತ್ತಮ ಪ್ರಯಾಣದ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ತೀರ್ಮಾನಿಸಿದೆಯೆಂದು ಅವರು ಹೇಳಿದರು. ಕಾಂಟ್ರ್ಯಾಕ್ಟ್ ಬಸ್ಸುಗಳನ್ನು ಸರ್ಕಾರವೇ ವಹಿಸಿಕೊಳ್ಳುವ ಬಗ್ಗೆ ಮುಖ್ಯಮಂತ್ರಿಗಳು ಇನ್ನೂ ತೀರ್ಮಾನ ಕೈಗೊಳ್ಳಬೇಕಾಗಿದೆಯೆಂದು ಸಚಿವರು ತಿಳಿಸಿದರು.

ಅಣ್ವಸ್ತ್ರ ನಿಷೇಧ ಒಪ್ಪಂದದಂತೆ ಈ ತಂತ್ರಜ್ಞಾನವನ್ನು ಜಾಗತಿಕವಾಗಿ ನಿಯಂತ್ರಿಸಬಹುದೇ?

ಎ.ಐ ಮತ್ತು ಜಾಗತಿಕ ರಾಜಕಾರಣ

ವಿಶ್ಲೇಷಣೆ

ವಸಂತ ಶೆಟ್ಟಿ

ಎರಡನೆಯ ವಿಶ್ವಯುದ್ಧದಲ್ಲಿ ಅಮೆರಿಕವು ಜಪಾನಿನ ಮೇಲೆ ಅಣುಬಾಂಬ್ ಪ್ರಯೋಗಿಸಿತು. ಕೆಲವೇ ನಿಮಿಷಗಳಲ್ಲಿ ಲಕ್ಷಗಟ್ಟಲೆ ಜಪಾನೀಯರು ಇನ್ನಿಲ್ಲವಾದರು, ಜಪಾನ್ ಸೋಲೊಪ್ಪಿ ಯುದ್ಧವು ಕೊನೆಗೊಂಡಿತು. ಅಮೆರಿಕವು ಜಗತ್ತಿನ ದೊಡ್ಡಣ್ಣನಂತೆ ಬಿಂಬಿಸಿಕೊಳ್ಳುವಲ್ಲಿ ಆ ಅಣುಬಾಂಬ್ ಕೂಡ ಕೊಡುಗೆ ನೀಡಿತು. ಹೀಗೆ, ಒಂದು ತಂತ್ರಜ್ಞಾನವು ಜಗತ್ತಿನ ರಾಜಕಾರಣದ 100 ವರ್ಷಗಳ ದಿಕ್ಕನ್ನು ಪ್ರಭಾವಿಸಿದ್ದನ್ನು ನಾವು ಕಂಡೆವು.

ಈಗ ಆರ್ಟಿಫಿಶಿಯಲ್ ಇಂಟೆಲಿಜನ್ಸ್ (ಎ.ಐ) ಅನ್ನುವ, ಕೃತಕವಾಗಿ ಕಟ್ಟಲಾದ ಜಾಣ್ಮೆಯ ತಂತ್ರಜ್ಞಾನ ಮತ್ತು ಅದು ದಿನದಿಂದ ದಿನಕ್ಕೆ ಪಡೆದುಕೊಳ್ಳುತ್ತಿರುವ ಶಕ್ತಿಯನ್ನು ಗಮನಿಸಿದಾಗ, ಈ ಶತಮಾನದ ಜಾಗತಿಕ ರಾಜಕಾರಣದ ಸ್ವರೂಪವನ್ನು ಪ್ರಭಾವಿಸುವ ಅತಿ ದೊಡ್ಡ ಶಕ್ತಿಯಾಗಿ ಅದು ಹೊರಹೊಮ್ಮಲಿದೆ ಅನ್ನುವ ಬಗ್ಗೆ ಈಗ ಚಿಂತಕರಲ್ಲಿ, ನೀತಿ ನಿರೂಪಕರಲ್ಲಿ ಒಮ್ಮತ ಮೂಡುತ್ತಿದೆ.

ಎಲೆಕ್ಟ್ರಾನಿಕ್ ಯುಗದ ಆರಂಭಕ್ಕೆ ಮುನ್ನುಡಿ ಬರೆದಿದ್ದು ಟ್ರಾನ್ಸಿಸ್ಟರುಗಳು. ಸಣ್ಣ ಐ.ಸಿ ಚಿಪ್ ಒಂದರಲ್ಲಿ ಕೂರಿಸಬಹುದಾದ ಟ್ರಾನ್ಸಿಸ್ಟರುಗಳ ಸಂಖ್ಯೆ ಪ್ರತಿ 2 ವರ್ಷಕ್ಕೊಮ್ಮೆ ದುಪ್ಪಟ್ಟಾಗುತ್ತದೆ ಎಂದು ಇಂಟೆಲ್ ಸಂಸ್ಥೆಗೆ ಸೇರಿದವರಾಗಿದ್ದ ಮೂರ್ 1965ರಲ್ಲಿ ಭವಿಷ್ಯ ನುಡಿದರು. ಟ್ರಾನ್ಸಿಸ್ಟರುಗಳ ಸಂಖ್ಯೆ ಈ ಪ್ರಮಾಣದಲ್ಲಿ ಹೆಚ್ಚಿದಂತೆ ಕಂಪ್ಯೂಟರುಗಳ ವಿಶ್ಲೇಷಣೆಯ ಶಕ್ತಿಯೂ ವರ್ಷದಿಂದ ವರ್ಷಕ್ಕೆ ಹೆಚ್ಚಿತು. ಕಂಪ್ಯೂಟರ್ ಬಲದ ಮೇಲೆ ನಡೆಯುವ ಇಂದಿನ ಆಧುನಿಕ ಪ್ರಪಂಚ ಸಾಧ್ಯವಾಗಿದ್ದು ಸೆಮಿಕಂಡಕ್ಟರ್ ವಲಯದಲ್ಲಿ ಸಾಧಿಸಿದ ಪ್ರಗತಿಯಿಂದ. ಸೆಮಿಕಂಡಕ್ಟರ್ ವಲಯದಲ್ಲಿ ಕಂಪ್ಯೂಟರುಗಳು ಭವಿಷ್ಯದಲ್ಲಿ ಪಡೆಯಬಹುದಾದ ವಿಶ್ಲೇಷಣಾ ಶಕ್ತಿಯ ಬಗ್ಗೆ ದಾರಿದೀಪದಂತೆ ಕೆಲಸ ಮಾಡಿದ್ದು ಮೂರ್ ಅವರ ಇದೇ ನಿಯಮ.

ಕಂಪ್ಯೂಟರಿನ ವಿಶ್ಲೇಷಣೆಯ ಶಕ್ತಿಯಲ್ಲಿ ವರ್ಷದಿಂದ ವರ್ಷಕ್ಕೆ ಸಾಧ್ಯವಾದ ದಾಪುಗಾಲಿನ ಪ್ರಗತಿಯು ನಮ್ಮೆದುರು ತಂದಿರುವ ಹೊಸ ಸಾಧ್ಯತೆಯೇ ಎ.ಐ ತಂತ್ರಜ್ಞಾನ ಎನ್ನಬಹುದು. ಇದು ಎಣಿಕೆ ಇಲ್ಲದಷ್ಟು ಹೊಸ ಸಾಧ್ಯತೆಗಳನ್ನು, ಹೊಸ ಬಿಕ್ಕಟ್ಟುಗಳನ್ನು ಮನುಕುಲದ ಮುಂದೆ ಒಮ್ಮೆಲೇ ತಂದು ನಿಲ್ಲಿಸುತ್ತಿದೆ.

30 ವರ್ಷಗಳಲ್ಲಿ ಬದುಕಿನ ಎಲ್ಲ ಅಂಗಗಳು ಕಂಪ್ಯೂಟರ್ ಬಳಕೆಯ ವ್ಯಾಪ್ತಿಗೆ ಸೇರಿದಂತೆ, ಮನುಕುಲ ಕಂಡುಕೊಂಡಿರುವ ಜ್ಞಾನದ ಎಲ್ಲ ಸಾಧ್ಯತೆಗಳು ಡಿಜಿಟಲ್ ರೂಪದಲ್ಲಿ ದಾಖಲಾಗುತ್ತ ಬಂದಿವೆ. ಇಂತಹ ಅಗಾಧ ಮಾಹಿತಿಯ ಕಣಜವನ್ನು ಕಂಪ್ಯೂಟರ್ ವ್ಯವಸ್ಥೆಯೊಂದಕ್ಕೆ ತರಬೇತಿ ನೀಡಲು ಬಳಸಿದರೆ, ಆಗ ಕೋಟಿಗಟ್ಟಲೆ ಜನರ ನಡೆ-ನುಡಿ, ಜ್ಞಾನದ ತಿರುಳನ್ನೆಲ್ಲ ಅರಗಿಸಿಕೊಂಡಿರುವ ಜಾಣ ಕಂಪ್ಯೂಟರ್ ಒಂದು ನಮ್ಮೆದುರು ನಿಲ್ಲುತ್ತದೆ. ಇದನ್ನೇ ಎ.ಐ ಅನ್ನಬಹುದು.

ಎರಡು ವರ್ಷದ ಹಿಂದೆ ‘ಚಾಟ್ ಜಿಪಿಟಿ’ ಅನ್ನುವ ಹೆಸರಿನಲ್ಲಿ ಓಪನ್ ಎ.ಐ ಸಂಸ್ಥೆ ಇಂತಹದ್ದೊಂದು ಎ.ಐ ಮಾದರಿಯನ್ನು ಜನಬಳಕೆಗೆ ತಂದಾಗ, ಹಲವು ಕ್ಷೇತ್ರಗಳಲ್ಲಿ ಅದಕ್ಕಿದ್ದ ಶಕ್ತಿಯನ್ನು ಕಂಡು ಹಲವರು ನಿಬ್ಬೆರಗಾದರೆ, ಇನ್ನು ಹಲವು ಕ್ಷೇತ್ರಗಳಲ್ಲಿ ಅದಕ್ಕಿದ್ದ ಕೊರತೆಯನ್ನು ಕಂಡು ಹಲವರು ಆಡಿಕೊಂಡರು. ಆದರೆ ಅಲ್ಲಿಂದ ಎರಡೇ ವರ್ಷಗಳಲ್ಲಿ ಇಡೀ ಎ.ಐ ವಲಯದಲ್ಲಿನ ಕೆಲಸದ ವೇಗ ಮತ್ತು ಹೊರಬರುತ್ತಿರುವ ತಾಂತ್ರಿಕ ಸಾಧ್ಯತೆಗಳನ್ನು ಗಮನಿಸಿದಾಗ, 18ನೇ ಶತಮಾನದಲ್ಲಿ ಔದ್ಯಮಿಕ ಕ್ರಾಂತಿ ಹೇಗೆ ಜಗತ್ತನ್ನು ಬದಲಾಯಿಸಿತೋ ಹಾಗೆಯೇ, ಇನ್ನೂ ಕಡಿಮೆ ಅವಧಿಯಲ್ಲಿ ಜಗತ್ತನ್ನು ಬದಲಾಯಿಸುವ ಶಕ್ತಿ ಈ ತಂತ್ರಜ್ಞಾನಕ್ಕೆ ಇರಲಿದೆ ಅನ್ನುವುದು ಈಗ ಎಲ್ಲರಿಗೂ ಮನವರಿಕೆಯಾಗುತ್ತಿದೆ.

ಇಂದು ಯಾವೆಲ್ಲ ಬಗೆಯ ಕೆಲಸಗಳು ಹೆಚ್ಚು ಬುದ್ಧಿಶಕ್ತಿಯನ್ನು ಬೇಡುವುದಿಲ್ಲವೋ ಅವುಗಳನ್ನು ಎ.ಐ ತಂತ್ರಜ್ಞಾನ ಸುಲಭದಲ್ಲಿ ಮಾಡಬಲ್ಲದು. ಹಲವು ಕಾರ್ಖಾನೆಗಳಲ್ಲಿನ ಕೆಲಸ, ಗ್ರಾಹಕ ಸೇವೆ, ಡೇಟಾ ಎಂಟ್ರಿ, ಕಲೆ, ಬರವಣಿಗೆ, ಕಾನೂನು ಸೇವೆ, ಆರೋಗ್ಯ ಸೇವೆಯಂತಹ ಕ್ಷೇತ್ರಗಳಲ್ಲಿನ ಕೆಲ ಬಗೆಯ ಕೆಲಸಗಳನ್ನು ಎ.ಐ ತಾನೇ ನಿರ್ವಹಿಸಲಿದೆ. ಆದರೆ ಈ ಎಲ್ಲ ಕ್ಷೇತ್ರಗಳಲ್ಲೂ ಹೊಸ ಮಾದರಿಯ ಕೆಲಸಗಳನ್ನೂ ಎ.ಐ ಸೃಷ್ಟಿಸಲಿದೆ. ದೊಡ್ಡ ತಂತ್ರಜ್ಞಾನ ಸಂಸ್ಥೆಗಳು, ಸಾವಿರಾರು ಸ್ಟಾರ್ಟ್‌ಅಪ್‌ಗಳು ಎ.ಐ ಬಳಸಿ ಹಲವು ಕ್ಷೇತ್ರಗಳಲ್ಲಿನ ಗಂಭೀರವಾದ ಸಮಸ್ಯೆಗಳಿಗೆ ಪರಿಹಾರಗಳನ್ನು ರೂಪಿಸುವತ್ತ ತೊಡಗಿಕೊಂಡಿವೆ.

20 ವರ್ಷಗಳ ಹಿಂದೆ ಜಗತ್ತಿನಲ್ಲಿ ಇಂದಿರುವ 50 ಪ್ರತಿಶತಕ್ಕೂ ಹೆಚ್ಚಿನ ಬಗೆಯ ಕೆಲಸಗಳು ಇರಲಿಲ್ಲ. ತಂತ್ರಜ್ಞಾನವು ಆ ಕೆಲಸಗಳನ್ನು ಸೃಷ್ಟಿಸಿದ ರೀತಿಯಲ್ಲೇ ಎ.ಐ ಕೂಡ ಹಲವಾರು ಬಗೆಯ ಹೊಸ ಉದ್ಯೋಗಗಳನ್ನು ಹುಟ್ಟುಹಾಕಲಿದೆ. ಇದಕ್ಕೆ ಸಜ್ಜಾಗುವಂತೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲೂ ಬದಲಾವಣೆ ಆಗಬೇಕಿದೆ. ಬಾಯಿಪಾಠ ಕೇಂದ್ರಿತ ಇಂದಿನ ಕಲಿಕಾ ವ್ಯವಸ್ಥೆಯು ಎ.ಐ ಬಳಕೆಯ ಕಾಲಕ್ಕೆ ನಮ್ಮ ಮಕ್ಕಳನ್ನು ಸಜ್ಜಾಗಿಸುವುದಿಲ್ಲ. ಎ.ಐ ಕಟ್ಟುವ ಹೊಸ ಆರ್ಥಿಕತೆಗೆ ಸಜ್ಜಾಗುವುದು ಈ ಚರ್ಚೆಯ ಒಂದು ಆಯಾಮ.

ಇನ್ನೊಂದು ಆಯಾಮವೆಂದರೆ, ಎ.ಐ ತಂತ್ರಜ್ಞಾನವು ಮಿಲಿಟರಿ ಸಾಮರ್ಥ್ಯ, ಗೂಢಚಾರಿಕೆ, ಮಾಹಿತಿ ಯುದ್ಧ, ಕಣ್ಗಾವಲು ತರಹದ ಭದ್ರತೆಯ ವಿಚಾರದಲ್ಲಿ ಪಡೆಯುತ್ತಿರುವ ಶಕ್ತಿಯ ಕುರಿತಾದದ್ದು. ಇದು ಇಂದು ಹಲವು ದೇಶಗಳ ನಿದ್ದೆಗೆಡಿಸುತ್ತಿದೆ. ಉದಾಹರಣೆಗೆ, ಉಕ್ರೇನಿನಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಬಾಂಬು ಹೊತ್ತ ಡ್ರೋನ್‌ಗಳು ಎ.ಐ ತಂತ್ರಜ್ಞಾನ ಬಳಸಿ, ಯಾರ ನೆರವೂ ಇಲ್ಲದೆ ಶತ್ರುವಿನ ಮೇಲೆ ದಾಳಿ ನಡೆಸಿ ಸ್ವಸ್ಥಾನಕ್ಕೆ ಮರಳುತ್ತಿವೆ!

ಇನ್ನೊಂದೆಡೆ, ಅಮೆರಿಕದ ಚುನಾವಣೆಯಲ್ಲಿ ಎ.ಐ ತಂತ್ರಜ್ಞಾನ ಬಳಸಿ ಸೃಷ್ಟಿಸಲಾದ ಸುಳ್ಳು ಸುದ್ದಿಗಳು ಹಿಂದಿನ ನೂರು ವರ್ಷಗಳಲ್ಲೇ ಅತ್ಯಂತ ಧ್ರುವೀಕೃತವಾದ ಚುನಾವಣೆಗೆ ಕೊಡುಗೆ ನೀಡಿದವು. ಇವು, ಪ್ರಜಾಪ್ರಭುತ್ವ ದೇಶಗಳ ಚುನಾವಣಾ ವ್ಯವಸ್ಥೆಯನ್ನು ಹಾಳುಗೆಡಹುವ, ಸಾಂವಿಧಾನಿಕ ಸಂಸ್ಥೆಗಳ ಬಗ್ಗೆ ಜನರಲ್ಲಿ ಅಪನಂಬಿಕೆ ಮೂಡಿಸುವ ಎಲ್ಲ ಶಕ್ತಿಯನ್ನೂ ಹೊಂದಿವೆ. ಶತ್ರುದೇಶವೊಂದರ ಮೇಲೆ ದೊಡ್ಡ ಪ್ರಮಾಣದ ಮಾಹಿತಿ ಯುದ್ಧ ಕೈಗೊಳ್ಳಲು ಆ ದೇಶದ ಜನರ ನಡೆ-ನುಡಿ ಅರಿಯುವುದು ಮುಖ್ಯವಾಗುತ್ತದೆ ಮತ್ತು ಅಂತಹ ಮಾಹಿತಿಯನ್ನೇ ಬಸಿದು ಕಟ್ಟಲಾಗಿರುವ ಎ.ಐ ತಂತ್ರಜ್ಞಾನಕ್ಕೆ ಅದು ಚಿಟಿಕೆ ಹೊಡೆದಷ್ಟು ಸಲೀಸು. ಈ ಕಾರಣದಿಂದಲೇ ಎ.ಐ ಇಂದು ಅಮೆರಿಕ ಮತ್ತು ಚೀನಾದ ನಡುವಿನ ಹೊಸ ರಣಾಂಗಣವಾಗುತ್ತಿದೆ.

ಎ.ಐ ಕೆಲಸ ಮಾಡಲು ಬೇಕಿರುವ ಅಗಾಧ ಮಾಹಿತಿಯನ್ನು ವಿಶ್ಲೇಷಿಸುವ ಸಾಮರ್ಥ್ಯವುಳ್ಳ ಐ.ಸಿ ಚಿಪ್ ತಯಾರಿಕೆಯ ಎಲ್ಲ ಹಂತಗಳನ್ನು ನಿಯಂತ್ರಿಸಲು ಅಮೆರಿಕ ಮತ್ತು ಚೀನಾ ನಡುವೆ ಇಂದು ತೀವ್ರ ಪೈಪೋಟಿಯಿದೆ. ಇಂತಹ ಚಿಪ್ ತಯಾರಿಕೆಯ ಒಂದು ಮುಖ್ಯ ನೆಲೆಯಾದ ತೈವಾನ್ ಅನ್ನು ವಶಕ್ಕೆ ಪಡೆಯಬೇಕು ಅನ್ನುವ ಚೀನಾದ ಹಟದ ಹಿಂದಿರುವುದು ಇದೇ ಪೈಪೋಟಿ.

ಜಾಗತಿಕವಾಗಿ ಅಣ್ವಸ್ತ್ರ ನಿಷೇಧ ಒಪ್ಪಂದಕ್ಕೆ ಬಹುತೇಕ ದೇಶಗಳು ಬಂದ ರೀತಿಯಲ್ಲೇ ಎ.ಐ ತಂತ್ರಜ್ಞಾನವನ್ನು ನಿಯಂತ್ರಣಕ್ಕೆ ಒಳಪಡಿಸಬೇಕು ಅನ್ನುವ ಮಾತುಗಳು ಇವೆ. ಆದರೆ ಈ ತಂತ್ರಜ್ಞಾನದ ಬೆಳವಣಿಗೆ ಅತ್ಯಂತ ವಿಕೇಂದ್ರೀಕೃತವಾಗಿ ನಡೆಯುತ್ತಿರುವುದರಿಂದ ಆ ರೀತಿಯ ನಿಯಂತ್ರಣ ಸಾಧ್ಯವಿಲ್ಲ. ಕಂಪ್ಯೂಟಿಂಗ್ ಶಕ್ತಿ ಹೆಚ್ಚಿದಂತೆ, ಎ.ಐಗೆ ತರಬೇತಿ ನೀಡುವ ಮಾಹಿತಿಯ ಮಾದರಿಗಳು ಹೆಚ್ಚೆಚ್ಚು ಗುಣಮಟ್ಟ ಹೊಂದುತ್ತಿದ್ದಂತೆ, ಎ.ಐ ಬಳಸಿ ಮನುಕುಲದ ಪರವಾದ ಹತ್ತಾರು ಹೊಸ ಆವಿಷ್ಕಾರಗಳು ಹೊರಹೊಮ್ಮಿ, ಈ ಶತಮಾನದ ಹಲವು ತೊಂದರೆಗಳನ್ನು ಬಗೆಹರಿಸಲು ಸಾಧ್ಯವಾಗಬಹುದು. ಈ ತಂತ್ರಜ್ಞಾನದ ದುರ್ಬಳಕೆ ಮಾಡಿಕೊಂಡು ಮಾಹಿತಿ ಯುದ್ಧ ನಡೆಸುವ, ದೇಶಗಳ ರಕ್ಷಣೆ ಹಾಗೂ ಆರೋಗ್ಯ ವ್ಯವಸ್ಥೆಯನ್ನು ಹಾಳುಗೆಡವಿ ಹೊಸ ಬಿಕ್ಕಟ್ಟು ಸೃಷ್ಟಿಸುವ, ಈ ತಂತ್ರಜ್ಞಾನದ ಮೇಲೆ ಹಿಡಿತ ಹೊಂದಿದ ದೇಶಗಳು ಉಳಿದ ದೇಶಗಳ ಮೇಲೆ ದಬ್ಬಾಳಿಕೆ ಮಾಡುವ ಬೆಳವಣಿಗೆಗಳೂ ನಡೆಯಬಹುದು. ಇದನ್ನು ಸರಿಯಾದ ದಿಕ್ಕಿನಲ್ಲಿ ಬಳಸಲಾಗುವ ತಂತ್ರಜ್ಞಾನವನ್ನಾಗಿಸಲು ಬೇಕಿರುವ ಜಾಗತಿಕ ಸಹಕಾರ ರೂಪಿಸುವ ನಾಯಕತ್ವವನ್ನು ಅಮೆರಿಕದ ಹೊಸ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೊಡುವರೇ?



ಚುರುಮುರಿ

ಕೋಟಿ ಕಿಮ್ಮತ್ತಿನ ಕೋಣ

• ಸುಮಂಗಲಾ

ಬೆಕ್ಕಣ್ಣ ಮನೆ ತುಂಬ ಏನೇನೋ ಸಾಮಾನು ಹರವಿಟ್ಟಿತ್ತು. ‘ಕೋಣನಂಗೆ ಬೆಳದೀ, ಬುದ್ಧಿ ಇಲ್ಲಾ? ಎಲ್ಲ ಜೋಡಿಸಿಡು’ ಎಂದು ಬೈದೆ.

‘ಮಾತು ಮಾತಿಗೆ ನನಗೆ ಕೋಣ ಅನ್ನಬ್ಯಾಡ. ಕೋಣಂಗೂ ಕೋಟಿ ಕಿಮ್ಮತ್ತಿರತೈತಿ ತಿಳಕೋ’ ಎಂದು ಮೂತಿಗೆ ತಿವಿಯಿತು.

‘ಹರಿಯಾಣದಲ್ಲಿ ಕೋಟಿ ಕಿಮ್ಮತ್ತಿನ ಕೋಣ ಐತಂತೆ. ಅದೂ ಒಂದಲ್ಲ, ಎರಡಲ್ಲ, ಬರೋಬ್ಬರಿ 23 ಕೋಟಿ ರೂಪಾಯಿ ಕಿಮ್ಮತ್ತಂತೆ’ ಬೆಕ್ಕಣ್ಣ ನಕ್ಕಿತು.

‘ಎಲಾ ಇವ್ನ... ಅದೇನು ಬಂಗಾರದ ಕೋಣ ಏನಲೇ?’ ನಾನು ಅಚ್ಚರಿಗೊಂಡೆ.

‘ಬಂಗಾರದ್ದಲ್ಲ, ಅದಕ್ಕೂ ಮಿಗಿಲಾದ ಕೋಣ’ ಎಂದು, ಕಪ್ಪಗೆ ಮಿರಮಿರನೆ ಮಿಂಚುತ್ತಿದ್ದ ‘ಅನ್ಮೋಲ್’ ಹೆಸರಿನ ಕೋಣದ ಫೋಟೊ ತೋರಿಸಿತು.

‘ದಿನಾ ಕಾಲು ಕೆಜಿ ಬಾದಾಮಿ, ಬೇಕಾದಷ್ಟು ಬಾಳೆಹಣ್ಣು, ದಾಳಿಂಬೆ, ಮೊಟ್ಟೆ ಅಷ್ಟೇ ಅಲ್ಲದೆ ಲೀಟರುಗಟ್ಟಲೆ ಹಾಲು ಕೊಡ್ತಾರಂತೆ. ಮತ್ತೆ ದಿನಕ್ಕೆರಡು ಸಲ ಸ್ನಾನನೂ ಮಾಡಿಸ್ತಾರಂತೆ’ ಬೆಕ್ಕಣ್ಣ ಕೋಣನ ವೈಭೋಗವನ್ನು ಕಣ್ಣಾರೆ ಕಂಡಂತೆ ವರ್ಣಿಸಿತು.

‘ಕೋಣ ಭಾಳ ಪುಣ್ಯ ಮಾಡ್ಯೈತಿ ಬಿಡು. ನಮ್ಮ ದೇಶದಾಗೆ ಎಷ್ಟೋ ಮಕ್ಕಳಿಗೆ ಬಾದಾಮಿಗೀದಾಮಿ ದೂರವುಳೀತು, ಒಂದು ಲೋಟ ಹಾಲೂ ಸಿಗಂಗಿಲ್ಲ’.

‘ಇಂಥಾ ಕೋಣ ಇರೋ ನಾನೇ ಪುಣ್ಯವಂತ ಅಂತ ಅದರ ಮಾಲೀಕ ಹೇಳ್ತಾನೆ. ವಾರಕ್ಕೆರಡು ಸಲ ಅದು ವೀರ್ಯದಾನ ಮಾಡತೈತಂತ. ತಿಂಗಳಿಗೆ ನಾಕೈದು ಲಕ್ಷ ದುಡಿತೈತೆ’.

‘ಪಾಪ... ಬೇರೆ ಕೋಣಗಳ ಹಂಗೆ ಸಹಜವಾದ ಜೀವನಾನೇ ಇಲ್ಲವಲ್ಲ ಅದಕ್ಕೆ! ಹೊರಗೆ ಕಾಲಾಡಿಸಿಕೊಂಡು ಬೇಕಾದಂತೆ ಹುಲ್ಲು ತಿನ್ನೋ ಹಂಗಿಲ್ಲ, ಎಮ್ಮೆಗಳ ಬೆನ್ನತ್ತೋ ಹಂಗಿಲ್ಲ, ಕೆಸರುಗುಂಡಿಯಲ್ಲಿ ಬಿದ್ದು ಹೊರಳಾಡಂಗಿಲ್ಲ’ ನಾನು ಮರುಕದಿಂದ ಹೇಳಿದೆ.

‘ಮನುಷ್ಯರು ನಿಮ್ಮ ಖಯಾಲಿಗಳಿಗಾಗಿ ಸಾಕೋ ಯಾವ ಪ್ರಾಣಿಗಳಿಗೆ ಸಹಜ ಜೀವನ ಅನ್ನೂದು ಇರತೈತಿ? ಈ ಭೂಮಂಡಲದೊಳಗೆ ನೀವೂ ಒಂದು ಪ್ರಾಣಿ ಅನ್ನೋದನ್ನೇ ಮರಿತೀರಿ’ ಬೆಕ್ಕಣ್ಣ ಗುರುಗುಟ್ಟಿತು.

ಸಂಗತ

ಹೊರಳು ಹಾದಿಯಲ್ಲಿ ಗ್ರಂಥಾಲಯ

ಮಕ್ಕಳಲ್ಲಿ ಪುಸ್ತಕಗಳ ಓದಿನ ಅಭಿರುಚಿಯನ್ನು ಮೂಡಿಸಲು ಶಾಲಾ ಹಂತದಲ್ಲಿಯೇ ಗ್ರಂಥಾಲಯಗಳನ್ನು ಸ್ಥಾಪಿಸುವ ಅಗತ್ಯವಿದೆ

• ರಾಜಕುಮಾರ ಕುಲಕರ್ಣಿ

ದೇಶದಲ್ಲಿ ಪ್ರತಿವರ್ಷ ನವೆಂಬರ್ 14ರಿಂದ 20ರವರೆಗೆ ‘ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ’ ಆಚರಿಸಲಾಗುತ್ತದೆ. ಈ ಆಚರಣೆಯ ಅಂಗವಾಗಿ ಗ್ರಂಥಾಲಯಗಳಲ್ಲಿ ಪುಸ್ತಕ ಪ್ರದರ್ಶನ, ವಿಶೇಷ ಉಪನ್ಯಾಸದಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಈ ಮೂಲಕ ಗ್ರಂಥಾಲಯ ಮತ್ತು ಪುಸ್ತಕಗಳ ಮಹತ್ವವನ್ನು ಓದುಗರಿಗೆ ತಿಳಿಸಿಕೊಡುವ ಪ್ರಯತ್ನ ಮಾಡಲಾಗುತ್ತದೆ.

ದುರದೃಷ್ಟವೆಂದರೆ, ಗ್ರಂಥಾಲಯ ಸಪ್ತಾಹದ ಆಚರಣೆಯು ಸಾರ್ವಜನಿಕ ಗ್ರಂಥಾಲಯಗಳಿಗೆ ಮಾತ್ರ ಸೀಮಿತವಾಗುತ್ತಿದೆ. ಶೈಕ್ಷಣಿಕ ಗ್ರಂಥಾಲಯಗಳೆಂದು ಕರೆಯಲಾಗುವ ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ಈ ಆಚರಣೆ ವಿರಳ. ಈ ಗ್ರಂಥಾಲಯಗಳನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ವ್ಯಾಪಕವಾಗಿ ಉಪಯೋಗಿಸುತ್ತಿದ್ದಾರೆ ಎಂದೇನಿಲ್ಲ. ಇಲ್ಲಿ ಓದುಗರ ಕೊರತೆ ಬಹುಮುಖ್ಯ ಸಮಸ್ಯೆ.

ಬಹುತೇಕ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಗ್ರಂಥಾಲಯಗಳೇ ಇಲ್ಲ. ಕಟ್ಟಡ, ಪೀಠೋಪಕರಣ ಮತ್ತು ಶಿಕ್ಷಕರ ಕೊರತೆಯೇ ಬಹಳಷ್ಟಿರುವಾಗ ಸರ್ಕಾರಿ ಶಾಲೆಗಳಲ್ಲಿ ಗ್ರಂಥಾಲಯ ಸೌಲಭ್ಯವನ್ನು ನಿರೀಕ್ಷಿಸುವುದು ದೂರದ ಮಾತು. ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿ ಗ್ರಂಥಾಲಯಗಳು ಇವೆಯಾದರೂ ಅವುಗಳನ್ನು ಕಾಟಾಚಾರಕ್ಕೆ ಎನ್ನುವಂತೆ ಸ್ಥಾಪಿಸಲಾಗಿದೆ. ಒಂದೆರಡು ಅಲ್ಮೆರಾಗಳಲ್ಲಿ ಪುಸ್ತಕಗಳನ್ನಿಟ್ಟು, ಅದನ್ನೇ ಗ್ರಂಥಾಲಯ ಎಂದು ತೋರಿಸಲಾಗುತ್ತದೆ.

ಮಕ್ಕಳಲ್ಲಿ ಪುಸ್ತಕಗಳ ಓದಿನ ಅಭಿರುಚಿಯನ್ನು ಮೂಡಿಸಲು ಶಾಲಾ ಹಂತದಲ್ಲೇ ಗ್ರಂಥಾಲಯಗಳನ್ನು ಸ್ಥಾಪಿಸುವುದು ಅಗತ್ಯ. ಪಠ್ಯಪುಸ್ತಕಗಳ ಜೊತೆಗೆ ‘ಮಕ್ಕಳ ಸಾಹಿತ್ಯ’ ಕೃತಿಗಳನ್ನು ಸಂಗ್ರಹಿಸಿಟ್ಟು ಓದಲು ಕೊಡಬೇಕು. ತರಗತಿಯ ವೇಳಾಪಟ್ಟಿಯಲ್ಲಿ ಗ್ರಂಥಾಲಯದ ಬಳಕೆಗೆ ಜಾಗವಿದೆಯಾದರೂ ಆ ಅವಧಿಯನ್ನು ಶಿಕ್ಷಕರು ಪಾಠ ಮಾಡಲು ಬಳಸಿಕೊಳ್ಳುವುದೇ ಹೆಚ್ಚು.

ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿಯ (ನ್ಯಾಕ್) ಪ್ರಯತ್ನದಿಂದಾಗಿ ಹಿಂದಿನ ಒಂದು ದಶಕದಿಂದ ಪದವಿ ಕಾಲೇಜುಗಳಲ್ಲಿ ಗ್ರಂಥಾಲಯಗಳ ಸ್ಥಾಪನೆ ಹಾಗೂ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಪ್ರತ್ಯೇಕ ಕಟ್ಟಡಗಳಲ್ಲಿ ಗ್ರಂಥಾಲಯಗಳ ಸ್ಥಾಪನೆ, ಪುಸ್ತಕಗಳು, ಪೀಠೋಪಕರಣ ಖರೀದಿಯಂತಹ ಚಟುವಟಿಕೆಗಳು ಮುನ್ನೆಲೆಗೆ ಬಂದಿವೆ. ಆದರೆ ಗ್ರಂಥಾಲಯಗಳ ಬಳಕೆ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ.

ಸಾಮಾನ್ಯವಾಗಿ ಕಾಲೇಜುಗಳಲ್ಲಿ ಗ್ರಂಥಾಲಯದ ಬಳಕೆ ಮತ್ತು ಚಟುವಟಿಕೆಗೆ ಸಂಬಂಧಿಸಿದಂತೆ ಅಗತ್ಯ ದಾಖಲೆಗಳನ್ನು ಸೃಷ್ಟಿಸಿ, ಮಾನ್ಯತಾ ಮಂಡಳಿ ಎದುರು ಪ್ರಸ್ತುತಪಡಿಸಲಾಗುತ್ತಿದೆ. ಒಟ್ಟಾರೆ, ಕಾಲೇಜುಗಳಲ್ಲಿ ಗ್ರಂಥಾಲಯದ ಉಪಯೋಗವು ದಾಖಲೆಗಳಲ್ಲಿ ಗೋಚರಿಸುತ್ತಿದೆಯೇ ವಿನಾ ವಾಸ್ತವದಲ್ಲಿ ಕಾಣುತ್ತಿಲ್ಲ. ಈ ಮಾತನ್ನು ವಿಶ್ವವಿದ್ಯಾಲಯ ಗ್ರಂಥಾಲಯಗಳಿಗೂ ಅನ್ವಯಿಸಿ ಹೇಳಬಹುದು.

ಕಾಲೇಜೊಂದಕ್ಕೆ ಇತ್ತೀಚೆಗೆ ಭೇಟಿ ನೀಡಿದ ಸಂದರ್ಭದಲ್ಲಿ, ಅಲ್ಲಿನ ಗ್ರಂಥಾಲಯವು ಓದುಗರಿಂದ ತುಂಬಿದ್ದನ್ನು ನೋಡಿ ಖುಷಿಯಾಯಿತು. ನೂರಾರು ಓದುಗರಿದ್ದರೂ ಬೆರಳೆಣಿಕೆಯಷ್ಟು ಪುಸ್ತಕಗಳು ಮಾತ್ರ ವಿತರಣೆಯಾಗಿದ್ದದ್ದು ಅಲ್ಲಿನ ಸಿಬ್ಬಂದಿಯನ್ನು ಮಾತನಾಡಿಸಿದಾಗ ತಿಳಿಯಿತು. ತಮ್ಮಲ್ಲಿರುವ ಗೈಡ್ ಮಾದರಿಯ ಪುಸ್ತಕ ಅಥವಾ ಮೊಬೈಲ್‌ನಂತಹ ಗ್ಯಾಜೆಟ್‌ಗಳನ್ನು ಹಿಡಿದು ಓದುವವರ ಸಂಖ್ಯೆ ಹೆಚ್ಚಾಗಿತ್ತು. ವಿಶೇಷವಾಗಿ, ಸ್ಪರ್ಧಾತ್ಮಕ ಮತ್ತು ಉನ್ನತ ಶಿಕ್ಷಣ ಪ್ರವೇಶ ಪರೀಕ್ಷೆಗಾಗಿ ಓದುತ್ತಿದ್ದ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಓದುಗರ ಈ ಅಗತ್ಯವನ್ನೇ ಬಂಡವಾಳ ಮಾಡಿಕೊಂಡು ಖಾಸಗಿ ಗ್ರಂಥಾಲಯಗಳನ್ನು ಸ್ಥಾಪಿಸಲಾಗುತ್ತಿದೆ. ಸಭಾಂಗಣದಂತಹ ದೊಡ್ಡ ಕೋಣೆಯಲ್ಲಿ ಮೇಜು ಮತ್ತು ಕುರ್ಚಿಗಳನ್ನು ವ್ಯವಸ್ಥೆಗೊಳಿಸಿ, ನಿರ್ದಿಷ್ಟ ಶುಲ್ಕ ಪಡೆದು, ಓದಲು ಅನುಕೂಲವಾದ ವಾತಾವರಣ ಸೃಷ್ಟಿಸಲಾಗುತ್ತಿದೆ. ಪುಸ್ತಕದಂತಹ ಓದಿನ ಸಾಮಗ್ರಿ ಅಲ್ಲಿರುವುದಿಲ್ಲ!

ಶಿಕ್ಷಕರಲ್ಲೇ ಓದಿನ ಅಭಿರುಚಿಯ ಕೊರತೆ ಇದೆ. ಅಧ್ಯಾಪನಕ್ಕೆ ಅಧ್ಯಯನವೇ ಬಂಡವಾಳ ಎನ್ನುವ ಮಾತನ್ನು ಶಿಕ್ಷಕರು ಮರೆತಂತಿದೆ. ಶಿಕ್ಷಕ ಹುದ್ದೆಗೆ ಹೊಸದಾಗಿ ನೇಮಕಗೊಂಡ ಶಿಷ್ಯನು ಮಾರ್ಗದರ್ಶನಕ್ಕಾಗಿ ಮನೆಗೆ ಬಂದ ಸಂದರ್ಭದಲ್ಲಿ ಜಿ.ಪಿ. ರಾಜರತ್ನಂ ಹೀಗೆ ಹೇಳಿದ್ದರಂತೆ: ‘ಪ್ರತಿದಿನ ತರಗತಿಗೆ ಪಾಠ ಮಾಡಲು ಹೋಗುವ ಪೂರ್ವದಲ್ಲಿ ಪುಸ್ತಕಗಳನ್ನು ಓದಿ, ಒಂದು ಗಂಟೆಯ ಅವಧಿಯ ಪ್ರವಚನಕ್ಕೆ ಎರಡು ಗಂಟೆಗಳಿಗಾಗುವಷ್ಟು ಟಿಪ್ಪಣಿ ಮಾಡಿಕೊಂಡು ಹೋಗು. ಪಾಠ ಮುಗಿಸಿ ತರಗತಿಯಿಂದ ಹೊರಬಂದ ತಕ್ಷಣ ಮಾಡಿಟ್ಟಿದ್ದ ಟಿಪ್ಪಣಿಯನ್ನು ಹರಿದುಹಾಕು. ಇಲ್ಲದಿದ್ದರೆ ಅದೇ ಟಿಪ್ಪಣಿಯನ್ನು ಪ್ರತಿವರ್ಷ ಬಳಸುವ ಮತ್ತು ಪುಸ್ತಕಗಳನ್ನು ಓದದೇ ಇರುವ ಸಂಪ್ರದಾಯವನ್ನು ನೀನೇ ಸೃಷ್ಟಿಸಿಕೊಂಡಂತೆ ಆಗುತ್ತದೆ’. ರಾಜರತ್ನಂ ಅವರು ಹೇಳಿದ ಈ ಮಾತು ಇಂದಿನ ಕಾಲಕ್ಕೂ ಅನ್ವಯ.

ಗ್ರಂಥಾಲಯಗಳು ಓದುಗರ ಕೊರತೆ ಎದುರಿಸುತ್ತಿರುವ ಈ ಕಾಲದಲ್ಲಿ ಗ್ರಂಥಪಾಲಕ ಹುದ್ದೆ ಹೊರಳು ಹಾದಿಯಲ್ಲಿದೆ. ನಿವೃತ್ತಿಯ ಅಂಚಿನಲ್ಲಿರುವ ಗ್ರಂಥಪಾಲಕರು ಹೊಸ ಪರಿಸರಕ್ಕೆ ಹೊಂದಿಕೊಳ್ಳುತ್ತಿಲ್ಲ. ಯುವ ಗ್ರಂಥಪಾಲಕರಿಗೆ ವೃತ್ತಿಯು ಅಸ್ತಿತ್ವದ ಪ್ರಶ್ನೆಯಾಗಿದೆ. ಅದೆಷ್ಟೋ ಸರ್ಕಾರಿ ಕಾಲೇಜುಗಳಲ್ಲಿ ಗ್ರಂಥಪಾಲಕರನ್ನು ಆಡಳಿತಕ್ಕೆ ಸಂಬಂಧಿಸಿದ ಕೆಲಸಗಳಿಗೆ ನಿಯೋಜಿಸಲಾಗುತ್ತಿದೆ. ಈ ಎಲ್ಲ ವೈರುಧ್ಯಗಳಿಂದ ಗ್ರಂಥಾಲಯ ಮತ್ತು ಗ್ರಂಥಪಾಲಕ ವೃತ್ತಿಯನ್ನು ಹೊರತರಬೇಕಿದೆ.

ವಾಚಕರ ವಾಣಿ

ಕೃಷಿಮೇಳ ಇನ್ನಷ್ಟು ಜನಸ್ನೇಹಿ ಆಗಲಿ

ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ನಡೆದ ಕೃಷಿಮೇಳಕ್ಕೆ ಮೊದಲ ಬಾರಿ ಹೋಗಿದ್ದೆ. ಕೃಷಿಯ ಬಗ್ಗೆ ಜನರಲ್ಲಿ ಆಸಕ್ತಿ ಕಡಿಮೆ ಇರಬಹುದು ಎಂಬ ಭಾವನೆ ನನ್ನಲ್ಲಿತ್ತು. ಆದರೆ ಕೃಷಿಮೇಳವು ನನ್ನ ಲೆಕ್ಕಾಚಾರ ತಲೆಕೆಳಗಾಗುವಂತೆ ಮಾಡಿತು. ಅಲ್ಲಿಗೆ ಜನಸಾಗರ ಹರಿದುಬಂದಿದ್ದುದನ್ನು ನೋಡಿ ಅಚ್ಚರಿಯಾಯಿತು. ಆಬಾಲವೃದ್ಧರಾದಿಯಾಗಿ ಎಲ್ಲರೂ ಅಲ್ಲಿದ್ದರು. ಗಮನಸೆಳೆವ ಕೃಷಿ ಉಪಕರಣಗಳು, ಬಗೆ ಬಗೆಯ ತರಕಾರಿ ಬೀಜಗಳು, ಸಸಿಗಳು, ಮಳಿಗೆಗಳಲ್ಲಿ ಸಂತೋಷದಿಂದ ಮುಕ್ತವಾಗಿ ಮಾಹಿತಿ ಹಂಚಿಕೊಳ್ಳುತ್ತಿದ್ದ ವ್ಯಾಪಾರಿಗಳು... ಎಲ್ಲವನ್ನೂ ನೋಡಿ ಸಂತೋಷವಾಯಿತು.

ಆದರೆ ಕೃಷಿಮೇಳದಲ್ಲಿ ಕೆಲವು ಮೂಲಸೌಲಭ್ಯಗಳ ಕೊರತೆ ಇದ್ದುದು ಬೇಸರ ಮೂಡಿಸಿತು. ಶೌಚಾಲಯಗಳು, ವಿಶ್ರಾಂತಿ ತಾಣಗಳು, ಕೈಗೆಟಕುವ ಬೆಲೆಗೆ ಊಟದಂತಹ ವ್ಯವಸ್ಥೆಯ ಕೊರತೆ ಇತ್ತು. ಇಂತಹ ಕೊರತೆಗಳನ್ನು ನೀಗಿಸುವ ಮೂಲಕ ಸರ್ಕಾರವು ಮುಂದಿನ ದಿನಗಳಲ್ಲಿ ಕೃಷಿಮೇಳ ಇನ್ನಷ್ಟು ಜನಸ್ನೇಹಿಯಾಗುವಂತೆ ಮಾಡಬೇಕಿದೆ.

ಸಂತೋಷ್ ಕುಮಾರ್ ಎಲ್., ಹಿರಿಯೂರು

ರೈಲು ವಿಳಂಬ ತಪ್ಪಲಿ, ದಕ್ಷತೆ ಹೆಚ್ಚಲಿ

ರೈಲು ವಿಳಂಬದಿಂದ ಮದುವೆ ಮುಹೂರ್ತಕ್ಕೆ ಸರಿಯಾಗಿ ಮಂಟಪಕ್ಕೆ ತೆರಳಲು ಸಾಧ್ಯವಾಗುತ್ತಿಲ್ಲ ಎಂಬ ಆತಂಕದಲ್ಲಿದ್ದ ಮುಂಬೈನ ವರ ಮತ್ತು ಅವರ ಕುಟುಂಬದ ಸದಸ್ಯರ ಭಾವನೆಗೆ ಸ್ಪಂದಿಸಿದ ರೈಲ್ವೆ ಇಲಾಖೆ, ಸಕಾಲಕ್ಕೆ ಅವರನ್ನು ನಿಗದಿತ ಸ್ಥಳಕ್ಕೆ ತಲುಪಿಸಿದ್ದಾಗಿ ವರದಿಯಾಗಿದೆ (ಪ್ರ.ವಾ., ನ. 17). ರೈಲು ವಿಳಂಬದ ಕುರಿತು, ಕುಟುಂಬದ ಸದಸ್ಯರು ರೈಲ್ವೆ ಸಚಿವರಿಗೆ ‘ಎಕ್ಸ್’ನಲ್ಲಿ ಟ್ಯಾಗ್ ಮಾಡಿದ ಪರಿಣಾಮವಾಗಿ, ಸಚಿವರ ಆಣತಿಯಂತೆ ಸಮರೋಪಾದಿಯಲ್ಲಿ ಕ್ರಮ ಕೈಗೊಂಡ ರೈಲ್ವೆ ಇಲಾಖೆ ಅಧಿಕಾರಿಗಳ ಕಾರ್ಯ ಶ್ಲಾಘನೀಯವೇ ಹೌದು. ಬಹುಶಃ ಭಾರತೀಯ ರೈಲ್ವೆ ಇಲಾಖೆಯಲ್ಲಿ ಇದು ಹಿಂದೆಂದೂ ಕಾಣದಿದ್ದಂತಹ ದಾಖಲೆಯ ಕಾರ್ಯ ಎನ್ನಬಹುದು! ಏಕೆಂದರೆ, ರೈಲ್ವೆ ಇಲಾಖೆಯು ವಿಳಂಬಕ್ಕೆ ಮತ್ತೊಂದು ಹೆಸರು ಎಂದೇ ಕುಖ್ಯಾತಿ ಪಡೆದಿದೆ. ರೈಲು ಸಮಯಕ್ಕೆ ಸರಿಯಾಗಿ ನಿಲ್ದಾಣವನ್ನು ಬಿಟ್ಟರೂ, ನಡುವೆ ಕ್ರಾಸಿಂಗ್, ನಿಲ್ದಾಣದಲ್ಲಿ ಪ್ಲಾಟ್‌ಫಾರಂ ಖಾಲಿ ಇಲ್ಲವೆಂಬ ಕಾರಣದಿಂದ ನಡು ಮಧ್ಯದಲ್ಲಿ ರೈಲು ನಿಲ್ಲಿಸಿ ಜನರನ್ನು ಹೈರಾಣವಾಗಿಸುವುದು ಸಹಜ ಎನ್ನುವಂತಹ ಸ್ಥಿತಿ ಇದೆ. ಇದರಿಂದ, ಕೆಲಸದ ನಿಮಿತ್ತ ನಿತ್ಯ ಪ್ರಯಾಣಿಸುವವರು, ಸಂದರ್ಶನ, ಪರೀಕ್ಷೆಗೆ ತೆರಳುವವರು ತೊಂದರೆ ಅನುಭವಿಸುತ್ತಲೇ ಇರುತ್ತಾರೆ.

ಮೈಸೂರು- ಬೆಂಗಳೂರು ನಡುವೆ ಸಂಚರಿಸುವ ರೈಲುಗಳು ಹಲವು ಬಾರಿ ನಿಗದಿತ ಸಮಯಕ್ಕಿಂತ 30ರಿಂದ 45 ನಿಮಿಷ ವಿಳಂಬವಾಗಿ ಗಮ್ಯವನ್ನು ತಲುಪುವುದಿದೆ. ಹೀಗಾಗಿ, ರೈಲುಗಳು ಸಮಯಕ್ಕೆ ಸರಿಯಾಗಿ ನಿಗದಿತ ನಿಲ್ದಾಣ ತಲುಪುವಂತೆ ಮಾಡುವಲ್ಲಿ ರೈಲ್ವೆ ಇಲಾಖೆ ದಕ್ಷತೆಯನ್ನು ತೋರಬೇಕಿದೆ. ಹಾಗೆಯೇ ರೈಲುಗಳಲ್ಲಿ ದುರ್ನಾತ ಬೀರುವ ಶೌಚಾಲಯಗಳ ಸ್ವಚ್ಛತೆಗೆ ಗಮನಹರಿಸಿ, ರೈಲು ಪ್ರಯಾಣಿಕರಿಗೆ ಆಗುವ ಹಿಂಸೆ ತಪ್ಪಿಸಬೇಕಿದೆ. ಶೌಚಾಲಯವನ್ನು ಆಗಾಗ ಸ್ವಚ್ಛಗೊಳಿಸಲು ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡಬೇಕಾಗಿದೆ.

ಮುಳ್ಳೂರು ಪ್ರಕಾಶ್, ಮೈಸೂರು

ಜಾತಿಗೆ ಸೀಮಿತವಾಗದಿರಲಿ ದಾಸಶ್ರೇಷ್ಠರು

ದಾಸಶ್ರೇಷ್ಠ ಕನಕದಾಸರ ಜಯಂತಿ ಇಂದು (ನ. 18). ಕನಕದಾಸರು ರಚಿಸಿದ ಕೀರ್ತನೆಗಳು ಒಂದು ವಿಶಿಷ್ಟ ಪ್ರಯೋಗ. ಅವರು ಕನ್ನಡ ಸಂಗೀತ ಲೋಕಕ್ಕೆ ಬಹಳಷ್ಟು ಕೊಡುಗೆ ನೀಡಿದ್ದಾರೆ. ಕುಲ ಕುಲ ಕುಲವೆಂದು ಹೊಡೆದಾಡದಿರಿ ಹುಚ್ಚಪ್ಪಗಳಿರಾ ಎಂದು ಮಾನವ ಕುಲಕ್ಕೆ ತಮ್ಮ ಕೀರ್ತನೆಯ ಮೂಲಕ ತಿಳಿಹೇಳಿದ್ದಾರೆ. ಸಮಾಜದಲ್ಲಿನ ಜಾತಿ ವ್ಯವಸ್ಥೆ ಮತ್ತು ಅಸಮಾನತೆಯ ವಿರುದ್ಧ ಧ್ವನಿ ಎತ್ತಿದವರು ಅವರು. ಅವರ ರಚನೆಗಳು ಸಾಮಾಜಿಕ ನ್ಯಾಯ, ಮಾನವೀಯ ಮೌಲ್ಯಗಳ ಬಗ್ಗೆ ಮಾತನಾಡುತ್ತವೆ ಮತ್ತು ಕೋಮು ಸೌಹಾರ್ದದ ಭಾವನೆಯನ್ನು ಎತ್ತಿ ತೋರಿಸುತ್ತವೆ. ಆದರೆ ಇಂದು ಅವರು ಒಂದು ಜಾತಿಗೆ ಸೀಮಿತವಾಗುತ್ತಿದ್ದಾರೆ. ಹಾಗಾಗಬಾರದು. ಕನಕದಾಸರ ಉಪದೇಶಗಳು, ತತ್ವಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಆಗಬೇಕು. ಜಾತೀಯತೆಯನ್ನು ಬಿಡಬೇಕು. ಆಗ ಮಾತ್ರ ಅವರ ಜಯಂತಿ ಆಚರಣೆಗೆ ಅರ್ಥ ಬರಲು ಸಾಧ್ಯ.

ಭೂಮಿಕಾ ರಂಗಪ್ಪ ದಾಸರಡ್ಡಿ, ಬಿದರಿ

70 ತಾಸು ಕೆಲಸ: ವ್ಯತಿರಿಕ್ತ ಪರಿಣಾಮ ಅರಿಯಬೇಕಿದೆ

‘ಯುವಕರು ವಾರದಲ್ಲಿ 70 ತಾಸು ಕೆಲಸ ಮಾಡಬೇಕು ಎಂಬ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದು ಇನ್ಫೊಸಿಸ್ ಸಹ ಸಂಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ ತಮ್ಮ ಹಿಂದಿನ ಹೇಳಿಕೆಯನ್ನು ಮತ್ತೊಮ್ಮೆ ಸಮರ್ಥಿಸಿಕೊಂಡಿದ್ದಾರೆ. ವಾರಕ್ಕೆ 70 ತಾಸು ಎಂದರೆ, ವಾರಾಂತ್ಯದ ಎರಡು ರಜೆ ದಿನಗಳನ್ನು ಹೊರತುಪಡಿಸಿದರೆ ದಿನಕ್ಕೆ 14 ತಾಸುಗಳ ಕೆಲಸ ಆಗುತ್ತದೆ. ಕಚೇರಿಗೆ ಹೋಗಿಬರುವ ಸಮಯ ಕನಿಷ್ಠ ಎರಡು ಗಂಟೆ ಎಂದರೂ 16 ಗಂಟೆಗಳು ಆಗುತ್ತವೆ. ವೈದ್ಯರ ಪ್ರಕಾರ, ಆರೋಗ್ಯವಂತ ವ್ಯಕ್ತಿಗೆ ನಿತ್ಯ 8 ಗಂಟೆಗಳ ನಿದ್ರೆ ಅವಶ್ಯ. ಇನ್ನು ನಿತ್ಯದ ಇತರ ಕೆಲಸಗಳಿಗೆ ಸಮಯವನ್ನು ಹೇಗೆ ನೀಡುವುದು? ಅಷ್ಟೇ ಅಲ್ಲದೆ ಕೆಲಸ ಮಾಡಿ ಬಳಲಿದ ವ್ಯಕ್ತಿಗೆ ಮನರಂಜನೆಯ ಅವಶ್ಯಕತೆ ಕೂಡಾ ಇರುತ್ತದೆ ಅಲ್ಲವೇ? ಇಷ್ಟು ದೀರ್ಘಕಾಲ ಕೆಲಸ ಮಾಡಿದರೆ ದಾಂಪತ್ಯದ ಗತಿ ಏನು? ಈಗಾಗಲೇ ದಂಪತಿ ಪರಸ್ಪರ ಸಮಯ ನೀಡಲಾಗದೇ ವಿಚ್ಛೇದನಗಳ ಸಂಖ್ಯೆ ಹೆಚ್ಚಾಗಿರುವುದನ್ನು ಸಮೀಕ್ಷೆಗಳು ತಿಳಿಸಿವೆ.

ಇವುಗಳನ್ನೆಲ್ಲಾ ಪರಿಶೀಲಿಸಿಯೇ ದಿನವನ್ನು ಎಂಟು ಗಂಟೆಗಳಂತೆ ಮೂರು ಭಾಗ ಮಾಡಿ, ನಿದ್ರೆಗೆ, ವೈಯಕ್ತಿಕ ಕೆಲಸಗಳಿಗೆ ಹಾಗೂ ವೃತ್ತಿಗೆ ಎಂದು ತಲಾ ಎಂಟು ಗಂಟೆಗಳಂತೆ ನಿಗದಿ ಮಾಡಿರುವುದು. ಮಾಧ್ಯಮದವರು, ಕೂಲಿಯಾಳುಗಳು, ತುರ್ತು ಮತ್ತು ಅಗತ್ಯ ಸೇವೆಗಳ ವೈದ್ಯರು, ಪೊಲೀಸ್ ಇಲಾಖೆಯವರು, ರಕ್ಷಣಾ ಕ್ಷೇತ್ರಕ್ಕೆ ಸೇರಿದಂತಹವರು ನಿಗದಿತ ಅವಧಿಗಿಂತ ಹೆಚ್ಚು ಕೆಲಸ ಮಾಡುವುದು ನಿಜ. ಆದರೆ ಅವರ ಕೆಲಸಗಳಲ್ಲಿ ಏಕತಾನತೆ ಕಡಿಮೆ. ವೈವಿಧ್ಯ ಇರುವ ಕಾರಣ, ಶ್ರಮ ಅಷ್ಟಾಗಿ ಬಾಧಿಸದೇ ಇರಬಹುದು. ಐ.ಟಿ ಕ್ಷೇತ್ರ ಆ ಮಾದರಿಯದ್ದಲ್ಲ. ಕೆಲಸ ಮಾಡುವಷ್ಟೂ ಸಮಯ ಕಂಪ್ಯೂಟರ್ ಪರದೆಯನ್ನು ನೋಡುತ್ತಲೇ ಇರಬೇಕು ಮತ್ತು ಫೋನಿನಲ್ಲಿ ಸಂಭಾಷಣೆ ಮಾಡುತ್ತಿರಬೇಕು. ಇಂತಹ ಕೆಲಸಗಳನ್ನು ನಿರಂತರವಾಗಿ ಮಾಡುವವರ ಆರೋಗ್ಯ ಮತ್ತು ಕಣ್ಣಿನ ಗತಿ ಏನಾಗಬೇಕು?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಒಂದೇ ತಿಂಗಳಲ್ಲಿ 48 ಲಕ್ಷ ಮದುವೆ, ₹6 ಲಕ್ಷ ಕೋಟಿ ವಹಿವಾಟು ನಿರೀಕ್ಷೆ: ಸಿಎಐಟಿ ಸಮೀಕ್ಷೆ

ಮದುವೆ ಎನ್ನುವುದನ್ನು ತಮ್ಮ ಜೀವನದ ಬಹು ಮುಖ್ಯ ಘಟ್ಟ ಎಂದು ಹೆಚ್ಚಿನ ಜನರು ಭಾವಿಸುತ್ತಾರೆ. ವಿವಾಹವು ಭಾರತದಲ್ಲಿ ಪ್ರಮುಖ ಆರ್ಥಿಕ ಚಟುವಟಿಕೆಯೂ ಆಗಿದೆ. ಲಕ್ಷಾಂತರ ಉದ್ಯೋಗಗಳ ಸೃಷ್ಟಿಗೆ, ಲಕ್ಷಾಂತರ ಕೋಟಿ ರೂಪಾಯಿ ವಹಿವಾಟಿಗೆ ಕಾರಣವಾಗುತ್ತಿದೆ. ವಾರ್ಷಿಕವಾಗಿ ಅತಿ ಹೆಚ್ಚು ಮದುವೆಗಳು ನಡೆಯುವ ದೇಶಗಳ ಪಟ್ಟಿಯಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ; ದೇಶದ ಮದುವೆ ಮಾರುಕಟ್ಟೆಯ ಮೌಲ್ಯ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ

‘ಕಲ್ಯಾಣ’ ವೈಭೋಗ



* ಅಖಿಲ ಭಾರತ ವರ್ತಕರ ಒಕ್ಕೂಟದ ಅಂದಾಜು

• ಕೆ.ಎಚ್. ಓಬಳೇಶ್

ಮದುವೆ ಎನ್ನುವುದು ಭಾರತದಲ್ಲಿ ವಧು ಮತ್ತು ವರ ಅಥವಾ ಎರಡು ಕುಟುಂಬಗಳ ನಡುವಿನ ವೈಯಕ್ತಿಕ ವಿಚಾರವಷ್ಟೇ ಆಗಿ ಉಳಿದಿಲ್ಲ. ದೇಶದ ಆರ್ಥಿಕತೆ ಬೆಳವಣಿಗೆಗೆ ವಿವಾಹ ಉದ್ಯಮವು ಅತಿಹೆಚ್ಚು ಕೊಡುಗೆ ನೀಡುತ್ತಿದೆ. ಭಾರತದ ಮದುವೆ ಮಾರುಕಟ್ಟೆಯ ಮೌಲ್ಯವು ಅಮೆರಿಕದ ಮದುವೆ ಮಾರುಕಟ್ಟೆಗಿಂತ ಎರಡು ಪಟ್ಟು ದೊಡ್ಡದಿದೆ.

ಮದುವೆ ಋತುವಿನಲ್ಲಿ ಆಭರಣದ ಅಂಗಡಿ, ಸೀರೆ ಅಂಗಡಿ, ವಾಲಗದವರು, ಮದುವೆ ಆಹ್ವಾನಪತ್ರ ಮುದ್ರಿಸುವವರು, ಕೇಟರಿಂಗ್, ಹೋಟೆಲ್, ರೆಸಾರ್ಟ್, ಕಲ್ಯಾಣ ಮಂಟಪದ ಬುಕಿಂಗ್… ಹೀಗೆ ಕೋಟ್ಯಂತರ ರೂಪಾಯಿ ಹಣ ಕೈಬದಲಾಗುತ್ತದೆ. ದೇಶದಲ್ಲಿ ಪ್ರತಿ ವರ್ಷವೂ ಈ ಉದ್ಯಮದ ವಹಿವಾಟು ದ್ವಿಗುಣಗೊಳ್ಳುತ್ತಿದೆ. ಸರಕು ಮತ್ತು ಸೇವಾ ವಲಯದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗುತ್ತವೆ.

ಭಾರತದಲ್ಲಿ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಮದುವೆ ಸಂಭ್ರಮ ಗರಿಗೆದರುತ್ತದೆ; ದೇಶದಲ್ಲಿ ನಡೆಯುತ್ತಿರುವ ವೈಭವೋಪೇತ ಮದುವೆಗಳು ವಿಶ್ವದ ಗಮನ ಸೆಳೆಯುತ್ತಿವೆ.

ಸಿಎಐಟಿ ಹೇಳಿದ್ದೇನು?

ಅಖಿಲ ಭಾರತ ವರ್ತಕರ ಒಕ್ಕೂಟ (ಸಿಎಐಟಿ) ನಡೆಸಿರುವ ಸಮೀಕ್ಷೆ ಪ್ರಕಾರ, ಈ ಬಾರಿಯ ನವೆಂಬರ್ 12ರಿಂದ ಡಿಸೆಂಬರ್ 16ರವರೆಗೆ ದೇಶದಲ್ಲಿ 48 ಲಕ್ಷ ಮದುವೆಗಳು ಜರುಗಲಿವೆ. ಒಟ್ಟು ₹6 ಲಕ್ಷ ಕೋಟಿ ವಹಿವಾಟು ನಡೆಯಬಹುದು ಎಂದು ಅಂದಾಜಿಸಿದೆ.

ಈ ಅವಧಿಯಲ್ಲಿ ದೆಹಲಿಯೊಂದರಲ್ಲೇ 4.5 ಲಕ್ಷ ವಿವಾಹಗಳು ನಡೆಯುತ್ತವೆ. ಒಟ್ಟಾರೆ ₹1.50 ಲಕ್ಷ ಕೋಟಿ ವಹಿವಾಟು ನಡೆಯಲಿದೆ. ಈ ವಹಿವಾಟು ಫ್ಯಾಷನ್, ಪ್ರವಾಸ, ಆತಿಥ್ಯ, ಮನರಂಜನೆ ಹೀಗೆ ವಿವಿಧ ವಲಯಗಳಿಗೆ ವಿಸ್ತರಿಸಿಕೊಳ್ಳುತ್ತದೆ ಎಂದು ತಿಳಿಸಿದೆ.

ಪ್ರತಿ ಕುಟುಂಬವು ಜೀವನದಲ್ಲಿ ಜತನದಿಂದ ಕೂಡಿಟ್ಟ ಹಣವನ್ನು ಮದುವೆಗೆ ವ್ಯಯಿಸುತ್ತದೆ. ಕೆಲವರು ವಿವಾಹ ನೋಂದಣಿ ಕಚೇರಿಯಲ್ಲಿ ಸ್ನೇಹಿತರ ಸಮ್ಮುಖದಲ್ಲಿ ಹಾರ ಬದಲಾಯಿಸಿಕೊಂಡು ಸರಳವಾಗಿ ವೈವಾಹಿಕ ಜೀವನಕ್ಕೆ ಅಡಿ ಇಡುತ್ತಾರೆ. ಮತ್ತೆ ಕೆಲವರು ಸಾಮೂಹಿಕ ವಿವಾಹದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಡುತ್ತಾರೆ. ಕೆಲವರ ಮದುವೆಯು ಆಪ್ತರು, ಪರಿಚಿತರ ಆಹ್ವಾನಕ್ಕಷ್ಟೇ ಸೀಮಿತಗೊಂಡಿರುತ್ತದೆ. ಆದರೆ, ಸಿರಿವಂತರು ವಿವಾಹಕ್ಕಾಗಿಯೇ ಕೋಟ್ಯಂತರ ರೂಪಾಯಿ ವ್ಯಯಿಸುತ್ತಾರೆ.

ಭಾರತದಲ್ಲಿ ಮಧ್ಯಮ ವರ್ಗದ ಕುಟುಂಬಗಳು ಮದುವೆಗೆ ₹5ಲಕ್ಷದಿಂದ ₹25 ಲಕ್ಷದವರೆಗೆ ವ್ಯಯಿಸಿದರೆ, ಮೇಲ್ಮಧ್ಯಮ ವರ್ಗದ ಕುಟುಂಬಗಳು ₹25 ಲಕ್ಷದಿಂದ ₹2.50 ಕೋಟಿವರೆಗೂ ವೆಚ್ಚ ಮಾಡುತ್ತವೆ ಎಂದು ಸಿಎಐಟಿ ವರದಿ ಹೇಳಿದೆ.

ಪ್ರಸ್ತುತ ಪ್ರೀ ವೆಡ್ಡಿಂಗ್ ಕಾರ್ಯಕ್ರಮಗಳು ಹೆಚ್ಚು ಜನಪ್ರಿಯವಾಗುತ್ತಿವೆ. ಬಾಲಿವುಡ್ ಸಿನಿಮಾಗಳ ಶೈಲಿಯಲ್ಲಿ ವಿವಾಹ ಮಾಡುವವರೂ ಇದ್ದಾರೆ. ಮದುವೆಗೂ ಮೊದಲು ತಿಂಗಳುಗಟ್ಟಲೆ ಕಾರ್ಯಕ್ರಮ ಆಯೋಜಿಸುತ್ತಾರೆ.

ಇತ್ತೀಚೆಗೆ ನಡೆದ ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿ-ನೀತಾ ಅಂಬಾನಿ ಅವರ ಪುತ್ರ ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚಂಟ್ ಅವರ ಮದುವೆ ಇದಕ್ಕೊಂದು ತಾಜಾ ನಿದರ್ಶನ. ಈ ವಿವಾಹ ಮಹೋತ್ಸವದಲ್ಲಿ ದೇಶದ ಸಿನಿ ತಾರೆಯರು, ರಾಜಕಾರಣಿಗಳು, ಉದ್ಯಮದ ಗಣ್ಯರು ಸೇರಿ ಜಾಗತಿಕ ಮಟ್ಟದ ತಾರಾಮಣಿಗಳು ಪಾಲ್ಗೊಂಡಿದ್ದರು.

> ಚೀನಾದಲ್ಲಿ ವಾರ್ಷಿಕವಾಗಿ 70 ಲಕ್ಷದಿಂದ 80 ಲಕ್ಷ ಮತ್ತು ಅಮೆರಿಕದಲ್ಲಿ 20 ಲಕ್ಷದಿಂದ 25 ಲಕ್ಷ ವಿವಾಹಗಳು ನಡೆಯುತ್ತವೆ. ಭಾರತದಲ್ಲಿ 80 ಲಕ್ಷದಿಂದ ಒಂದು ಕೋಟಿ ಮದುವೆಗಳು ನಡೆಯುತ್ತವೆ

ಭಾರತದಲ್ಲಿ ಮದುವೆ ಮಾಡುವುದನ್ನು ಪ್ರತಿಷ್ಠೆಯ ವಿಚಾರ ಎನ್ನುವಂತೆ, ಸಾಧನೆ ಎನ್ನುವಂತೆ ಭಾವಿಸಲಾಗುತ್ತದೆ. ದೇಶದ ಬಹುತೇಕ ಜಾತಿ, ಧರ್ಮ, ಪಂಗಡಗಳು ಮದುವೆಗೆ ತಮ್ಮ ಶಕ್ತಿ ಮೀರಿ ಖರ್ಚು ಮಾಡುತ್ತವೆ.

ಕೋವಿಡ್ ಬಳಿಕ ಚೇತರಿಕೆ

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ದೇಶದ ವಿವಾಹ ಉದ್ಯಮಕ್ಕೆ ತೀವ್ರ ಪೆಟ್ಟು ಬಿದ್ದಿತ್ತು. ಸದ್ಯ ಈ ವಲಯವು ಚೇತರಿಕೆಯ ಹಳಿಗೆ ಮರಳಿದೆ. ಮದುವೆಯ ಬಜೆಟ್‌ನಲ್ಲಿ ಅಡುಗೆ, ಹೋಟೆಲ್, ರೆಸಾರ್ಟ್‌ಗಳ ಬುಕಿಂಗ್ (ಆತಿಥ್ಯ ವಲಯ) ಪಾಲು ಶೇ 20ರಷ್ಟಿದ್ದರೆ, ಆಭರಣಗಳ ಖರೀದಿಯ ಪಾಲು ಶೇ 15ರಷ್ಟಿದೆ.

ಮದುವೆ ಋತುವಿನಲ್ಲಿ ಛಾಯಾಗ್ರಹಣ/ವಿಡಿಯೊಗ್ರಫಿ, ಸಿಹಿ ಪದಾರ್ಥ, ಎಲೆಕ್ಟ್ರಾನಿಕ್ಸ್, ತರಕಾರಿ, ಉಡುಗೊರೆ, ಅಲಂಕಾರ, ಇವೆಂಟ್ ಮ್ಯಾನೇಜ್‌ಮೆಂಟ್, ಮನರಂಜನೆ, ಪ್ರವಾಸೋದ್ಯಮ ಹೀಗೆ ವಿವಿಧ ಕ್ಷೇತ್ರದಲ್ಲಿ ದುಡಿಯುವವರಿಗೆ ಕೆಲಸ ದೊರೆಯುತ್ತದೆ.

ಸರಕು ಸಾಗಣೆ: ಈ ಅವಧಿಯಲ್ಲಿ ಸರಕು ಸಾಗಣೆ ವಲಯದಲ್ಲೂ ಹೆಚ್ಚು ವಹಿವಾಟು ನಡೆಯುತ್ತದೆ. ಮದುವೆಗಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಮಗ್ರಿಗಳ ಸಾಗಣೆ ನಡೆಯುತ್ತದೆ. ಅತಿಥಿಗಳ ಸಂಚಾರಕ್ಕೂ ಸಾರಿಗೆ ಇತ್ಯಾದಿ ಬಳಸಲಾಗುತ್ತದೆ. ಇದರಿಂದ ಹೊಸ ಉದ್ಯೋಗ ಸೃಷ್ಟಿಯ ಜೊತೆಗೆ ಈ ಉದ್ಯಮದ ಆದಾಯ ಹೆಚ್ಚಳವಾಗುತ್ತದೆ.

ಶಿಕ್ಷಣಕ್ಕಿಂತಲೂ ಮದುವೆಗೆ ಹೆಚ್ಚು ವೆಚ್ಚ

ಮದುವೆಯಲ್ಲಿ ಯಾವುದಕ್ಕೂ ಕೊರತೆಯಾಗಬಾರದು ಎಂಬುದು ಹೆತ್ತವರ ಬಯಕೆ. ಈ ಸಂಭ್ರಮವನ್ನು ಸ್ಮರಣೀಯವಾಗಿಸುವುದು ಅವರ ಆಸೆ. ಇದಕ್ಕಾಗಿ ಉಳಿತಾಯದ ಹಣವನ್ನೆಲ್ಲಾ ಖಾಲಿ ಮಾಡಿಕೊಳ್ಳುತ್ತಾರೆ. ಭಾರತದಲ್ಲಿ ಮಕ್ಕಳ ಶಿಕ್ಷಣಕ್ಕೆ ವ್ಯಯಿಸುವ ವೆಚ್ಚಕ್ಕಿಂತ ಅವರ ಮದುವೆಗೆ ಹೆಚ್ಚಿನ ಖರ್ಚು ಮಾಡುವವರ ಸಂಖ್ಯೆ ದೊಡ್ಡದು. ಭಾರತದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಪದವಿ ಹಂತದವರೆಗೆ ಹೆಣ್ಣು ಅಥವಾ ಗಂಡು ಮಕ್ಕಳ ಶಿಕ್ಷಣಕ್ಕೆ ವ್ಯಯಿಸುವ ಖರ್ಚಿಗಿಂತ ಅವರ ಮದುವೆಗೆ ಮಾಡುವ ವೆಚ್ಚವು ಎರಡು ಪಟ್ಟು ಹೆಚ್ಚಿದೆ ಎನ್ನುತ್ತದೆ ಜಾಗತಿಕ ಬ್ರೋಕರೇಜ್ ಸಂಸ್ಥೆ ಜೆಫರಿಸ್ ವರದಿ. ಪ್ರಸ್ತುತ ಭಾರತದ ತಲಾ ವಾರ್ಷಿಕ ಆದಾಯ 2,730 ಡಾಲರ್ (₹2.30 ಲಕ್ಷ) ಆಗಿದೆ. ತಲಾ ಆದಾಯದ ಐದು ಪಟ್ಟು ಹಣವನ್ನು ಮದುವೆಗೆ ವೆಚ್ಚ ಮಾಡಲಾಗುತ್ತದೆ. ಕುಟುಂಬದ ವಾರ್ಷಿಕ ಆದಾಯ ₹4 ಲಕ್ಷವಿದ್ದು, ಇದರ ಮೂರು ಪಟ್ಟು ವ್ಯಯ ಮಾಡಲಾಗುತ್ತದೆ ಎನ್ನುತ್ತದೆ ವರದಿ.

ಭಾರತದಲ್ಲಿ ಸರಾಸರಿ ಮದುವೆ ವೆಚ್ಚ ₹12.50 ಲಕ್ಷ ಆಗಿದೆ. ಮದುವೆಯ ಮಾರುಕಟ್ಟೆ ಮೌಲ್ಯವು ವಾರ್ಷಿಕ ₹10 ಲಕ್ಷ ಕೋಟಿ ದಾಟಿದೆ. ಇತರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಅತಿಹೆಚ್ಚು ಮದುವೆಗಳು ನಡೆಯುತ್ತವೆ ಎಂದು ಹೇಳಿದೆ. ಚೀನಾದಲ್ಲಿ ವಾರ್ಷಿಕವಾಗಿ 70 ಲಕ್ಷದಿಂದ 80 ಲಕ್ಷ ಮತ್ತು ಅಮೆರಿಕದಲ್ಲಿ 20 ಲಕ್ಷದಿಂದ 25 ಲಕ್ಷ ವಿವಾಹಗಳು ನಡೆಯುತ್ತವೆ. ಭಾರತದಲ್ಲಿ 80 ಲಕ್ಷದಿಂದ ಒಂದು ಕೋಟಿ ಮದುವೆಗಳು ನಡೆಯುತ್ತವೆ ಎಂದು ವಿವರಿಸಿದೆ.

ಮದುವೆ: ಯಾವುದಕ್ಕೆ ಎಷ್ಟು ಖರ್ಚು?



ಯಾವ ಸ್ಥಳಗಳು ಪ್ರಸಿದ್ಧ?

ಮದುವೆಗಾಗಿ ಬೆಡಗಿನ ತಾಣಗಳ ಮೊರೆಹೋಗುವವರೇ ಹೆಚ್ಚು. ರಾಜಸ್ಥಾನ, ಕೇರಳ, ಉತ್ತರಾಖಂಡ, ಗೋವಾ ವಿವಾಹಪ್ರಿಯರ ನೆಚ್ಚಿನ ರಾಜ್ಯಗಳಾಗಿವೆ.

ಜೈಪುರ, ಉದಯಪುರ, ಜೋಧ್‌ಪುರ, ಗೋವಾ, ಮಹಾಬಲಿಪುರ ಮೆಚ್ಚಿನ ತಾಣಗಳಾಗಿವೆ. ಡೆಹ್ರಾಡೂನ್, ಹೃಷಿಕೇಶ, ಕರ್ನಾಟಕದ ಕೊಡಗು ಕೂಡ ವಿವಾಹಕ್ಕೆ ಹೇಳಿ ಮಾಡಿದ ಸ್ಥಳಗಳಾಗಿವೆ. ಇತ್ತೀಚೆಗೆ ಬೆಂಗಳೂರು ಕೂಡ ವೆಡ್ಡಿಂಗ್ ಡೆಸ್ಟಿನೇಷನ್ ಆಗಿ ರೂಪುಗೊಂಡಿದೆ. ಇಲ್ಲಿನ ಹೋಟೆಲ್, ರೆಸಾರ್ಟ್, ಸಾರಿಗೆ ಸೇವೆಯು ಹೊರರಾಜ್ಯದವರನ್ನು ಆಕರ್ಷಿಸುತ್ತಿದೆ.

ವೆಡ್ ಇನ್ ಇಂಡಿಯಾ

ವಿದೇಶದಲ್ಲಿ ಮಕ್ಕಳ ಮದುವೆ ಮಾಡುವುದು ಕೆಲವು ಶ್ರೀಮಂತ ಭಾರತೀಯರಿಗೆ ಪ್ರತಿಷ್ಠೆಯ ವಿಷಯ. ಪ್ರತಿ ವರ್ಷ ಸುಮಾರು 5000 ಮದುವೆಗಳು ಹೊರದೇಶಗಳಲ್ಲಿ (ಡೆಸ್ಟಿನೇಷನ್ ವೆಡ್ಡಿಂಗ್) ನಡೆಯುತ್ತವೆ. ಇವುಗಳ ವೆಚ್ಚ ಸುಮಾರು ₹1 ಲಕ್ಷ ಕೋಟಿ ಎಂದು ಕೇಂದ್ರ ಸರ್ಕಾರ ಅಂದಾಜಿಸಿದೆ.

ಭಾರತೀಯ ಶ್ರೀಮಂತರ ಪೈಕಿ ಶೇ 10ರಷ್ಟು ಮಂದಿ ಮಾತ್ರ ವಿದೇಶದಲ್ಲಿ ಮದುವೆ ಮಾಡುತ್ತಾರೆ. ಬಹುತೇಕರ ಆಯ್ಕೆ ಥಾಯ್ಲೆಂಡ್, ಬಾಲಿ, ಇಟಲಿ, ದುಬೈ.

ಕಳೆದ ವರ್ಷದ ನವೆಂಬರ್‌ನಲ್ಲಿ ನಡೆದ ‘ಮನದ ಮಾತು’ ಮಾಸಿಕ ರೇಡಿಯೊ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಮೇಕ್ ಇನ್ ಇಂಡಿಯಾ ಮಾದರಿಯಲ್ಲಿ ‘ವೆಡ್ ಇನ್ ಇಂಡಿಯಾ’ ಬಗ್ಗೆ ಪ್ರಸ್ತಾಪಿಸಿದ್ದರು. ಅದೇ ವರ್ಷದ ಡಿಸೆಂಬರ್‌ನಲ್ಲಿ ಉತ್ತರಾಖಂಡದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲೂ ಈ ಮಾತನ್ನು ಪುನರುಚ್ಚರಿಸಿದ್ದರು. ದೇಶದ ಸಂಸ್ಕೃತಿ, ಪರಂಪರೆ ರಕ್ಷಣೆ ಹಾಗೂ ಆದಾಯ ವೃದ್ಧಿಗೊಳಿಸುವುದಕ್ಕಾಗಿ ವಿದೇಶದ ಬದಲು ಭಾರತದಲ್ಲಿಯೇ ವಿವಾಹ ಮಾಡುವಂತೆ ಒತ್ತಿ ಹೇಳಿದ್ದರು.

ದೇಶದಲ್ಲಿಯೇ ಮದುವೆ ಸಮಾರಂಭ ಹಮ್ಮಿಕೊಳ್ಳುವ ಕುರಿತಂತೆ ಕೇಂದ್ರ ಪ್ರವಾಸೋದ್ಯಮ ಸಚಿವಾಲಯ, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯಗಳು ಜಾಗತಿಕ ಹೂಡಿಕೆದಾರರ ಸಮಾವೇಶಗಳಲ್ಲಿ ಜಾಗೃತಿ ಮೂಡಿಸುತ್ತಿವೆ.

‘ಪುಷ್ಪ’ನೊಂದಿಗೆ ಶ್ರೀಲೀಲಾ ಹೆಜ್ಜೆ

ಚಂದನವನದಲ್ಲಿ ‘ಕಿಸ್’ ಸಿನಿಮಾ ಮೂಲಕ ತಮ್ಮ ಸಿನಿಪಯಣ ಆರಂಭಿಸಿದ ನಟಿ ಶ್ರೀಲೀಲಾ ಇದೀಗ ಕನ್ನಡದ ಜೊತೆಗೆ ಟಾಲಿವುಡ್‌ನಲ್ಲಿ ಸಾಲು ಸಾಲು ಸಿನಿಮಾ ಮಾಡುತ್ತಿದ್ದಾರೆ.

ಹೊಸ ಸುದ್ದಿ ಏನೆಂದರೆ ‘ಪುಷ್ಪ–2’ ಸಿನಿಮಾದಲ್ಲಿ ನಟ ಅಲ್ಲು ಅರ್ಜುನ್ ಜೊತೆಗೆ ಹೆಜ್ಜೆ ಹಾಕಿದ್ದಾರೆ. ಟಾಲಿವುಡ್‌ನ ಈ ವರ್ಷದ ಬಹುನಿರೀಕ್ಷಿತ ಸಿನಿಮಾ ‘ಪುಷ್ಪ-2’ ಡಿಸೆಂಬರ್ 5ಕ್ಕೆ ವಿಶ್ವದಾದ್ಯಂತ ತೆರೆಗೆ ಬರುತ್ತಿದೆ. ಸಿನಿಮಾದ ಐಟಂ ಹಾಡೊಂದಕ್ಕೆ ಶ್ರೀಲೀಲಾ ಹೆಜ್ಜೆ ಹಾಕಿದ್ದು, ಸಿನಿಮಾದ ಟ್ರೇಲರ್ ನ.17ರಂದು ಬಿಡುಗಡೆಯಾಗುತ್ತಿದೆ.

‘ಪುಷ್ಪ’ ಸಿನಿಮಾದ ಮೊದಲ ಅಧ್ಯಾಯದಲ್ಲಿ ‘ಹೂ ಅಂಟಾವಾ..’ ಹಾಡು ಹಿಟ್ ಆಗಿತ್ತು. ಸಮಂತಾ ಹಾಗೂ ಅಲ್ಲು ಅರ್ಜುನ್ ಈ ಹಾಡಿನಲ್ಲಿ ಹೆಜ್ಜೆ ಹಾಕಿದ್ದರು. ಡಿಎಸ್‌ಪಿ ಸಂಗೀತ ಮೋಡಿ ಮಾಡಿತ್ತು. ಇದೀಗ ‘ಪುಷ್ಪ’ ಸೀಕ್ವೆಲ್‌ನಲ್ಲಿ ಡ್ಯಾನ್ಸಿಂಗ್ ಕ್ವೀನ್ ಹೆಜ್ಜೆ ಹಾಕಿದ್ದಾರೆ. ಗಣೇಶ್ ಆಚಾರ್ಯ ನೃತ್ಯನಿರ್ದೇಶನ ಈ ಹಾಡಿಗಿದೆ. ಚಿತ್ರದಲ್ಲಿ ಅಲ್ಲು ಅರ್ಜುನ್‌ಗೆ ಜೋಡಿಯಾಗಿ ರಶ್ಮಿಕಾ ಮಂದಣ್ಣ ನಟಿಸಿದ್ದು, ಫಹಾದ್ ಫಾಸಿಲ್, ಧನಂಜಯ, ಅನಸೂಯ ಸೇರಿದಂತೆ ದೊಡ್ಡ ತಾರಾಗಣ ಚಿತ್ರದಲ್ಲಿದೆ.

‘ಲವ್ ರೆಡ್ಡಿ’ಗೆ ವಿಜಯ್ ಸಾಥ್

ವಿಜಯ್

ಹೊಸಬರೇ ಸೇರಿ ಮಾಡಿರುವ ನೈಜ ಘಟನೆ ಆಧಾರಿತ ಚಿತ್ರ ‘ಲವ್ ರೆಡ್ಡಿ’ ನ.22ರಂದು ಕನ್ನಡದಲ್ಲಿ ತೆರೆಗೆ ಬರುತ್ತಿದೆ. ನಟ ದುನಿಯಾ ವಿಜಯ್ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಕೋರಿದರು.

‘ಲವ್ ರೆಡ್ಡಿ ಸಿನಿಮಾ ನೋಡಿದ್ದೇನೆ. ಪ್ರತಿ ಪಾತ್ರಗಳು ಈಗಲೂ ನನಗೆ ಕಾಡುತ್ತಿವೆ. ಹೀಗಾಗಿ ತಂಡದ ಜೊತೆಗೆ ನಿಂತಿರುವೆ. ಕನ್ನಡದಲ್ಲಿ ಸಿನಿಮಾ ಪ್ರೆಸೆಂಟ್ ಮಾಡಲು ಒಪ್ಪಿಕೊಂಡೆ. ಹೊಂಬಾಳೆ ಸಂಸ್ಥೆ ಚಿತ್ರವನ್ನು ವಿತರಣೆ ಮಾಡುತ್ತಿದೆ. ಸಿನಿಮಾ ಚೆನ್ನಾಗಿಲ್ಲ ಎಂದರೆ ನಮ್ಮ ಸಿನಿಮಾ ಚೆನ್ನಾಗಿದೆ ಎಂದು ಹಠ ಮಾಡಬಾರದು. ಸಿನಿಮಾ ಚೆನ್ನಾಗಿದ್ದಾಗ ಹಿಗ್ಗೋದು ಬೇಡ. ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸೋಣ’ ಎಂದರು ವಿಜಯ್.

ಆಂಧ್ರ ಪ್ರದೇಶ ಹಾಗೂ ಕರ್ನಾಟಕದ ಗಡಿಭಾಗದಲ್ಲಿ ನಡೆದ ನೈಜ ಘಟನೆಯಾಧಾರಿತ ಸಿನಿಮಾಗೆ ಸ್ಮರಣ್ ರೆಡ್ಡಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಯುವ ನಟ ಅಂಜನ್ ರಾಮಚಂದ್ರಗೆ ಶ್ರಾವಣಿ ಜೋಡಿಯಾಗಿದ್ದಾರೆ. ಚಿತ್ರ ತೆಲುಗು ಮತ್ತು ಕನ್ನಡದಲ್ಲಿ ಚಿತ್ರೀಕರಣಗೊಂಡಿದ್ದು, ತೆಲುಗು ಆವೃತ್ತಿ ಈಗಾಗಲೇ ಬಿಡುಗಡೆಗೊಂಡಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ದುಃಖ ಮರೆಯಲು ಏನು ಮಾಡಬೇಕು?

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ | 68

ದುಃಖ ಮರೆಯಲು ಏನು ಮಾಡಬೇಕು? ನಾವು ಸಾಮಾನ್ಯರು ದುಃಖದಿಂದ ನಿದ್ದೆ ಬರಲಿಲ್ಲ ಎಂದು ನಿದ್ದೆ ಗುಳಿಗೆ ತಗೊಂಡು ಮಲಗುತ್ತೀವಿ. ಎಚ್ಚರಾದ ತಕ್ಷಣ ಮತ್ತೆ ದುಃಖ ಹಾಗೆಯೇ ಇರುತ್ತದೆ. ತುಂಬಾ ಮದ್ಯ ಕುಡಿಯೋರನ್ನು ಕೇಳಿ ‘ಯಾಕೆ ಕುಡೀತಿ’ ಅಂತ. ‘ದುಃಖ ಬಹಳ ಆಗ್ಯದೆ. ಅದಕ್ಕೆ ಕುಡೀತೀನಿ’ ಅಂತಾರ. ನಿಶೆ ಇಳಿದ ಮೇಲೆ ದುಃಖ ಕಿಸೆಯಲ್ಲೇ ಬಂದಿರ್ತದ.

ಹಳ್ಯಾಗ ಹೇಳ್ತಾರ, ‘ಜಾಗ ಬದಲಾಯಿಸು ಚಲೋ ಆಗ್ತದ’ ಅಂತಾರ. ಹಾಂಗಂತ ಟ್ರಿಪ್ಪಿಗೆ ಹೋಗ್ತಾರ. ಆದರೂ ಸಂಸಾರದ ತಾಪ ಕಡಿಮೆ ಆಗಲ್ಲ. ಜಾಗ ಬದಲಾದರೂ ಮನದಲ್ಲಿ ತಾಪ ಬದಲಾಗದು. ಸಾಮಾನ್ಯ ಮನುಷ್ಯ ದುಃಖವನ್ನು ಮರೆಯಲು ಪ್ರಯತ್ನ ಪಡ್ತಾನ. ಆದರೆ ಒಬ್ಬ ಜ್ಞಾನಿ ಅದನ್ನು ಬೇರು ಸಹಿತ ಕಳಕೋಬೇಕು ಅಂತ ಪ್ರಯತ್ನ ಪಡ್ತಾನ. ದುಃಖ ಇದೆ, ನೋವು ಇದೆ. ಹಾಗಾದರೆ ಅದಕ್ಕೊಂದು ಕಾರಣವೂ ಇರಬೇಕಲ್ಲ? ಕಾರಣ ಇದೆ ಎಂದ ಮೇಲೆ ಅದಕ್ಕೊಂದು ಪರಿಹಾರವೂ ಇರಬೇಕಲ್ಲ? ಅದಕ್ಕೆ ಶರಣರ, ಈ ದೇಶದ ದಾರ್ಶನಿಕರ ಸಂಶೋಧನೆ ಎಷ್ಟು ಅದ್ಭುತ! ವಿಷಯಗಳಿಂದ ನೀನು ದೂರವಾಗಬಹುದು, ಆದರೆ ವಿಷಯಗಳ ರಸ ನಿನ್ನ ಹೃದಯದಲ್ಲಿದ್ದು ತಾಪ ಕೊಡತ್ತೈತಿ. ಇದರಿಂದ ಹೇಗೆ ದೂರವಾಗಬಹುದು ಎಂದು ಅವರು ಸಂಶೋಧನೆ ಮಾಡಿದರು. ಶಬ್ದದಿಂದ ದೂರವಾಗಬಹುದು, ರೂಪದಿಂದ ದೂರವಾಗಬಹುದು, ಆದರೆ ವಿಷಯದ ನೆನಪು ಹೃದಯದಲ್ಲೇ ಇದ್ದು ತಾಪ ಕೊಡ್ತದಲ್ಲ ಇದರಿಂದ ದೂರವಾಗುವುದು ಹೇಗೆ? ನೆನಪು ಮರೆಯಾಗುವುದಕ್ಕೆ ಪರಮ ಶ್ರೇಷ್ಠವಾದದ್ದು ನೋಡು ಅಂದರು. ಯಾವುದು ಶ್ರೇಷ್ಠವಾದದ್ದು?

ಒಂದು ಹಳ್ಳಿಯಲ್ಲಿ ಒಬ್ಬ ಒಂದು ಆಕಳನ್ನು ಇನ್ನೊಬ್ಬರ ಮನೆಯಿಂದ ಖರೀದಿ ಮಾಡಿದ್ದ. ತಂದು ತನ್ನ ಮನೆಯ ಕೊಟ್ಟಿಗೆಯಲ್ಲಿ ಕಟ್ಟಿದ್ದ. ಆದರೆ, ಬೆಳಿಗ್ಗೆ ಅದನ್ನು ಮೇಯಲು ಬಿಟ್ಟರೆ ಅದು ಸಂಜೆ ವೇಳೆಗೆ ಮತ್ತೆ ಮಾರಾಟ ಮಾಡಿದವನ ಮನೆಗೇ ಹೋಗತ್ತೈತಿ. ಇವ ಹೋಗಿ ಕರಕೊಂಡು ಬಂದು ಮತ್ತೆ ತನ್ನ ಕೊಟ್ಟಿಗೆಯಲ್ಲಿ ಕಟ್ಟಿದರೂ ಮಾರನೇ ದಿನವೂ ಹಾಗೆಯೇ ಮಾಡತ್ತೈತಿ. ಆ ಮೇಲೆ ದಿನಾ ಅಲ್ಲದಿದ್ದರೂ ಆಗಾಗ ಅಲ್ಲಿಗೆ ಹೋಗತ್ತೈತಿ. ಅದು ಯಾವಾಗ ಅಲ್ಲಿಗೆ ಹೋಗುವುದನ್ನು ಬಿಡತ್ತೈತಿ ಅಂದರ ಈ ಕೊಟ್ಟಿಗೆಯಲ್ಲಿ ಒಂದು ಕರು ಹಾಕಿದ ನಂತರ ಅಲ್ಲಿಗೆ ಹೋಗುವುದನ್ನು ನಿಲ್ಲಿಸತ್ತೈತಿ. ಹಾಗೆಯೇ, ಮನುಷ್ಯನ ಹೃದಯದೊಳಗೆ ಜ್ಞಾನವೊಂದು ಕರು ಹಾಕಿದರೆ ವಿಷಯಗಳ ರಸದಿಂದ ಮನಸ್ಸು ಮುಕ್ತವಾಗತ್ತೈತಿ. ಜ್ಞಾನ ಅಂದರೆ ಅಂತರಂಗದ ಬೆಳಕು. ಸತ್ಯವನ್ನು ತೋರಿಸುವುದು. ಇರುವ ವಿಷಯವನ್ನು ಇದ್ದಂತೆ ತೋರಿಸುವುದು ಜ್ಞಾನ. ಅಂತಹ ಜ್ಞಾನ ನಮ್ಮ ಹೃದಯದಲ್ಲಿ ಇತ್ತು ಎಂದರೆ ಜಗತ್ತಿನ ಯಾವ ದುಃಖಗಳೂ ನಮಗೆ ಬಾಧಿಸುವುದಿಲ್ಲ.

ಭಾರತೀಯರು ಎಂದರೆ ಯಾರು? ಬೆಳಕನ್ನು, ಜನರನ್ನು ಪ್ರೀತಿಸುವ ಜನ ಇದ್ದಾರಲ್ಲ ಅವರು ಭಾರತೀಯರು. ಜ್ಞಾನವನ್ನು ಪ್ರೀತಿಸುವ ಜನರಿಗೆ ಭಾರತೀಯರು ಅಂತಾರೆ. ನಿಸರ್ಗ ಕೊಟ್ಟ ಈ ಜೀವನದಲ್ಲಿ ಸಂತೋಷ ಪೂರ್ಣ ಜೀವನವನ್ನು ಕಟ್ಟಿಕೊಳ್ಳುವ ಜ್ಞಾನ ಇಲ್ಲ ಅಂತಾದರೆ ಮನುಷ್ಯನನ್ನು ವಿಚಾರಪೂರ್ಣ ಪ್ರಾಣಿ ಅಂತ ಹೇಗೆ ಕರೆಯೋದು? ಸುಂದರವಾದ ಜೀವನವನ್ನು ಕಟ್ಟಿಕೊಳ್ಳುವ ಕಲೆ ಗೊತ್ತಿರಬೇಕು. ಗೊತ್ತಿಲ್ಲ ಎಂದರೆ ಈ ಬದುಕಿಗೆ ಏನರ್ಥ ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ನವೆಂಬರ್ 18, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ತೃತೀಯ ಗಂ. 18-57 ನಕ್ಷತ್ರ: ಮೃಗಶಿರ ಗಂ. 15-49 ಯೋಗ: ಸಿದ್ಧ ಗಂ. 17-22 ಕರಣ: ವಣಿಜ ಗಂ. 07-57, ವೃಶ್ಚಿಕ ಮಾಸದ 02 ನೇ ದಿನ, ಮಳೆನಕ್ಷತ್ರ: ವಿಶಾಖ 4.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-35 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 15 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 2, 4

ಮೇಷ: ದೂರ ಪ್ರಯಾಣ ಮಾಡುವ ಅನಿವಾರ್ಯತೆ ಬಂದಲ್ಲಿ ರಾಹುಕಾಲದ ನಂತರದಲ್ಲಿ ಪ್ರಯಾಣ ಬೆಳೆಸಿ. ಯೋಜನೆಗಳು ಕಾರ್ಯಗತಗೊಳ್ಳವುದರ ಬಗ್ಗೆ ಶನೈಶ್ಚರನಲ್ಲಿ ಪೂಜೆ ಪ್ರಾರ್ಥನೆ ನಡೆಸುವುದು ಉತ್ತಮ.

ವೃಷಭ: ನೂತನ ವ್ಯವಹಾರ ಪ್ರಾರಂಭದ ಬಗ್ಗೆ ತಿಳಿದವರಲ್ಲಿ ಸಲಹೆ ಪಡೆಯುವುದು ಸನ್ಮಾರ್ಗವನ್ನು ತೋರಿಸಿಕೊಡುತ್ತದೆ. ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕವಾಗಿ ಎಲ್ಲಾ ರೀತಿಯಲ್ಲಿ ಅನುಕೂಲ ಉಂಟಾಗುವುದು.

ಮಿಥುನ: ಆಸ್ತಿ ವಿಷಯಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಿಕೊಳ್ಳಲು ಹಿತೈಷಿಯೊಬ್ಬರ ನೆರವು ಪಡೆಯುವಿರಿ. ಪ್ರಾಮಾಣಿಕ ಅಧಿಕಾರಿಗಳಿಗೆ ಹಿರಿಯ ಅಧಿಕಾರಿಗಳಿಂದ ಕಿರುಕುಳ. ತಂಡ ನಿಭಾಯಿಸುವಲ್ಲಿ ಯಶಸ್ವಿಯಾಗುತ್ತೀರಿ.

ಕರ್ಕಾಟಕ: ಕೈತಪ್ಪಿ ಹೋಗಿದ್ದ ಕೆಲವು ಕೆಲಸಗಳು ಹಿರಿಯರೊಬ್ಬರ ಸಹಾಯದಿಂದ ಪುನಃ ದೊರೆಯಲಿದೆ. ಆಹಾರಪದಾರ್ಥಗಳ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ.

ಸಿಂಹ: ಸ್ನೇಹಿತರೊಂದಿಗೆ ಭೂಮಿ ಖರೀದಿಯ ಪ್ರಯತ್ನ ನಡೆಸುವುದು ನಷ್ಟವನ್ನು ತಪ್ಪಿಸುತ್ತದೆ. ತಂದೆ ತಾಯಿಯವರ ಕೋರಿಕೆಯಂತೆ ಮನೆಯಲ್ಲಿ ದೇವತಾಕಾರ್ಯಗಳನ್ನು ನಡೆಸುವಿರಿ. ಗುತ್ತಿಗೆ ಆಧಾರಿತ ಉದ್ಯೋಗ ಸಿಗಲಿದೆ.

ಕನ್ಯಾ: ಸಿಹಿಪದಾರ್ಥಗಳ ತಯಾರಕರಿಗೆ ಹೆಸರಾಂತ ಸಂಸ್ಥೆಯಲ್ಲಿ ಕೆಲಸ ಮಾಡುವ ಕಾಲ ಒದಗಿಬರಲಿದೆ. ಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಿವಾಹ ಯೋಗ ಕೂಡಿ ಬರುವುದು. ಹಣಕಾಸು ಪರಿಸ್ಥಿತಿಗಳು ಉತ್ತಮಗೊಳ್ಳುವುದು.

ತುಲಾ: ಮಾದರಿಯಾಗುವಂತೆ ಜೀವನ ನಡೆಸಬೇಕೆಂಬುವ ಆಸೆಗೆ ಪುಷ್ಟಿ ಕೊಡುವ ವಾತಾವರಣ ಸಿಗಲಿದೆ. ದೇವರ ದಯೆಯಿಂದ ಕುಟುಂಬದಲ್ಲಿ ಸಾಮರಸ್ಯ ಅಧಿಕವಾಗಿ ಇರುತ್ತದೆ. ಶಿರೋವೇದನೆ ಎದುರಾಗಬಹುದು.

ವೃಶ್ಚಿಕ: ಅನಿವಾರ್ಯ ಸಂದರ್ಭ ಉಂಟಾದ ಕಾರಣದಿಂದ ಭಾಗವಹಿದ ಕಾರ್ಯಕ್ರಮದಲ್ಲಿ ನಿಮಗೆ ಅನುಯಾಯಿಗಳು ದೊರೆಯುವರು. ಕುಟುಂಬದಲ್ಲಿ ಸಂತೋಷದ ವಾತಾವರಣ ಸೃಷ್ಟಿಯಾಗಲಿದೆ.

ಧನು: ಗುಪ್ತಚರ ಇಲಾಖೆ ಉದ್ಯೋಗಿಗಳಿಗೆ ಸರ್ಕಾರದಿಂದ ಪ್ರಶಸ್ತಿ, ಬಹುಮಾನ ದೊರೆಯಬಹುದು. ಮಿತವ್ಯಯ ಸಾಧಿಸಲು ಪ್ರಯತ್ನಿಸಿ. ಋಣಮುಕ್ತರಾಗಲು ಶ್ರಮಿಸಿ. ವರಿಷ್ಠ ಜನರ ಜತೆ ಸಂಪರ್ಕ ಬೆಳೆಯಲಿದೆ.

ಮಕರ: ಇನ್ನೊಬ್ಬರನ್ನು ಹೀಯಾಳಿಸುವ ಬುದ್ಧಿಗೆ ಪೂರ್ಣವಿರಾಮ ಹೇಳುವುದರಿಂದ ಅಭಿವೃದ್ಧಿ. ಸಹಕಾರಿ ರಂಗದಲ್ಲಿನ ವ್ಯಕ್ತಿಗಳಿಗೆ ಶುಭ ದಿನ. ಸಂತಾನದ ಸುದ್ದಿ ಆನಂದ ತರಲಿದೆ. ಮಹಾಗಣಪತಿಯನ್ನು ಆರಾಧಿಸಿ.

ಕುಂಭ: ಮಕ್ಕಳೊಂದಿಗೆ ವ್ಯವಹಾರದ ವಿಚಾರಗಳ ಬಗ್ಗೆ ಸುದೀರ್ಘ ಮಾತುಕತೆ ನಡೆಸುವುದರಿಂದ ನೆಮ್ಮದಿ ಪ್ರಾಪ್ತಿ. ಶ್ರಮದ ದುಡಿಮೆಗೆ ಉತ್ತಮ ಫಲ ದೊರಕುವುದು. ಆಧ್ಯಾತ್ಮಿಕ ವಿಚಾರಗಳತ್ತ ಗಮನ ಹರಿಸುವಿರಿ.

ಮೀನ: ಚಾಲಕ ವೃತ್ತಿಯವರಿಗೆ ಅಧಿಕ ಒತ್ತಡ ದೇಹಕ್ಕೆ ಆಯಾಸವನ್ನು ಮಾಡಲಿದೆ. ವಿವಾಹದ ವಿಚಾರದಲ್ಲಿ ಇನ್ನೊಮ್ಮೆ ಯೋಚಿಸಿ ತೀರ್ಮಾನಿಸಿರಿ. ವಿಪರೀತ ಪ್ರಸಂಗದಲ್ಲಿ ತಾಳ್ಮೆಯನ್ನು ಕಳೆದುಕೊಳ್ಳಬೇಡಿ.

ಪದಬಂಧ 5865

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆ ಟೋಪಿ ಧರಿಸಿದಾತನದು ಬಲು ಗರ್ವದ ಪ್ರದರ್ಶನ (3)
3.ಪಟಾಕಿ ಸಿಡಿಸುತ್ತಾ ಉಪಟಳ ನೀಡುತ್ತಿರುವ ದಂಡು (3)
5.ಲಾವಣಿ ಹೇಳುವವರು ಧರಿಸಿರುವ ಮೇಲುಹೊದಿಕೆ (3)
6.ಅವನ ಸರ ಧರಿಸಲು ಈ ಅರ್ಜೆಂಟು! (4)
8.ತಡವಾಗಿ ಬಂದು ಬಡಿಗೆ ತೋರಿಸಿದಾಗ ತಬ್ಬಿಬ್ಬು! (4)
10.ಅಂತರಿಕ್ಷದಲ್ಲಿ ಕಾಣದಂತೆ ಕಣ್ಮರೆಯಾಗುವುದು (4)
12.ಎರಡು ಮೂಲ ಬಣ್ಣಗಳ ಮಿಶ್ರಣದಿಂದಾದ ವರ್ಣ (4)
13.ಕ್ಷಾತ್ರ ಧರ್ಮಕ್ಕೆ ಸೇರಿರುವವನು (3)
16.ಅತ್ಯಲ್ಪ ಕಾಲದಲ್ಲಿಯೇ ನಾಶವಾಗುವಂಥದ್ದು (3)
17.ಲೀಲಾಜಾಲವಾಗಿ ನಡೆಸಿದ ಏಲಂ (3)

ಮೇಲಿಂದ ಕೆಳಕ್ಕೆ
1.ಹಳೆನಾಣ್ಯ ಹಿಡಿದು ಮಾಡಿರುವ ಪ್ರತಿಜ್ಞೆ (2)
2.ವಿಳಾಸ ಗುರುತಿಸಿದ ಶೋಧಕ (4)
3.ಪರಿಚಿತನಾದವನು ಭಾರೀ ನೈಪುಣ್ಯವುಳ್ಳವನು (4)
4.ಮಂಚ ಏರಲು ನೀಡಿರುವ ರುಷುವತ್ತು! (2)
7.ಚೈತ್ರ ವೈಶಾಖ ಮಾಸಗಳಲ್ಲಿ ಬರುವ ಋತು (3)
9.ಬಡಕಲು ಮೈಯುಳ್ಳ ಈತ ನಿರ್ಗತಿಕ! (3)
11.ಅತಿ ಉಪದ್ರವ ಕೊಡುತ್ತಾ ಬೆಂಬಿಡದೆ ಕಾಡುವವನು (4)
12.ಗೆಲುವನ್ನು ಗಳಿಸಿದವನು ಇಲ್ಲಿದ್ದಾನೆ (4)
14.ಪರೋಕ್ಷವಾಗಿ ಒರಟುತನ ತೋರಿಸುತ್ತಿರುವ ಕ್ರೂರಿ (2)
15.ಕಾದಾಡುವುದರಲ್ಲಿ ಏರಿರುವ ಬಿಸಿ ಗೊತ್ತಾಯಿತೇ? (2)



5864ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಬಳಸುಮಾತು
4.ಬಡಿವಾರ 6.ಅಂಗ
7.ಅವಿನಾಭಾವಸಂಬಂಧ
10.ಜಲಾನಯನಪ್ರದೇಶ 13.ಕಡ
14.ಮೃಗಜಲ 16.ಜಲತರಂಗ

ಮೇಲಿಂದ ಕೆಳಕ್ಕೆ:
1.ಮಂಡಿ 2.ಬರ 3.ತುರಗ
4.ಬಡವಿ 5.ಚಿಸಂ 6.ಅಂಧ
7.ಅಕ್ಕ 8.ವಲಯ 9.ಕೋಶ
10.ಜಡ 11.ನರ
12.ದೇಗುಲ 13.ಕಣಜ 14.ಮೃಗ
15.ಜಡೆ

ಸುಡೊಕು 6250

		4		7	1	2		3
	7					6		
5	2		8		9		4	7
		5	4			3		
	6			9			7	
3		7			8	5		9
4	1			8			3	
		2	7		4	9		1
7		9		3			2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6249 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

ವಿದೇಶಿ ಆದಾಯ ಘೋಷಿಸದಿದ್ದರೆ ₹10 ಲಕ್ಷ ದಂಡ

ನವದೆಹಲಿ (ಪಿಟಿಐ): ತೆರಿಗೆದಾರರು ವಿದೇಶದಲ್ಲಿ ಹೊಂದಿರುವ ಸ್ವತ್ತುಗಳು ಮತ್ತು ಆದಾಯದ ಬಗ್ಗೆ ಘೋಷಿಸಲು ವಿಫಲವಾದರೆ ಅಂತಹವರಿಗೆ ಕಪ್ಪುಹಣ ತಡೆ ಕಾಯ್ದೆಯಡಿ ₹10 ಲಕ್ಷ ದಂಡ ವಿಧಿಸಲಾಗುವುದು ಎಂದು ಆದಾಯ ತೆರಿಗೆ ಇಲಾಖೆ ಎಚ್ಚರಿಕೆ ನೀಡಿದೆ.

2024–25ನೇ ಮೌಲ್ಯಮಾಪನ ವರ್ಷದಲ್ಲಿ ಸಲ್ಲಿಸಿರುವ ಐಟಿಆರ್‌ಗಳಲ್ಲಿ ವಿದೇಶಿ ಸ್ವತ್ತು ಅಥವಾ ಆದಾಯ ಕುರಿತು ಘೋಷಣೆ ಮಾಡದಿರುವ ತೆರಿಗೆದಾರರಿಗೆ ಸಂದೇಶ ರವಾನಿಸಲು ಅಭಿಯಾನ ಆರಂಭಿಸಲಾಗಿದೆ. ಇದರ ಭಾಗವಾಗಿ ಇಲಾಖೆಯು ಸಾರ್ವಜನಿಕರಿಗೆ ತಿಳಿವಳಿಕೆ ನೀಡುವ ಮಾಹಿತಿ ಪ್ರಕಟಿಸಿದೆ.

ವಿದೇಶದಲ್ಲಿ ಬ್ಯಾಂಕ್ ಖಾತೆ, ವಿಮಾ ಒಪ್ಪಂದ, ಕಂಪನಿ ಅಥವಾ ವ್ಯವಹಾರದಲ್ಲಿನ ಬಡ್ಡಿ, ಸ್ಥಿರಾಸ್ತಿ, ಕಸ್ಟೋಡಿಯಲ್ ಖಾತೆ, ಟ್ರಸ್ಟಿ, ಷೇರು ಮತ್ತು ಸಾಲಪತ್ರಕ್ಕೆ ಅಧಿಕಾರ ಬಡ್ಡಿ ಇತ್ಯಾದಿಯನ್ನು ವಿದೇಶಿ ಸ್ವತ್ತು ಎಂದು ಪರಿಗಣಿಸಲಾಗುತ್ತದೆ ಎಂದು ಹೇಳಿದೆ.

2024–25ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ವಿಳಂಬ ಹಾಗೂ ಪರಿಷ್ಕೃತ ಐಟಿಆರ್ ಸಲ್ಲಿಕೆಗೆ ಡಿಸೆಂಬರ್ 31ರಂದು ಅಂತಿಮ ದಿನವಾಗಿದೆ.

ಶಿಕ್ಷಣಕ್ಕೆ ಎಂ.ಎಫ್ ಹೂಡಿಕೆ ಹೇಗೆ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಉಳಿತಾಯ- ಹೂಡಿಕೆ ಮಾಡುವುದು ಪ್ರತಿ ಪೋಷಕರ ಆದ್ಯತೆಯ ವಿಚಾರ. ಆದರೆ, ಎಲ್ಲಿ ಹೂಡಿಕೆ ಮಾಡಬೇಕು ಎನ್ನುವುದು ಅನೇಕರ ಪ್ರಶ್ನೆ. ಫಿಕ್ಸೆಡ್ ಡೆಪಾಸಿಟ್, ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್), ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ), ಎಂಡೋಮೆಂಟ್ ಪಾಲಿಸಿ, ಮನಿ ಬ್ಯಾಕ್ ಪಾಲಿಸಿಗಳಲ್ಲಿ ಹೂಡಿಕೆ ಮಾಡಿದರೆ ಹಣದುಬ್ಬರವನ್ನು ಮೀರಿ ಹೂಡಿಕೆ ಹಣ ಬೆಳೆಯುವುದಿಲ್ಲ.

ಷೇರು ಮಾರುಕಟ್ಟೆಯಲ್ಲಿ ಗಳಿಕೆಯ ಸಾಧ್ಯತೆ ಹೆಚ್ಚಿದೆಯಾದರೂ ಏರಿಳಿತದ ಅಪಾಯ ಕೂಡ ಅಷ್ಟೇ ಇರುತ್ತದೆ. ಆ ಬಗ್ಗೆ ಒಂದಷ್ಟು ತಿಳಿದವರಿಗಷ್ಟೇ ಅದು ಸರಿಹೊಂದುತ್ತದೆ. ಪರಿಸ್ಥಿತಿ ಹೀಗಿರುವಾಗ ಬಹುಪಾಲು ಜನರಿಗೆ ಮಕ್ಕಳ ಶಿಕ್ಷಣದ ಉದ್ದೇಶಕ್ಕಾಗಿ ಹೂಡಿಕೆ ಮಾಡಲು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಉತ್ತಮ ಆಯ್ಕೆಯಾಗಿವೆ.

ಮ್ಯೂಚುವಲ್ ಫಂಡ್ ಉತ್ತಮ ಆಯ್ಕೆ ಏಕೆ?: ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಹೂಡಿಕೆ ಮಾಡುವಾಗ ಬೆಲೆ ಏರಿಕೆ ಮೀರಿ ಗಳಿಕೆ ತಂದುಕೊಡುವ ಹೂಡಿಕೆ ಉತ್ಪನ್ನವನ್ನು ಆಯ್ಕೆ ಮಾಡಿಕೊಳ್ಳಬೇಕು. ಬೆಲೆ ಏರಿಕೆ ಮಿತಿ ದಾಟಿ ದೀರ್ಘಾವಧಿಯಲ್ಲಿ ಲಾಭ ತಂದುಕೊಡುವ ಹೂಡಿಕೆಗಳಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್ (ಎಂ.ಎಫ್) ಪ್ರಮುಖವಾದುದು.

ಈ ಫಂಡ್‌ಗಳಲ್ಲಿ ಹಣ ತೊಡಗಿಸಿದಾಗ ಷೇರು ಮಾರುಕಟ್ಟೆಯಲ್ಲಿರುವ ಹತ್ತಾರು ಉತ್ತಮ ಕಂಪನಿಗಳ ಮೇಲೆ ನಿಮ್ಮ ಹೂಡಿಕೆ ಮೊತ್ತ ಹಂಚಿಕೆಯಾಗುತ್ತದೆ. ಹಲವು ಕಂಪನಿಗಳ ಮೇಲೆ ಹೂಡಿಕೆ ಮೊತ್ತ ಹೋಗುವುದರಿಂದ ಹೂಡಿಕೆ ವೈವಿಧ್ಯ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಆ ಮೂಲಕ ಮಾರುಕಟ್ಟೆ ಏರಿಳಿತದ ಅಪಾಯವನ್ನು ನಿಭಾಯಿಸಬಹುದಾಗಿದೆ.

ದೀರ್ಘಾವಧಿಗೆ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ಹಾಕಿದಾಗ ವಾರ್ಷಿಕ ಸರಾಸರಿ ಶೇ 12ರಷ್ಟು ಗಳಿಕೆ ನಿರೀಕ್ಷಿಸಬಹುದಾಗಿದೆ. ಈ ಫಂಡ್‌ಗಳನ್ನು ವೃತ್ತಿಪರ ಫಂಡ್ ಮ್ಯಾನೇಜರ್‌ಗಳು ನಿಭಾಯಿಸುವುದರಿಂದ ಮಾರುಕಟ್ಟೆ ಏರಿಳಿತದ ಬಗ್ಗೆ ಹೂಡಿಕೆದಾರರು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಉತ್ತಮ ಫಂಡ್ ಆಯ್ಕೆ ಮಾಡಿಕೊಂಡು ಶಿಸ್ತುಬದ್ಧವಾಗಿ ಹೂಡಿಕೆ ಮಾಡುತ್ತಾ ಸಾಗಿದರೆ ಕ್ರಮೇಣ ಅದು ದೊಡ್ಡ ಮೊತ್ತವಾಗಿ ಬೆಳೆಯುತ್ತದೆ.

ಹೂಡಿಕೆ ಮಾಡುವುದು ಹೇಗೆ?: ಮಕ್ಕಳ ಭವಿಷ್ಯದ ಶಿಕ್ಷಣಕ್ಕಾಗಿ ಈಕ್ವಿಟಿ ಮ್ಯೂಚುವಲ್ ಫಂಡ್ ಆಯ್ಕೆ ಮಾಡಿಕೊಳ್ಳುವಾಗ ಎಸ್‌ಐಪಿ (ವ್ಯವಸ್ಥಿತ ಹೂಡಿಕೆ ಯೋಜನೆ) ಮತ್ತು ಲಂಪ್‌ಸಮ್ ಮಾದರಿಯಲ್ಲಿ ಹೂಡಿಕೆ ಸಾಧ್ಯವಿದೆ. ಎಸ್‌ಐಪಿ ಅಂದರೆ ಪ್ರತಿ ತಿಂಗಳು ನಿರ್ದಿಷ್ಟ ಮೊತ್ತವನ್ನು ನಿಗದಿತ ದಿನಾಂಕದಂದು ಹೂಡಿಕೆ ಮಾಡುತ್ತಾ ಸಾಗುವುದು. ಉದಾಹರಣೆಗೆ ಪ್ರತಿ ತಿಂಗಳ 5ರಂದು ₹10 ಸಾವಿರ ಹೂಡಿಕೆ ಮಾಡುವುದಾಗಿ ಎಸ್‌ಐಪಿ ಮಾಡಿದರೆ ಪ್ರತಿ ತಿಂಗಳು ಅಷ್ಟೇ ಮೊತ್ತ ನಿಮ್ಮ ಬ್ಯಾಂಕ್ ಅಕೌಂಟ್‌ನಿಂದ ಮ್ಯೂಚುವಲ್ ಫಂಡ್‌ಗೆ ಜಮಾವಣೆಯಾಗುತ್ತದೆ.

ನನ್ನ ಬಳಿ ₹50 ಸಾವಿರ, ₹1 ಲಕ್ಷದಂತಹ ದೊಡ್ಡ ಮೊತ್ತವಿದೆ. ಅದನ್ನು ಮಕ್ಕಳ ಶಿಕ್ಷಣಕ್ಕೆ ತೊಡಗಿಸಬೇಕು ಎಂದರೆ ಲಂಪ್‌ಸಮ್ ಹೂಡಿಕೆ ಮಾದರಿ ಅನುಸರಿಸಬಹುದು. ಆದರೆ, ಶಿಸ್ತುಬದ್ಧವಾಗಿ ಹೂಡಿಕೆ ಮಾಡಲು ಎಸ್‌ಐಪಿ ವಿಧಾನ ಒಳ್ಳೆಯ ಆಯ್ಕೆ. ಉದಾಹರಣೆಗೆ 10 ವರ್ಷಗಳ ಕಾಲ ಪ್ರತಿ ತಿಂಗಳು ₹15 ಸಾವಿರ ಹೂಡಿಕೆ ಮಾಡುತ್ತಾ ಸಾಗಿದರೆ ವಾರ್ಷಿಕ ಸರಾಸರಿ ಶೇ 12ರ ಗಳಿಕೆ ಲೆಕ್ಕಾಚಾರದಲ್ಲಿ ಅದು ₹34.85 ಲಕ್ಷವಾಗುತ್ತದೆ.

₹25 ಲಕ್ಷ ಗಳಿಸುವುದು ಹೇಗೆ?

ಮಗುವಿನ ವಯಸ್ಸು	ಎಸ್‌ಐಪಿ ಅವಧಿ	ಪ್ರತಿ ತಿಂಗಳ ಹೂಡಿಕೆ ಮೊತ್ತ	ಒಟ್ಟು ಮೌಲ್ಯ
1 ವರ್ಷ	15 ವರ್ಷ	₹5,000	₹25.22 ಲಕ್ಷ
6 ವರ್ಷ	10 ವರ್ಷ	₹10,800	₹25.09 ಲಕ್ಷ
8 ವರ್ಷ	8 ವರ್ಷ	₹15,500	₹25.03 ಲಕ್ಷ

(ಗಮನಿಸಿ: ಶೇ 12ರಷ್ಟು ಗಳಿಕೆ ಅಂದಾಜಿನಲ್ಲಿ ಇದನ್ನು ನೀಡಲಾಗಿದೆ. ನೀವು ಹೂಡಿಕೆ ಮಾಡುವಾಗ ಪ್ರಸ್ತುತ ಶಿಕ್ಷಣ ಕ್ಷೇತ್ರದ ಹಣದುಬ್ಬರ ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮ್ಯೂಚುವಲ್ ಫಂಡ್‌ಗಳು ಮಾರುಕಟ್ಟೆ ಆಧಾರಿತ ಹೂಡಿಕೆಗಳಾಗಿವೆ)

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಮತ್ತೆ ಕುಸಿದ ಷೇರು ಸೂಚ್ಯಂಕಗಳು

ಷೇರು ಸೂಚ್ಯಂಕಗಳು ಸತತ ಎರಡನೇ ವಾರವೂ ಕುಸಿತ ದಾಖಲಿಸಿವೆ. 77,580 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.47ರಷ್ಟು ತಗ್ಗಿದೆ. 23,532 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.75ರಷ್ಟು ಇಳಿಕೆಯಾಗಿದೆ.

ಕಂಪನಿಗಳ ಎರಡನೇ ತ್ರೈಮಾಸಿಕ ವರದಿಗಳಲ್ಲಿ ಅಸಾಧಾರಣ ಫಲಿತಾಂಶ ಬಾರದಿರುವುದು, ಡಾಲರ್ ಸೂಚ್ಯಂಕದತ್ತ ಹೂಡಿಕೆದಾರರು ಮುಖ ಮಾಡಿರುವುದು, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುತ್ತಿರುವುದು, ದೇಶೀಯ ರಿಟೇಲ್ ಹೂಡಿಕೆದಾರರು ಹೂಡಿಕೆಗೆ ಹಿಂಜರಿಯುತ್ತಿರುವುದು ಸೇರಿ ಹಲವು ಅಂಶಗಳು ಮಾರುಕಟ್ಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ.

ವಾರದ ಲೆಕ್ಕಾಚಾರ ನೋಡಿದಾಗ ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 0.81ರಷ್ಟು ಜಿಗಿತಕಂಡಿದೆ. ಇನ್ನುಳಿದ ಎಲ್ಲ ಪ್ರಮುಖ ಸೂಚ್ಯಂಕಗಳು ಕುಸಿತ ದಾಖಲಿಸಿವೆ. ನಿಫ್ಟಿ ಲೋಹ ಸೂಚ್ಯಂಕ ಶೇ 5.16, ಸರ್ಕಾರ ಸ್ವಾಮ್ಯದ ಬ್ಯಾಂಕ್ ಶೇ 5.15, ಎಫ್‌ಎಂಸಿಜಿ ಶೇ 4.42, ಆಟೊ ವಲಯ ಶೇ 3.74, ಅನಿಲ ಮತ್ತು ತೈಲ ಶೇ 3.72, ಎನರ್ಜಿ ಶೇ 3.53, ಫಾರ್ಮಾ ಶೇ 3.51, ಬ್ಯಾಂಕ್ ಶೇ 2.68, ಫೈನಾನ್ಸ್ ಶೇ 2.66, ರಿಯಲ್ ಎಸ್ಟೇಟ್ ಶೇ 2.14 ಮತ್ತು ಮಾಧ್ಯಮ ಸೂಚ್ಯಂಕ ಶೇ 1.85ರಷ್ಟು ಕುಸಿದಿವೆ.

ಇಳಿಕೆ-ಗಳಿಕೆ: ನಿಫ್ಟಿಯಲ್ಲಿ ಬ್ರಿಟಾನಿಯಾ ಇಂಡಸ್ಟ್ರೀಸ್ ಶೇ 13.61, ಏಷ್ಯನ್ ಪೇಂಟ್ಸ್ ಶೇ 12.67, ಟಾಟಾ ಸ್ಟೀಲ್ ಶೇ 8.55, ಎನ್‌ಟಿಪಿಸಿ ಶೇ 7.8, ಶ್ರೀರಾಮ್ ಫೈನಾನ್ಸ್ ಶೇ 7.77, ಅಪೋಲೊ ಹಾಸ್ಪಿಟಲ್ ಶೇ 7.43, ಅದಾನಿ ಪೋರ್ಟ್ಸ್ ಶೇ 6.52, ಎಸ್‌ಬಿಐ ಶೇ 6.42, ಭಾರತ್ ಎಲೆಕ್ಟ್ರಾನಿಕ್ಸ್ ಶೇ 6.38, ಕೋಲ್ ಇಂಡಿಯಾ ಶೇ 5.91, ಟಾಟಾ ಮೋಟರ್ಸ್ ಶೇ 5.56 ಮತ್ತು ಟಾಟಾ ಕನ್ಸ್ಯೂಮರ್ ಶೇ 5.53ರಷ್ಟು ಇಳಿದಿವೆ.

ಇನ್ಫೊಸಿಸ್ ಶೇ 3.53, ಟೈಟನ್ ಶೇ 2.26, ಟೆಕ್ ಮಹೀಂದ್ರ ಶೇ 2, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 1.55, ಐಷರ್ ಮೋಟರ್ಸ್ ಶೇ 0.53 ಮತ್ತು ವಿಪ್ರೊ ಶೇ 0.49ರಷ್ಟು ಹೆಚ್ಚಳವಾಗಿದೆ.

ಮುನ್ನೋಟ: ವಾರಿ ಎನರ್ಜೀಸ್, ಗೋದಾವರಿ ಬಯೊ ರಿಫೈನರೀಸ್, ಬ್ರಹ್ಮಪುತ್ರ ಇನ್ಫ್ರಾಸ್ಟ್ರಕ್ಚರ್, ಒರಿಸ್ಸಾ ಮಿನರಲ್ಸ್ ಡೆವಲಪ್‌ಮೆಂಟ್ ಕಂಪನಿ, ಸಹಸ್ರ ಎಲೆಕ್ಟ್ರಾನಿಕ್ ಸಲ್ಯೂಷನ್ಸ್ ಸೇರಿ ಕೆಲ ಕಂಪನಿಗಳು ಈ ವಾರ ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಮತ್ತು ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

‘ಸಕ್ಕರೆ ರಫ್ತಿಗೆ ಕೇಂದ್ರ ಅವಕಾಶ ನೀಡಲಿ’

ಪ್ರಜಾವಾಣಿ ವಾರ್ತೆ



ಆಲಮಟ್ಟಿ (ವಿಜಯಪುರ ಜಿಲ್ಲೆ): ‘ಸಕ್ಕರೆ ರಫ್ತಿಗೆ ಕೇಂದ್ರ ಸರ್ಕಾರ ಅನುಮತಿ ನೀಡದ ಕಾರಣ ದೇಶದಲ್ಲೇ ಸಕ್ಕರೆ ಮಾರಬೇಕಿದೆ. ರಫ್ತಿಗೆ ಅನುಮತಿ ದೊರೆತರೆ ರೈತರಿಗೆ ಪ್ರತಿ ಟನ್ ಕಬ್ಬಿಗೆ ಇನ್ನೂ ₹500 ಹೆಚ್ಚಿನ ದರ ಸಿಗಲಿದೆ’ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಬೇನಾಳ ಆರ್.ಎಸ್. ಗ್ರಾಮದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ‘ಜಗತ್ತಿನಲ್ಲೇ ಕಬ್ಬಿಗೆ ಅತಿಹೆಚ್ಚು ಬೆಲೆ ನೀಡುತ್ತಿರುವ ರಾಷ್ಟ್ರಗಳಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದೆ. ಪ್ರತಿ ಟನ್ ಕಬ್ಬಿಗೆ ₹3,400 ನೀಡಲಾಗುತ್ತಿದೆ’ ಎಂದರು.

‘ಎಥೆನಾಲ್ ಅನ್ನು ಸಕ್ಕರೆ ಕಾರ್ಖಾನೆಯಿಂದ ಲೀಟರ್‌ಗೆ ₹65 ಕೊಟ್ಟು ಖರೀದಿಸುವ ಕೇಂದ್ರ ಸರ್ಕಾರಿ ಸ್ವಾಮ್ಯದ ಪೆಟ್ರೋಲಿಯಂ ಕಂಪನಿಗಳು ಅದನ್ನು ₹95ಕ್ಕೆ ಮಾರುತ್ತವೆ. ಇದರಿಂದ ಒಂದು ಲೀಟರ್‌ಗೆ ₹30ರ ವರೆಗೆ ಸಕ್ಕರೆ ಕಾರ್ಖಾನೆಗೆ ಆರ್ಥಿಕ ನಷ್ಟ ಉಂಟಾಗುತ್ತದೆ. ಕೇಂದ್ರದ ಈ ಧೋರಣೆಯನ್ನು ಎಲ್ಲ ರೈತರು ಖಂಡಿಸಬೇಕು’ ಎಂದು ತಿಳಿಸಿದರು.

ದಾಳಿಂಬೆ ಬೆಲೆ ದಿಢೀರ್ ಕುಸಿತ

ದೇವನಹಳ್ಳಿ: ಕೆ.ಜಿಗೆ ₹50– ಬೆಳೆಗಾರರು ಕಂಗಾಲು

ಪ್ರಜಾವಾಣಿ ವಾರ್ತೆ

ವಿಜಯಪುರ (ದೇವನಹಳ್ಳಿ): ಕಳೆದ ಎರಡು ತಿಂಗಳ ಹಿಂದೆ ರೈತರ ತೋಟದಲ್ಲೇ ಕೆ.ಜಿಗೆ ₹150ರಿಂದ ₹220ಕ್ಕೆ ಖರೀದಿಯಾಗುತ್ತಿದ್ದ ದಾಳಿಂಬೆ ಬೆಲೆಯು ಏಕಾಏಕಿ ₹50ಕ್ಕೆ ಕುಸಿದಿದೆ. ಇದರಿಂದ ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ.

ನಾಲ್ಕು ತಿಂಗಳ ಹಿಂದೆ ದಾಳಿಂಬೆಗೆ ಬಂಪರ್ ಬೆಲೆ ಸಿಕ್ಕಿತ್ತು. ತೋಟದಲ್ಲೇ ಕೆ.ಜಿಗೆ ₹250ಕ್ಕೆ ಮಾರಾಟ ಆಗುತ್ತಿತ್ತು. ಎರಡು ತಿಂಗಳಿಂದ ಇಳಿಕೆಯ ಹಾದಿ ಹಿಡಿದಿದ್ದ ಬೆಲೆ ಮತ್ತೆ ಚೇತರಿಸಿಕೊಳ್ಳುತ್ತಿಲ್ಲ. ಈಗ ಕನಿಷ್ಠ ಬೆಲೆಗೆ ಬಂದು ನಿಂತಿದೆ ಎನ್ನುತ್ತಾರೆ ಬೆಳೆಗಾರರು.

> **ಸರ್ಕಾರವು ಈ ಭಾಗದಲ್ಲಿ ಶೀಥಲಗೃಹ ನಿರ್ಮಿಸಿದರೆ ಕಟಾವಿನ ನಂತರ ಹಣ್ಣು ಸಂಗ್ರಹಿಸಿಟ್ಟು, ಉತ್ತಮ ಬೆಲೆ ಬಂದಾಗ ಮಾರಾಟ ಮಾಡಲು ಅನುಕೂಲವಾಗಲಿದೆ**
> **ಕೃಷ್ಣಪ್ಪ,** ದಾಳಿಂಬೆ ಬೆಳೆಗಾರ, ವಿಜಯಪುರ

‘ತರಕಾರಿ, ದ್ರಾಕ್ಷಿ ಮತ್ತು ಇತರೆ ಹಣ್ಣುಗಳಿಗೆ ಸೂಕ್ತ ಮಾರುಕಟ್ಟೆ ಇಲ್ಲ. ಬೇಗ ಹಾಳಾಗುವ ಕಾರಣ ದಾಳಿಂಬೆ ಬೆಳೆಯಲು ಆರಂಭಿಸಿದೆವು. ಈಗ ನೋಡಿದರೆ ದಾಳಿಂಬೆ ಖರೀದಿಗೆ ತೋಟಕ್ಕೆ ಬರುವ ವರ್ತಕರು ಕೆ.ಜಿಗೆ ₹50 ಕೇಳುತ್ತಿದ್ದಾರೆ. ಈ ಬೆಲೆಗೆ ನೀಡಿದರೆ ಹಾಕಿದ ಬಂಡವಾಳದಲ್ಲಿ ಶೇ 50ರಷ್ಟು ನಮ್ಮ ಕೈ ಸೇರುವುದಿಲ್ಲ. ಬೆಲೆ ಸಿಗುತ್ತಿಲ್ಲ ಎಂದು ಹಾಗೇ ಬಿಟ್ಟರೆ ತೋಟದಲ್ಲೇ ಹಣ್ಣು ಕೊಳೆಯುತ್ತದೆ’ ಎಂದು ಅಳಲು ತೋಡಿಕೊಳ್ಳುತ್ತಾರೆ.

ವ್ಯಾಪಾರಿಗಳು ತೋಟಗಳಿಗೆ ಬಂದು ರೈತರನ್ನು ಕಾಡಿಬೇಡಿ ಕೇಳಿದಷ್ಟು ಬೆಲೆ ನೀಡಿ ಕಟಾವು ಮಾಡಿಕೊಂಡು ಹೋಗುತ್ತಿದ್ದರು. ಈಗ ನಮ್ಮನ್ನು ಕೇಳುವವರೇ ಇಲ್ಲದಂತಾಗಿದೆ. ಕಟಾವು ಮಾಡಿಕೊಂಡು ಹೋದ ದಾಳಿಂಬೆಯು ಮಾರಾಟವಾದ ಬಳಿಕ ಹಣ ಕೊಡುವುದಾಗಿ ಹೇಳುತ್ತಾರೆ. ಅವರ ಷರತ್ತಿಗೆ ಒಪ್ಪಿದರೆ ಮಾತ್ರ ಕಟಾವಿಗೆ ಬರುತ್ತಾರೆ. ನಷ್ಟವಾದರೂ ಅನಿವಾರ್ಯವಾಗಿ ಅವರು ಕೇಳಿದ ಬೆಲೆಗೆ ಮಾರಾಟ ಮಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ಬೆಳೆಗಾರ ಬಸವರಾಜ ಹೇಳಿದರು.

ದೇವನಹಳ್ಳಿ ತಾಲ್ಲೂಕಿನಲ್ಲಿ 480 ಹೆಕ್ಟೇರ್‌ನಲ್ಲಿ ದಾಳಿಂಬೆ ಬೆಳೆಯಲಾಗಿದೆ. ನಿರೀಕ್ಷೆ ಮೀರಿ ಫಸಲು ಬಂದಿರುವುದೇ ದರ ಕುಸಿಯಲು ಕಾರಣ ಎನ್ನುತ್ತಾರೆ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು.

ದೇಶದಲ್ಲಿ ಸರಾಸರಿ ಬೆಲೆ ಕೆ.ಜಿಗೆ ₹52.35

ಟೊಮೆಟೊ ದರ ಇಳಿಕೆ

ನವದೆಹಲಿ (ಪಿಟಿಐ): ಮಾರುಕಟ್ಟೆಗೆ ಟೊಮೆಟೊ ಪೂರೈಕೆಯಲ್ಲಿ ಹೆಚ್ಚಳವಾಗಿದ್ದು, ಚಿಲ್ಲರೆ ದರದಲ್ಲಿ ಶೇ 22.4ರಷ್ಟು ಇಳಿಕೆಯಾಗಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ಭಾನುವಾರ ತಿಳಿಸಿದೆ.

ಅಕ್ಟೋಬರ್ 14ರಂದು ದೇಶದ ಸರಾಸರಿ ದರ ಕೆ.ಜಿಗೆ ₹67.50 ಇತ್ತು. ನವೆಂಬರ್ 14ರಂದು ₹52.35ಕ್ಕೆ ಇಳಿಕೆಯಾಗಿದೆ ಎಂದು ಹೇಳಿದೆ.

ಇದೇ ಅವಧಿಯಲ್ಲಿ ದೆಹಲಿಯ ಆಜಾದ್‌ಪುರ ಮಾರುಕಟ್ಟೆಯಲ್ಲಿ ಮಾದರಿ ದರವು ಪ್ರತಿ ಕ್ವಿಂಟಲ್‌ಗೆ ₹5,883ರಿಂದ ₹2,969ಕ್ಕೆ ಇಳಿಕೆಯಾಗಿದೆ. ಒಟ್ಟಾರೆ ಶೇ 50ರಷ್ಟು ದರ ಕಡಿಮೆಯಾಗಿದೆ ಎಂದು ತಿಳಿಸಿದೆ.

ದೇಶದ ಪ್ರಮುಖ ಟೊಮೆಟೊ ಮಾರುಕಟ್ಟೆಗಳಾದ ಮಹಾರಾಷ್ಟ್ರದ ಪಿಂಪಲಗಾಂವ್, ಆಂಧ್ರಪ್ರದೇಶದ ಮದನಪಲ್ಲಿ ಹಾಗೂ ಕರ್ನಾಟಕದ ಕೋಲಾರದಲ್ಲೂ ಇಷ್ಟೇ ದರವಿದೆ ಎಂದು ಸಚಿವಾಲಯ ತಿಳಿಸಿದೆ.

ಮದನಪಲ್ಲಿ ಮತ್ತು ಕೋಲಾರದಿಂದ ಟೊಮೆಟೊ ಪೂರೈಕೆಯಲ್ಲಿ ಕಡಿಮೆಯಾಗಿದೆ. ಆದರೆ ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಗುಜರಾತ್‌ನಲ್ಲಿ ಟೊಮೆಟೊ ಕೊಯ್ಲು ಆರಂಭವಾಗಿದೆ. ಈ ರಾಜ್ಯಗಳಿಂದ ಸರಬರಾಜಾಗುತ್ತಿರುವ ಸರಕು, ದೇಶದಾದ್ಯಂತ ಪೂರೈಕೆಯಲ್ಲಿ ಎದುರಾಗಿದ್ದ ಕೊರತೆಯನ್ನು ನೀಗಿಸಿದೆ. ಹಾಗಾಗಿ, ಧಾರಣೆ ಕಡಿಮೆಯಾಗಿದೆ ಎಂದು ವಿವರಿಸಿದೆ.

ಅಲ್ಲದೆ, ಉತ್ತಮ ಹವಾಮಾನ ಪರಿಸ್ಥಿತಿಯು ಟೊಮೆಟೊ ಬೆಳೆ ಹಾಗೂ ಪೂರೈಕೆ ಸರಪಳಿಗೆ ನೆರವಾಗಿದೆ. ರೈತರ ಜಮೀನಿನಿಂದ ಗ್ರಾಹಕರ ಮನೆ ಬಾಗಿಲಿಗೆ ಉತ್ಪನ್ನವು ಸರಾಗವಾಗಿ ತಲುಪುತ್ತಿದೆ ಎಂದು ಹೇಳಿದೆ.

ದೇಶದ ವಿವಿಧೆಡೆ ಟೊಮೆಟೊವನ್ನು ವರ್ಷಪೂರ್ತಿ ಬೆಳೆಯಲಾಗುತ್ತದೆ. ಆದರೆ, ಟೊಮೆಟೊ ಬಹುಬೇಗ ಕೊಳೆತುಹೋಗುವ ಗುಣ ಹೊಂದಿದೆ. ಪ್ರತಿಕೂಲ ಹವಾಮಾನ ಹಾಗೂ ಪೂರೈಕೆಯಲ್ಲಿನ ವ್ಯತ್ಯಯವು ಬೆಲೆಯ ಮೇಲೆ ಪರಿಣಾಮ ಬೀರಲಿದೆ ಎಂದು ತಿಳಿಸಿದೆ.

ಅಕ್ಟೋಬರ್‌ನಲ್ಲಿ ಕರ್ನಾಟಕ ಹಾಗೂ ಆಂಧ್ರಪ್ರದೇಶದಲ್ಲಿ ಭಾರಿ ಮಳೆ ಸುರಿದಿತ್ತು. ಇದರಿಂದ ಸಾವಿರಾರು ಹೆಕ್ಟೇರ್‌ನಲ್ಲಿ ಬೆಳೆದಿದ್ದ ಟೊಮೆಟೊ ಬೆಳೆಯ ಹಾನಿಗೀಡಾಗಿತ್ತು ಎಂದು ಹೇಳಿದೆ.

ಅತಿಹೆಚ್ಚು ಟೊಮೆಟೊ ಉತ್ಪಾದಿಸುವ ರಾಜ್ಯಗಳಲ್ಲಿ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಟೊಮೆಟೊ ಸಸಿ ನಾಟಿ ಮಾಡಲಾಗುತ್ತದೆ ಎಂದು ವಿವರಿಸಿದೆ.

2023–24ರಲ್ಲಿ ದೇಶದಲ್ಲಿ ಒಟ್ಟು 213.20 ಲಕ್ಷ ಟನ್ ಟೊಮೆಟೊ ಉತ್ಪಾದನೆಯಾಗಲಿದೆ ಎಂದು ಸರ್ಕಾರ ಅಂದಾಜಿಸಿತ್ತು.

ರಿಲಯನ್ಸ್ ಕಂಪನಿಗೆ ‘ಜಿಯೊಹಾಟ್‌ಸ್ಟಾರ್’ ಡೊಮೈನ್ ನೀಡಿದ ಚಿಣ್ಣರು

ನವದೆಹಲಿ (ಪಿಟಿಐ): ‘ಜಿಯೊಹಾಟ್‌ಸ್ಟಾರ್ ಡಾಟ್ ಕಾಮ್’ ಡೊಮೈನ್ ಅನ್ನು ಅದರ ಮಾಲೀಕರಾದ ದುಬೈ ಮೂಲದ ಜೈನಮ್ ಮತ್ತು ಜೀವಿಕಾ ಅವರು, ರಿಲಯನ್ಸ್ ಕಂಪನಿಗೆ ಉಚಿತವಾಗಿ ನೀಡಲು ನಿರ್ಧರಿಸಿದ್ದಾರೆ.

ಕಳೆದ ವರ್ಷ ದೆಹಲಿ ಮೂಲದ ವಿದ್ಯಾರ್ಥಿಯೊಬ್ಬ ಈ ಡೊಮೈನ್ ಅನ್ನು ನೋಂದಾಯಿಸಿಕೊಂಡಿದ್ದ. ತನ್ನ ಉನ್ನತ ಶಿಕ್ಷಣಕ್ಕೆ ಹಣದ ಅವಶ್ಯಕತೆ ಇದ್ದುದ್ದರಿಂದ ಇದರ ಮಾಲೀಕತ್ವವನ್ನು ಈ ಚಿಣ್ಣರಿಗೆ ಮಾರಾಟ ಮಾಡಿದ್ದ ಎಂದು ಹೇಳಲಾಗಿದೆ.

ಜಿಯೊ ಸಿನಿಮಾ ಮತ್ತು ಡಿಸ್ನಿ ಪ್ಲಸ್ ಹಾಟ್‌ಸ್ಟಾರ್ ಒಗ್ಗೂಡಿದ ಬಳಿಕ ರಿಲಯನ್ಸ್‌ಗೆ ಡೊಮೈನ್ ಸಮಸ್ಯೆ ತಲೆದೋರಿತ್ತು.

‘ರಿಲಯನ್ಸ್ ಇಂಡಸ್ಟ್ರೀಸ್‌ನ ಕಾನೂನು ಸಲಹೆಗಾರರ ತಂಡ ನಮ್ಮನ್ನು ಭೇಟಿಯಾಗಿದೆ. ಸೇವಾ ಮನೋಭಾವದಿಂದ ಮಾಲೀಕತ್ವವನ್ನು ರಿಲಯನ್ಸ್‌ಗೆ ಉಚಿತವಾಗಿ ಬಿಟ್ಟು ಕೊಡಲಾಗುವುದು. ಈ ಕುರಿತ ಒಪ್ಪಂದಕ್ಕೆ ಸಹಿ ಹಾಕಲು ಶೀಘ್ರವೇ ಮುಂಬೈಗೆ ಬರಲಿದ್ದೇವೆ. ಮಾಲೀಕತ್ವ ವರ್ಗಾವಣೆಗಾಗಿ ನಮ್ಮ ಮೇಲೆ ಯಾರು ಒತ್ತಡ ಹೇರಿಲ್ಲ’ ಎಂದು ಜೈನಮ್ ಮತ್ತು ಜೀವಿಕಾ ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹428-608
ದ್ವಿತಳಿ (ಬಿ.ವಿ)	₹455-741

ಸಿಎನ್‌ಜಿ ದರ ಏರಿಕೆಗೆ ಕಂಪನಿಗಳ ಇಂಗಿತ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ದೇಶೀಯವಾಗಿ ಉತ್ಪಾದಿಸುವ ನೈಸರ್ಗಿಕ ಅನಿಲ ಪೂರೈಕೆಯಲ್ಲಿ ಕಡಿತಗೊಳಿಸಿರುವ ಬೆನ್ನಲ್ಲೇ, ನಗರ ಪ್ರದೇಶಗಳಿಗೆ ಅನಿಲ ಪೂರೈಸುವ ಇಂದ್ರಪ್ರಸ್ಥ ಗ್ಯಾಸ್ ಕಂಪನಿ ಮತ್ತು ಅದಾನಿ ಟೋಟಲ್ ಗ್ಯಾಸ್ ಕಂಪನಿಯು, ಸಾಂದ್ರಿಕೃತ ನೈಸರ್ಗಿಕ ಅನಿಲದ (ಸಿಎನ್‌ಜಿ) ದರ ಹೆಚ್ಚಿಸುವ ಸುಳಿವು ನೀಡಿವೆ.

ಇದಕ್ಕೆ ಪ್ರತಿಕ್ರಿಯಿಸಿರುವ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ, ಸರ್ಕಾರವು ಕಂಪನಿಗಳ ಲಾಭದ ವಿರುದ್ಧವಿಲ್ಲ. ಆದರೆ, ಸಿಎನ್‌ಜಿ ತಯಾರಿಕೆಗೆ ಆಗುವ ವೆಚ್ಚದ ವಿವರವನ್ನು ಕಂಪನಿಗಳು ಘೋಷಿಸಬೇಕಿದೆ ಎಂದು ಹೇಳಿದೆ.

ಸರ್ಕಾರವು ನವೆಂಬರ್ 16ರಂದು ಕಡಿಮೆ ಬೆಲೆಯಲ್ಲಿ ನಗರ ಪ್ರದೇಶದ ಸಗಟುದಾರರಿಗೆ ನೀಡುತ್ತಿದ್ದ ನೈಸರ್ಗಿಕ ಅನಿಲ ಪೂರೈಕೆಯಲ್ಲಿ ಶೇ 20ರಷ್ಟನ್ನು ಕಡಿತಗೊಳಿಸಿತ್ತು. ಅಕ್ಟೋಬರ್ 20ರಂದು ಶೇ 21ರಷ್ಟು ಕಡಿತಗೊಳಿಸಿದೆ.

ಇಂದ್ರಪ್ರಸ್ಥ ಕಂಪನಿಯು ದೆಹಲಿ ಹಾಗೂ ಸುತ್ತಮುತ್ತಲಿನ ನಗರಗಳಿಗೆ ಸಿಎನ್‌ಜಿ ಪೂರೈಸುತ್ತದೆ. ಮಹಾನಗರ ಗ್ಯಾಸ್ ಕಂಪನಿಯು ಮುಂಬೈನಲ್ಲಿ ಸರಬರಾಜು ಮಾಡುತ್ತದೆ. ಅದಾನಿ ಕಂಪನಿಯು ಗುಜರಾತ್ ಸೇರಿ ದೇಶದ ವಿವಿಧೆಡೆ ಕಾರ್ಯಾಚರಣೆ ನಡೆಸುತ್ತದೆ.

ಸ ಗ ಟು ದಾ ರ ರ ಸಿಎನ್‌ಜಿ ಉತ್ಪಾದನಾ ವೆಚ್ಚ ಮತ್ತು ಮಾರಾಟ ಬೆಲೆಯಲ್ಲಿ ಭಾರಿ ವ್ಯತ್ಯಾಸವಿದೆ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

2023–24ನೇ ಆರ್ಥಿಕ ವರ್ಷದಲ್ಲಿ ಇಂದ್ರಪ್ರಸ್ಥ ಕಂಪನಿಯು ₹16 ಸಾವಿರ ಕೋಟಿ ವರಮಾನಗಳಿಸಿದೆ. ಒಟ್ಟಾರೆ ₹1,748 ಕೋಟಿ ನಿವ್ವಳ ಲಾಭ ಗಳಿಸಿದೆ. ಲಾಭ ಮತ್ತು ವರಮಾನದ ನಡುವಿನ ಅನುಪಾತ ಶೇ 11ರಷ್ಟಿದೆ. ಚಿಲ್ಲರೆ ಮಾರಾಟಗಾರರು ಇಷ್ಟು ಲಾಭ ಪಡೆಯಲು ಸಾಧ್ಯವೇ? ಎಂದು ಹಿರಿಯ ಅಧಿಕಾರಿಯೊಬ್ಬರು ಪ್ರಶ್ನಿಸಿದ್ದಾರೆ.

ಭಾರತೀಯ ತೈಲ ಕಂಪನಿಗಳು ಕೂಡ ಸಗಟು ದರದಲ್ಲಿ ತೈಲ ಪೂರೈಕೆ ಮಾಡುತ್ತವೆ. ಇದೇ ಅವಧಿಯಲ್ಲಿ ಈ ಕಂಪನಿಗಳ ವರಮಾನ ₹8.71 ಲಕ್ಷ ಕೋಟಿ ಆಗಿದ್ದು, ಒಟ್ಟು ₹39,617 ಕೋಟಿ ನಿವ್ವಳ ಲಾಭಗಳಿಸಿವೆ. ಲಾಭ ಮತ್ತು ವರಮಾನದ ನಡುವಿನ ಅನುಪಾತ ಶೇ 4.5ರಷ್ಟಿದೆ ಎಂದು ಹೇಳಿದ್ದಾರೆ.

ನೇಮಕ ಕಾರ್ಯಕ್ಕೆ ವಿರಾಮ: ಸ್ಪರ್ಧೆ ವೀಕ್ಷಿಸಿದ ಟ್ರಂಪ್

ಪಾಮ್ ಬೀಚ್ (ಎ.ಪಿ): ಆಯಕಟ್ಟಿನ ಸ್ಥಳಗಳಿಗೆ ಆಪ್ತರನ್ನು ನೇಮಿಸುವ ಪ್ರಕ್ರಿಯೆಗೆ ಶನಿವಾರ ವಿರಾಮ ನೀಡಿದ ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಯುಎಫ್‌ಸಿ ಹೆವಿವೇಟ್ ಚಾಂಪಿಯನ್‌ಷಿಪ್ ಹಣಾಹಣಿ ವೀಕ್ಷಿಸಿದರು.

ಮ್ಯಾಡಿಸನ್ ಸ್ಕ್ವೇರ್‌ನಲ್ಲಿ ಶನಿವಾರ ರಾತ್ರಿ ಸ್ಪರ್ಧೆ ನಡೆಯಿತು. ಮೂರನೇ ಹೆವಿವೇಟ್ ಚಾಂಪಿಯನ್‌ಷಿಪ್ ಮೇಲೆ ಕಣ್ಣಿಟ್ಟಿರುವ ಸ್ಟೈಪ್ ಮಿಯೊಕಿಕ್ ಅವರು ಹಾಲಿ ಚಾಂಪಿಯನ್ ಜಾನ್ ಜೋನ್ಸ್ ವಿರುದ್ಧ ಯುಎಫ್‌ಸಿ 309 ಸ್ಪರ್ಧೆಯಲ್ಲಿ ಮುಖಾಮುಖಿಯಾದರು.

ಇಂಧನ ಕಾರ್ಯದರ್ಶಿಯಾಗಿ ಕ್ರಿಸ್ ರೈಟ್ ನೇಮಕ- ವಾಷಿಂಗ್ಟನ್ (ಎ.ಪಿ): ಇಂಧನ ಕಾರ್ಯದರ್ಶಿ ಸ್ಥಾನಕ್ಕೆ ಕ್ರಿಸ್ ರೈಟ್ ಅವರನ್ನು ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಯ್ಕೆ ಮಾಡಿದ್ದಾರೆ. ಟ್ರಂಪ್ ಅವರ ಪ್ರಚಾರ ಕಾರ್ಯಕ್ರಮಗಳಿಗೆ ಆರ್ಥಿಕ ನೆರವು ನೀಡಿದ್ದ ರೈಟ್ ಲಿಬರ್ಟಿ ಎನರ್ಜಿ ಸಂಸ್ಥೆಯ ಸಿಇಒ ಆಗಿದ್ದಾರೆ.

ಹೈಪರ್‌ಸಾನಿಕ್ ಕ್ಷಿಪಣಿ ಪ್ರಯೋಗ ಯಶಸ್ವಿ

ಒಂದನೇ ಪುಟದಿಂದ...

ಇದು 1,500 ಕಿ.ಮೀ.ಗೂ ಹೆಚ್ಚು ದೂರ ವಿವಿಧ ರೀತಿಯ ಹಲವು ಶಸ್ತ್ರಾಸ್ತ್ರ ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ ಎಂದು ಅಧಿಕಾರಿಗಳು ತಿಳಿಸಿದರು.

ಹೈಪರ್‌ಸಾನಿಕ್ ಕ್ಷಿಪಣಿಗಳು ಸಾಂಪ್ರದಾಯಿಕ ಶಸ್ತ್ರಾಸ್ತ್ರ ಮತ್ತು ಅಣ್ವಸ್ತ್ರಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿವೆ. ಶಬ್ದದ ವೇಗದ ಐದು ಪಟ್ಟು ವೇಗದಲ್ಲಿ ಈ ಕ್ಷಿಪಣಿ ಸಾಗುತ್ತದೆ (ತಾಸಿಗೆ 1,220 ಕಿ.ಮೀ). ಇದರ ಮೂರು ಪಟ್ಟು ವೇಗದಲ್ಲಿ ಸಾಗುವ ಕ್ಷಿಪಣಿಗಳನ್ನು ಚೀನಾ ಮತ್ತು ರಷ್ಯಾ ಅಭಿವೃದ್ಧಿಪಡಿಸಿವೆ. ಅಮೆರಿಕ ಇಂತಹ ಕ್ಷಿಪಣಿ ಅಭಿವೃದ್ಧಿಪಡಿಸಲು ಪ್ರಯತ್ನಿಸುತ್ತಿದೆ.

ಹೈದರಾಬಾದ್‌ನ ಡಾ.ಎಪಿಜೆ ಅಬ್ದುಲ್ ಕಲಾಂ ಕ್ಷಿಪಣಿ ಸಂಕೀರ್ಣದಲ್ಲಿರುವ ಪ್ರಯೋಗಾಲಯ ಮತ್ತು ಡಿಆರ್‌ಡಿಒದ ಇತರ ಹಲವು ಪ್ರಯೋಗಾಲಯಗಳು ಹಾಗೂ ಕೆಲವು ಕೈಗಾರಿಕಾ ಪಾಲುದಾರರ ಜೊತೆಗೂಡಿ ದೇಶೀಯವಾಗಿ ಈ ಕ್ಷಿಪಣಿಯನ್ನು ಅಭಿವೃದ್ಧಿಪಡಿಸಲಾಗಿದೆ.

ಸಚಿವರ ಶ್ಲಾಘನೆ

ಈ ಅದ್ಭುತ ಸಾಧನೆಗೆ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ), ಸಶಸ್ತ್ರ ಪಡೆಗಳು ಮತ್ತು ಎಲ್ಲರನ್ನೂ ರಾಜನಾಥ್ ಸಿಂಗ್ ಶ್ಲಾಘಿಸಿದ್ದಾರೆ.

ಕ್ಷಿಪಣಿ ಉಡಾಯಿಸಿದ ಬಳಿಕ ವಿವಿಧೆಡೆ ನಿಯೋಜಿಸಲಾದ ರೇಂಜ್ ಸಿಸ್ಟಂಗಳ ಮೂಲಕ ಅದನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ. ಹಾರಾಟದ ದತ್ತಾಂಶಗಳನ್ನು ಡೌನ್‌ರೇಂಜ್ ಶಿಪ್ ಸ್ಟೇಷನ್‌ಗಳ ಮೂಲಕ ಸಂಗ್ರಹಿಸಲಾಗಿದ್ದು, ನಿಖರತೆ ಮತ್ತು ಪೂರ್ವಯೋಜನೆಯಂತೆಯೇ ವಿವಿಧ ಚಲನೆಗಳು ಯಶಸ್ವಿಯಾಗಿ ನಡೆದಿವೆ ಎಂದು ದೃಢಪಡಿಸಲಾಗಿದೆ.

ಉಡ್ಡಯನದ ವೇಳೆ ಡಿಆರ್‌ಡಿಒದ ಹಿರಿಯ ವಿಜ್ಞಾನಿಗಳು ಮತ್ತು ಸೇನಾಪಡೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಗಾಜಾ: ಇಸ್ರೇಲ್ ದಾಳಿಗೆ 12 ಸಾವು

ಟೆಲ್ ಅವೀವ್ (ಎಪಿ): ಗಾಜಾಪಟ್ಟಿಯ ಮೇಲೆ ಇಸ್ರೇಲ್ ಪಡೆಗಳು ಭಾನುವಾರ ನಡೆಸಿದ ದಾಳಿಯಲ್ಲಿ ಸುಮಾರು 12 ಜನರು ಮೃತಪಟ್ಟಿದ್ದಾರೆ ಎಂದು ಪ್ಯಾಲೆಸ್ಟೀನ್‌ನ ವೈದ್ಯಕೀಯ ಅಧಿಕಾರಿಗಳು ತಿಳಿಸಿದ್ದಾರೆ.

ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಗಾಜಾ ಪಟ್ಟಿಯ ನಸೀರತ್ ನಿರಾಶ್ರಿತರ ಶಿಬಿರದಲ್ಲಿ ಆರು ಮಂದಿ, ಬುರೇಜ್ ನಿರಾಶ್ರಿತರ ಶಿಬಿರದಲ್ಲಿ ನಾಲ್ವರು ಮತ್ತು ಗಾಜಾದ ಉತ್ತರ–ದಕ್ಷಿಣ ಹೆದ್ದಾರಿಯಲ್ಲಿ ನಡೆದ ದಾಳಿಯೊಂದರಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಡೀರ್ ಅಲ್‌-ಬಲಾಹ್‌ನಲ್ಲಿರುವ ಅಲ್-ಅಕ್ಸಾ ಹುತಾತ್ಮರ ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಧಾನಿ ನಿವಾಸದ ಮೇಲೆ ದಾಳಿ– ಮೂವರ ಬಂಧನ: ಪ್ರಧಾನಿ ಬೆಂಜಮಿನ್ ನೆತನ್ಯಾಹು ನಿವಾಸದ ಮೇಲೆ ಶನಿವಾರ ಬಾಂಬ್ ದಾಳಿ ನಡೆಸಿದ ಆರೋಪದ ಮೇಲೆ ಇಸ್ರೇಲ್ ಪೊಲೀಸರು ಮೂವರನ್ನು ಬಂಧಿಸಿದ್ದಾರೆ.

ಪ್ರಧಾನಿ ಮತ್ತು ಅವರ ಕುಟುಂಬದವರು ದಾಳಿಯ ವೇಳೆ ನಿವಾಸದಲ್ಲಿ ಇರಲಿಲ್ಲ ಮತ್ತು ಯಾವುದೇ ರೀತಿಯ ಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಸ್ರೇಲ್ ಪಡೆಗಳು ನಡೆಸಿದ ವೈಮಾನಿಕ ದಾಳಿಯ ನಂತರ ಗಾಜಾ ಪಟ್ಟಿಯಲ್ಲಿ ಕಟ್ಟಡಗಳ ಅವಶೇಷಗಳಡಿ ಸಿಲುಕಿದ್ದ ಮೃತದೇಹಗಳನ್ನು ಹೊರತೆಗೆಯಲಾಯಿತು —ಎಎಫ್‌ಪಿ ಚಿತ್ರ

ದಾಳಿ ನಡೆಸಿದ ಆರೋಪಿಗಳ ಬಗ್ಗೆ ಪೊಲೀಸರು ಯಾವುದೇ ಮಾಹಿತಿ ನೀಡಿಲ್ಲ. ಪ್ರಧಾನಿ ನಿವಾಸದ ಮೇಲಿನ ದಾಳಿಯನ್ನು ಖಂಡಿಸಿರುವ ಇಸ್ರೇಲ್ ಅಧ್ಯಕ್ಷ ಐಸಾಕ್ ಹರ್ಜಾಗ್ ಸಾರ್ವಜನಿಕ ವಲಯದಲ್ಲಿ ಹೆಚ್ಚಾಗುತ್ತಿರುವ ಹಿಂಸಾಚಾರದ ವಿರುದ್ಧ ಎಚ್ಚರಿಕೆ ನೀಡಿದ್ದಾರೆ.

> ಹಿಜ್ಬುಲ್ಲಾ ಮಾಧ್ಯಮ ಸಂಪರ್ಕ ಅಧಿಕಾರಿ ಮೊಹಮ್ಮದ್ ಅಫೀಸ್ ಭಾನುವಾರ ‘ರಾಸ್ ಅಲ್–ನಬಾ’ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದು ಲೆಬನಾನ್‌ನ ಭದ್ರತಾ ದಳದ ಮೂಲಗಳು ತಿಳಿಸಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು

ಶ್ರೀಮತಿ ಎಂ. ಭಾಗ್ಯಮ್ಮನವರು
(ಲೇಟ್ ಶ್ರೀ ಪಿ.ವಿ.ಕೃಷ್ಣಪ್ಪನವರು, ಮಾಜಿ ತಾಲ್ಲೂಕು ಬೋರ್ಡ್ ಅಧ್ಯಕ್ಷರು, ಇವರ ಧರ್ಮಪತ್ನಿ)
ಅಮೃತಹಳ್ಳಿ, ಬೆಂಗಳೂರು–560092
ಜನನ: 22–4–1937 ನಿಧನ: 18–11–2023
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ. ನಿಮ್ಮ ನೆನಪು ಸದಾ ಹಸಿರು, ನಿಮ್ಮ ಪ್ರೀತಿ ಹಾಗೂ ಆದರ್ಶಮಯ ಜೀವನ ನಮಗೆ ದಾರಿದೀಪ. ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವ
ಇಂತಿ ದುಃಖತಪ್ತರು ಪಿ.ವಿ.ಮಂಜುನಾಥ ಬಾಬು (ಮಾಜಿ ಬಿಬಿಎಂಪಿ ಸದಸ್ಯರು), ಪತ್ನಿ, ಮಕ್ಕಳು ಮತ್ತು ಪಟೇಲ್ ವೀರಪ್ಪನವರ ಕುಟುಂಬ ವರ್ಗದವರು.

9ನೇ ವರ್ಷದ ಪುಣ್ಯ ಸ್ಮರಣೆ

ಶ್ರೀ. ಬಿ ವಿ ಗೋಪಾಲ ರೆಡ್ಡಿ
18.11.2015
ನಿಮ್ಮ ನೆನಪು ನಮ್ಮ ಮನದಂಗಳದಲ್ಲಿ ಸದಾ ಹಸಿರಾಗಿಯೇ ಉಳಿದಿದೆ.
ಸದಾ ನಿಮ್ಮ ನೆನಪಿನಲ್ಲಿರುವ
ಕುಟುಂಬವರ್ಗದವರು ಮತ್ತು ಬಂಧುಮಿತ್ರರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General
ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 13,000-17,000. 8951315839, 9141634619

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳೆಸಿ ತಿಂಗಳಿಗೆ 30,000ಕ್ಕು ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516, ಶಿವಮೊಗ್ಗ 8095555517

ವ್ಯಾಪಾರ
Business Offers
Agents Wanted
EVENT ORGANIZERS, Exhibition, Schools, Colleges, Factories, Flea Market, Rural Jatre,Offices, Religious Gatherings, Associations In Bangalore City and Rural 6366936485

ಭವಿಷ್ಯ
Astrology
★ಭಾರತದ★ ಪ್ರಖ್ಯಾತ ಬುಡಬುಡಕಿ ಜನಾಂಗದ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀ.ದೇವಾನಂದರವರಿಂದ ನಿಮ್ಮೆಲ್ಲಾ ಸಂಕಷ್ಟಗಳಿಗೆ ಮುಕ್ತಿ,ಮನ್ಮೋಹಿನಿ ಮೂಡಿ ವಶೀಕರಣಗಳಿಗೆ.9353143216

ಪ್ರವಾಸ
Travel
04.01.2025 12.03.2025 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/ 11 ದಿನಗಳು. 13.01.2025 ದುಬೈ,ಅಬುದಾಬಿ 6 ದಿನಗಳು. 23.12.2024 ಭೂತಾನ್ 8 ದಿನಗಳು. 14.12.2024 11.01.2025 ಶ್ರೀಲಂಕಾ 7 ದಿನಗಳು. 10.12.2024 08.01.2025 ಗುಜರಾತ್/ ಉಜ್ಜಯಿನಿ 8/11 ದಿನಗಳು. 18.12.2024 ಕಾಶಿ,ಗಯಾ,ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248 7022547922

ಪ್ರವಾಸ 17/12/2024 ಗುಜರಾತ್, ಮಧ್ಯಪ್ರದೇಶ ನಾಲ್ಕು ಜ್ಯೋತಿರ್ಲಿಂಗ ಇತರೆ 30/12/2024 ಕಲ್ಕತ್ತಾ, ಪುರಿ ಜಗನ್ನಾಥ 15/1/2025 ಶಿರಡಿ, ಮೂರು ಜ್ಯೋತಿರ್ಲಿಂಗ ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

2.12.2024 ಜೈಪುರ್, ಪುಷ್ಕರ್, ಜೈಸಲ್‌ಮೇರ್, ಜೋದ್‌ಪುರ್, ಉದಯ್‌ಪುರ್, ಮೌಂಟ್‌ಅಬು ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ), 9845035349, 9482435755

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
@50/-* PER WORDS
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
7795158424
9900428036

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಎಎಪಿಗೆ ಸಚಿವ ಕೈಲಾಶ್ ರಾಜೀನಾಮೆ

ಪಕ್ಷ ವಿವಾದಗಳಿಗೆ ಒಳಗಾಗಿದ್ದು, ಭರವಸೆ ಈಡೇರಿಸದಿರುವುದು ಈ ನಿಲುವಿಗೆ ಕಾರಣ: ಗಹಲೋತ್

ನವದೆಹಲಿ (ಪಿಟಿಐ): ಎಎಪಿ ನಾಯಕ ಹಾಗೂ ದೆಹಲಿ ಸರ್ಕಾರದ ಸಾರಿಗೆ ಸಚಿವ ಕೈಲಾಶ್ ಗಹಲೋತ್ ಅವರು ಭಾನುವಾರ ಪಕ್ಷ ತೊರೆದಿದ್ದಾರೆ. ಇದು ಎಎಪಿಗೆ ಆಗಿರುವ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ.

ಪಕ್ಷವು ವಿವಾದಗಳಿಗೆ ಒಳಗಾಗಿರುವುದು ಹಾಗೂ ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸದೆ ಇರುವುದು ರಾಜೀನಾಮೆಗೆ ಕಾರಣ ಎಂದು ಅವರು ರಾಜೀನಾಮೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ನಜಫ್‌ಗಢ ಶಾಸಕ ಆಗಿರುವ ಗಹಲೋತ್ ಅವರು ಮಂತ್ರಿ ಪರಿಷತ್ತಿಗೆ ಕೂಡ ತಕ್ಷಣದಿಂದಲೇ ಅನ್ವಯವಾಗುವಂತೆ ರಾಜೀನಾಮೆ ಸಲ್ಲಿಸಿದ್ದಾರೆ. ರಾಜೀನಾಮೆ ಪತ್ರವನ್ನು ಅವರು ಮುಖ್ಯಮಂತ್ರಿ ಆತಿಶಿ ಅವರಿಗೆ ಕಳುಹಿಸಿದ್ದಾರೆ. ರಾಜೀನಾಮೆ ಸ್ವೀಕೃತವಾಗಿದೆ ಎಂದು ಮೂಲಗಳು ಹೇಳಿವೆ.

ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರಿಗೆ ಪ್ರತ್ಯೇಕವಾದ ಪತ್ರವನ್ನು ಬರೆದಿರುವ ಅವರು, ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಪತ್ರವನ್ನು ಅವರು 'ಎಕ್ಸ್' ಮೂಲಕ ಹಂಚಿಕೊಂಡಿದ್ದಾರೆ.

ಪಕ್ಷವು 'ಶೀಷಮಹಲ್'ನಂತಹ ಮುಜುಗರಕ್ಕೆ ಒಳಗಾಗುವ ವಿವಾದ


ಕೈಲಾಶ್ ಗಹಲೋತ್

ಸೃಷ್ಟಿಸಿಕೊಂಡಿದೆ' ಎಂದು ಗಹಲೋತ್ ಅವರು ಹೇಳಿದ್ದಾರೆ. ಕೇಜ್ರಿವಾಲ್ ಅವರು ತಮ್ಮ ಹಿಂದಿನ ಸರ್ಕಾರಿ ನಿವಾಸದಲ್ಲಿ ಐಷಾರಾಮಿ ವಸ್ತುಗಳಿಗಾಗಿ ಕೋಟ್ಯಂತರ ಹಣ ವ್ಯಯಿಸಿದ್ದರು ಎಂದು ಬಿಜೆಪಿ ಆರೋಪಿಸಿತ್ತು, ಕೇಜ್ರಿವಾಲ್ ಅವರು ಇದ್ದ ಸರ್ಕಾರಿ ನಿವಾಸವನ್ನು ಬಿಜೆಪಿಯು 'ಶೀಷಮಹಲ್' ಎಂದು ಕರೆದಿತ್ತು.

ಜನರ ಹಕ್ಕುಗಳಿಗಾಗಿ ಹೋರಾಟ ನಡೆಸುವ ಬದಲು ಎಎಪಿಯು ತನ್ನದೇ ಆದ ಕಾರ್ಯಸೂಚಿಗಾಗಿ ಹೋರಾಟ ನಡೆಸುತ್ತಿದೆ. ಈ ಕಾರಣದಿಂದಾಗಿ ದೆಹಲಿಯಲ್ಲಿ ಮೂಲ ಸೇವೆಗಳನ್ನು ಒದಗಿಸುವಲ್ಲಿ ಅಡಚಣೆ ಉಂಟಾಗಿದೆ ಎಂದು ಗಹಲೋತ್ ದೂರಿದ್ದಾರೆ.

'ಎಎಪಿ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ... ರಾಜಕೀಯ ಮಹತ್ವಾಕಾಂಕ್ಷೆಗಳು ನಾವು ಜನರಿಗೆ ನೀಡಿದ್ದ ಭರವಸೆಗಳಿಗಿಂತ ದೊಡ್ಡದಾಗಿವೆ. ಇದರಿಂದಾಗಿ ಹಲವು ಭರವಸೆಗಳು ಈಡೇರಿಲ್ಲ' ಎಂದರು.

ಗಹಲೋತ್ ಅವರು ಇ.ಡಿ. ಮತ್ತು ಸಿಬಿಐ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ, ಅವರಿಗೆ ಬಿಜೆಪಿ ಸೇರುವುದನ್ನು ಬಿಟ್ಟು ಬೇರೆ ಆಯ್ಕೆ ಇಲ್ಲ ಎಂದು ಎಎಪಿ ಮುಖಂಡರು ಪ್ರತಿಕ್ರಿಯೆ ನೀಡಿದ್ದಾರೆ. 'ಇದು ಬಿಜೆಪಿಯ ಕೊಳಕು ರಾಜಕೀಯ ಪಿತೂರಿ. ಇ.ಡಿ. ಮತ್ತು ಸಿಬಿಐ ದುರ್ಬಳಕೆ ಮಾಡಿಕೊಂಡು ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಲು ಅದು ಬಯಸಿದೆ' ಎಂದು ಎಎಪಿ ಮುಖಂಡರು ಆರೋಪಿಸಿದ್ದಾರೆ.

> ಎಎಪಿ ಈಗ ಅರವಿಂದ ಕೇಜ್ರಿವಾಲ್ ಅವರಿಗಾಗಿ ಮಾತ್ರ ಇರುವ ಪಕ್ಷವಾಗಿದೆ. ಅದು ಈಗ 'ಅರವಿಂದ ಆದ್ಮಿ ಪಕ್ಷ'ವಾಗಿದೆ
> **ಶೆಹಜಾದ್ ಪೂನಾವಾಲಾ**, ಬಿಜೆಪಿ ವಕ್ತಾರ

ಗಹಲೋತ್ ರಾಜೀನಾಮೆಯನ್ನು ಸ್ವಾಗತಿಸಿರುವ ಬಿಜೆಪಿಯ ದೆಹಲಿ ಘಟಕದ ಮುಖ್ಯಸ್ಥ ವೀರೇಂದ್ರ ಸಚ್‌ದೇವ ಅವರು, ಗಹಲೋತ್ ಅವರು ಬಹಳ ಧೈರ್ಯದ ಹೆಜ್ಜೆ ಇರಿಸಿದ್ದಾರೆ ಎಂದು ಹೇಳಿದ್ದಾರೆ.

'ಕೇಜ್ರಿವಾಲ್ ಅವರ ವಿರುದ್ಧ ಬಿಜೆಪಿ ಯಾವ ವಿಷಯ ಪ್ರಸ್ತಾಪಿಸಿ ಹೋರಾಟ ನಡೆಸಿತ್ತೋ, ಅದನ್ನೇ ಉಲ್ಲೇಖಿಸಿ ಗಹಲೋತ್ ರಾಜೀನಾಮೆ ನೀಡಿದ್ದಾರೆ. ಕೇಜ್ರಿವಾಲ್ ಅವರು ಪ್ರಾಮಾಣಿಕ ಎಂದು ಎಎಪಿ ನಾಯಕರೂ ಪರಿಗಣಿಸುತ್ತಿಲ್ಲ ಎಂಬುದನ್ನು ಈ ರಾಜೀನಾಮೆಯ ತೋರಿಸುತ್ತಿದೆ' ಎಂದು ಸಚ್‌ದೇವ ಹೇಳಿದ್ದಾರೆ.

ಅರವಿಂದ ಕೇಜ್ರಿವಾಲ್ ಅವರ ಹಿತಾಸಕ್ತಿಗಳಿಗೆ ಕೆಲಸ ಮಾಡುವ ಉದ್ದೇಶದಿಂದ ಎಎಪಿ ಈಗ ತನ್ನ ಮೊದಲಿನ ಮೌಲ್ಯಗಳಿಂದ ದೂರ ಸರಿದಿದೆ ಎಂದು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಆರೋಪಿಸಿದ್ದಾರೆ.

ಮಾಜಿ ಶಾಸಕ ಅನಿಲ್ ಝಾ ಎಎಪಿಗೆ

ಬಿಜೆಪಿ ಮುಖಂಡ ಹಾಗೂ ಕಿರಾರಿ ಕ್ಷೇತ್ರದ ಮಾಜಿ ಶಾಸಕ ಅನಿಲ್ ಝಾ ಅವರು ಪಕ್ಷ ತೊರೆದು ಭಾನುವಾರ ಎಎಪಿ ಸೇರಿದ್ದಾರೆ. ಸಚಿವ ಕೈಲಾಶ್ ಗಹಲೋತ್ ಅವರು ಎಎಪಿ ತೊರೆದ ಕೆಲವೇ ತಾಸುಗಳಲ್ಲಿ ಈ ಬೆಳವಣಿಗೆ ನಡೆದಿದೆ.

ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಅವರು ಝಾ ಅವರನ್ನು ತಮ್ಮ ಪಕ್ಷಕ್ಕೆ ಬರಮಾಡಿಕೊಂಡರು. ಝಾ ಅವರು ಪೂರ್ವಾಂಚಲದ ದೊಡ್ಡ ನಾಯಕರ ಪೈಕಿ ಒಬ್ಬರು ಎಂದು ಕೇಜ್ರಿವಾಲ್ ಹೇಳಿದ್ದಾರೆ. ಝಾ ಅವರು ಕಿರಾರಿ ಕ್ಷೇತ್ರದಲ್ಲಿ ಹಾಗೂ ದೆಹಲಿ ನಗರದಲ್ಲಿ ಎಎಪಿಗೆ ಬಲ ತಂದುಕೊಡಲಿದ್ದಾರೆ ಎಂದು ಕೂಡ ಕೇಜ್ರಿವಾಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪೂರ್ವಾಂಚಲದವರು ನಿರ್ಣಾಯಕವಾಗಿರುವ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಝಾ ಅವರಿಗೆ ಕಿರಾರಿ ಕ್ಷೇತ್ರದಿಂದ ಎಎಪಿ ಟಿಕೆಟ್ ನೀಡುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಕೇಜ್ರಿವಾಲ್ ವ್ಯಕ್ತಿತ್ವ ಹಾಗೂ ದೆಹಲಿಯಲ್ಲಿ ಪೂರ್ವಾಂಚಲದ ಜನರು ವಾಸಿಸುತ್ತಿರುವ ಕಾಲೊನಿಗಳಲ್ಲಿ ಜೀವನಮಟ್ಟ ಸುಧಾರಿಸಲು ದೆಹಲಿ ಸರ್ಕಾರದ ಕ್ರಮಗಳು ತಮ್ಮನ್ನು ಪ್ರಭಾವಿಸಿವೆ ಎಂದು ಝಾ ಹೇಳಿದ್ದಾರೆ.

ಎಎಪಿ ನೇತೃತ್ವದ ಸರ್ಕಾರವು ದೆಹಲಿಯಲ್ಲಿ 10 ಸಾವಿರ ಕಿ.ಮೀ. ಉದ್ದದ ರಸ್ತೆ, 6,800 ಕಿ.ಮೀ. ಉದ್ದದ ಒಳಚರಂಡಿ ವ್ಯವಸ್ಥೆ ನಿರ್ಮಿಸಿದೆ, 1,650 ಅನಧಿಕೃತ ಕಾಲೊನಿಗಳಿಗೆ ನೀರಿನ ಸಂಪರ್ಕ ಕಲ್ಪಿಸಿದೆ. ಆದರೆ ಬಿಜೆಪಿ ಏನನ್ನೂ ಮಾಡಿಲ್ಲ ಎಂದು ಕೇಜ್ರಿವಾಲ್ ಆರೋಪಿಸಿದ್ದಾರೆ. ಗಹಲೋತ್ ಅವರ ರಾಜೀನಾಮೆ ಬಗ್ಗೆ ಪ್ರತಿಕ್ರಿಯೆ ನೀಡಲು ಕೇಜ್ರಿವಾಲ್ ನಿರಾಕರಿಸಿದರು.

ಘನ ತ್ಯಾಜ್ಯ ನಿರ್ವಹಣೆ ದೆಹಲಿ ವಿಫಲ: 'ಸುಪ್ರೀಂ'

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯು ಘನತ್ಯಾಜ್ಯ ನಿರ್ವಹಣಾ ನಿಯಮಗಳು–2016ರ ಅನುಷ್ಠಾನದಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಇದೇ ವೇಳೆ, ದೆಹಲಿ ಮಹಾನಗರ ಪಾಲಿಕೆ ಸೇರಿದಂತೆ ಸಂಬಂಧಿತ ಎಲ್ಲ ಅಧಿಕಾರಿಗಳನ್ನು ಕರೆದು ಚರ್ಚೆ ನಡೆಸುವಂತೆ ದೆಹಲಿ ಮುಖ್ಯ ಕಾರ್ಯದರ್ಶಿ ಅವರಿಗೆ ಸೂಚಿಸಿದೆ.

ಮುಖ್ಯ ಕಾರ್ಯದರ್ಶಿ ಅವರಿಗೆ ಯಾವುದೇ ಅಧಿಕಾರಿ ಸಹಕಾರ ನೀಡದಿರುವುದು ಕಂಡುಬಂದಲ್ಲಿ, ಆ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಎಂದು ತಿಳಿಸಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ನ್ಯಾಯಪೀಠವು, '2016ರ ನಿಯಮಗಳು ಕಾಗದ ಪತ್ರದಲ್ಲಿ ಅಷ್ಟೇ ಇರುವುದನ್ನು ಗಮನಿಸಿದ್ದೇವೆ. ರಾಷ್ಟ್ರ ರಾಜಧಾನಿ ದೆಹಲಿಯೇ 2016ರ ನಿಯಮ ಅನುಷ್ಠಾನದಲ್ಲಿ ಸಂಪೂರ್ಣ ವಿಫಲವಾಗಿದ್ದರೆ, ದೇಶದ ಬೇರೆ ಭಾಗಗಳ ಕತೆ ಏನು' ಎಂದು ಪ್ರಶ್ನಿಸಿದೆ.

ನಿಯಮ ಅನುಷ್ಠಾನವಾಗದ ಕಾರಣ, ಘನ ತ್ಯಾಜ್ಯವನ್ನು ಕಸ ಸುರಿಯುವ ಜಾಗದಲ್ಲಿ ಅಕ್ರಮವಾಗಿ ವಿಸಾಡಲಾಗುತ್ತಿದೆ. ಅದಕ್ಕೆ ಬೆಂಕಿ ಹತ್ತಿಕೊಳ್ಳುವ ಅಪಾಯವೂ ಇದೆ. 'ಇನ್ನೊಂದೆಡೆ ಭಾರಿ ಪ್ರಮಾಣದ ನಿರ್ಮಾಣ ಕಾಮಗಾರಿಗಳು ನಡೆಯುತ್ತಿವೆ. ಇದರಿಂದ ದಿನೇ ದಿನೇ ತ್ಯಾಜ್ಯ ಹೆಚ್ಚುತ್ತಿದೆ. ರಾಜಧಾನಿಯಲ್ಲಿ ನಿತ್ಯದ ಘನ ತ್ಯಾಜ್ಯ ಪ್ರಮಾಣ ಎಷ್ಟು ಎಂದು ದೆಹಲಿ ಸರ್ಕಾರವು ವರದಿಯಲ್ಲಿ ತಿಳಿಸಬೇಕು ಎಂದು ಹೇಳಿದೆ.

ಅರ್ಜಿ ವಿಚಾರಣೆಯನ್ನು ಡಿಸೆಂಬರ್ 16ಕ್ಕೆ ಮುಂದೂಡಿದೆ.

ದೆಹಲಿ ವಾಯುಮಾಲಿನ್ಯ 'ಸುಪ್ರೀಂ'ನಲ್ಲಿ ಇಂದು ವಿಚಾರಣೆ

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವಾಯುಮಾಲಿನ್ಯ ತಗ್ಗಿಸಲು ಕ್ರಮಗಳನ್ನು ಕೈಗೊಳ್ಳುವಂತೆ ಕೋರಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಲಿದೆ.

ದೆಹಲಿ ವಾಯುಮಾಲಿನ್ಯ ದಿನೇ ದಿನೇ ಹೆಚ್ಚುತ್ತಿದ್ದು, ಭಾನುವಾರ ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯುಐ) ಗಂಭೀರ ಹಂತ ತಲುಪಿತ್ತು. ಬೆಳಿಗ್ಗೆ 9 ಗಂಟೆ ವೇಳೆಗೆ ಎಕ್ಯುಐ 429ಕ್ಕೆ ಏರಿಕೆಯಾಗಿತ್ತು.

ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಇರುವ ಮಾಹಿತಿ ಪ್ರಕಾರ, ನ.18ರಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ನ್ಯಾಯಪೀಠವು ಅರ್ಜಿಯ ವಿಚಾರಣೆ ನಡೆಸಲಿದೆ.

ಈ ಕುರಿತ ಅರ್ಜಿಯ ತುರ್ತು ವಿಚಾರಣೆಗೆ ನವೆಂಬರ್ 14ರಂದು ಕೋರ್ಟ್ ಒಪ್ಪಿಕೊಂಡಿತ್ತು.

ನೈಜೀರಿಯಾ ಅಧ್ಯಕ್ಷರ ಜತೆ ಮೋದಿ ಮಾತುಕತೆ

ಅಬುಜಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನೈಜೀರಿಯಾದ ಅಬುಜಾಗೆ ಭೇಟಿ ನೀಡಿದರು. ಇದರೊಂದಿಗೆ 17 ವರ್ಷಗಳ ನಂತರ ಭಾರತದ ಪ್ರಧಾನಿಯೊಬ್ಬರು ಈ ದೇಶಕ್ಕೆ ಭೇಟಿ ನೀಡಿದಂತಾಗಿದೆ.

ಇದೇ ಸಂದರ್ಭದಲ್ಲಿ ಅವರು ನೈಜೀರಿಯಾ ಅಧ್ಯಕ್ಷ ಬೋಲಾ ಅಹಮ್ಮದ್ ಟಿನುಬು ಅವರೊಂದಿಗೆ ರಕ್ಷಣೆ, ವ್ಯಾಪಾರ ಮತ್ತು ಇಂಧನ ವಲಯಗಳಲ್ಲಿನ ದ್ವಿಪಕ್ಷೀಯ ಸಹಕಾರ ಕುರಿತು ಚರ್ಚಿಸಿದರು.

ಈ ವೇಳೆ, 'ಭಾರತವು ತನ್ನ ಕಾರ್ಯತಂತ್ರದ ಪಾಲುದಾರಿಕೆಯಲ್ಲಿ ನೈಜೀರಿಯಾಗೆ ಹೆಚ್ಚಿನ ಆದ್ಯತೆ ನೀಡುತ್ತದೆ. ನಮ್ಮ ಮಾತುಕತೆ ನಂತರ ಉಭಯ ದೇಶಗಳ ಪಾಲುದಾರಿಕೆಯ ಹೊಸ ಅಧ್ಯಾಯ ಆರಂಭವಾಗಲಿದೆ ಎಂಬ ವಿಶ್ವಾಸವಿದೆ' ಎಂದು ಪ್ರಧಾನಿ ಮೋದಿ ಹೇಳಿದರು.

ಪ್ರಧಾನಿ ಮೋದಿ ಮತ್ತು ನೈಜೀರಿಯಾ ಅಧ್ಯಕ್ಷ ಬೋಲಾ ಅಹಮ್ಮದ್ ಟಿನುಬು

ಕಳೆದ ತಿಂಗಳು ಸಂಭವಿಸಿದ ಪ್ರವಾಹದಿಂದ ಕಂಗೆಟ್ಟ ನೈಜೀರಿಯಾ ಜನರಿಗೆ ಭಾರತವು 20 ಟನ್ ಪರಿಹಾರ ಸಾಮಗ್ರಿಗಳನ್ನು ರವಾನಿಸಲಿದೆ ಎಂದು ಘೋಷಿಸಿದರು.

'ಪ್ರಧಾನಿ ಮೋದಿ ಭಾರತದಲ್ಲಿನ ಕೃಷಿ, ಸಾರಿಗೆ, ಅಗ್ಗದ ಔಷಧ ಮತ್ತು ಡಿಜಿಟಲ್ ಮಾರ್ಪಾಡುಗಳ ಕುರಿತು ವಿವರಿಸಿದರು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಉಭಯ ದೇಶಗಳ ನಾಯಕರು ಭಯೋತ್ಪಾದನೆ, ಪೈರಸಿ ಮತ್ತು ತೀವ್ರಗಾಮಿ ಧೋರಣೆ ವಿರುದ್ಧದ ಜಂಟಿ ಹೋರಾಟದ ಬದ್ಧತೆ ಪ್ರತಿಪಾದಿಸಿದರು.

ನಂತರ ಸಾಂಸ್ಕೃತಿಕ ವಿನಿಮಯ, ಸುಂಕದಲ್ಲಿನ ಸಹಕಾರ ಮತ್ತು ಸಮೀಕ್ಷೆ ಸಹಕಾರ ಕುರಿತ ಮೂರು ಒಪ್ಪಂದಗಳಿಗೆ ಅವರು ಸಹಿ ಮಾಡಿದರು.

ಮೋದಿಗೆ ನೈಜೀರಿಯಾ ದೇಶದ ಗೌರವ

ನೈಜೀರಿಯಾದ ಎರಡನೇ ಅತ್ಯುನ್ನತ ರಾಷ್ಟ್ರೀಯ ಗೌರವ 'ದಿ ಗ್ರಾಂಡ್ ಕಮಾಂಡರ್ ಆಫ್ ದ ಆರ್ಡರ್ ಆಫ್ ದಿ ನೈಜೆರ್' ಗೌರವವನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೀಡಲಾಯಿತು. ಈ ಗೌರವಕ್ಕೆ ಪಾತ್ರರಾದ ಎರಡನೇ ವಿದೇಶಿ ವ್ಯಕ್ತಿ ಮೋದಿ ಅವರಾಗಿದ್ದಾರೆ.

ವಿಂಗಡಣೆ ಪಂಜಾಬ್ ರಾಜ್ಯದ ಜಲಂಧರ್‌ನ ಸಗಟು ತರಕಾರಿ ಮಾರುಕಟ್ಟೆಯಲ್ಲಿ ಭಾನುವಾರ ಕಾರ್ಮಿಕರು ಆಲೂಗಡ್ಡೆ ವಿಂಗಡಿಸುವ ಕಾಯಕದಲ್ಲಿ ನಿರತರಾಗಿದ್ದರು ಪಿಟಿಐ ಚಿತ್ರ

ತಪ್ಪು ಮಾಹಿತಿ ರವಾನೆ: 4 ಟೆಲಿಗ್ರಾಂ ಚಾನಲ್‌ಗಳ ವಿರುದ್ಧ ಎಫ್‌ಐಆರ್

ಪ್ರಯಾಗರಾಜ್ (ಪಿಟಿಐ): ಉತ್ತರ ಪ್ರದೇಶ ಲೋಕಸೇವಾ ಆಯೋಗ (ಯುಪಿಪಿಎಸ್‌ಸಿ) ನಡೆಸಿದ ವಿವಿಧ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ತಪ್ಪು ಮಾಹಿತಿ ರವಾನಿಸಿ, ಕಾನೂನು ಹಾಗೂ ಸುವ್ಯವಸ್ಥೆಗೆ ಭಂಗ ತಂದ ಆರೋಪದ ಅಡಿಯಲ್ಲಿ ಟೆಲಿಗ್ರಾಂನ ನಾಲ್ಕು ಚಾನೆಲ್‌ಗಳ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.

'ಪಿಸಿಎಂ ಅಭ್ಯಾಸ್, ಜನರಲ್ ಸ್ಟಡೀಸ್ ಎಜುಶಾಲಾ, ಮೇಕ್ ಐಎಎಸ್ ಹಾಗೂ ಪಿಸಿಎಸ್ ಮಂಥನ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಯುಪಿಪಿಎಸ್‌ಸಿಯ ಉಸ್ತುವಾರಿ ಕೃಷ್ಣ ಮುರಾರಿ ಚೌರಾಸಿಯಾ ನೀಡಿದ ದೂರಿನ ಪ್ರಕಾರ, ಇಲ್ಲಿನ ಸಿವಿಲ್‌ಲೈನ್ಸ್ ಪೊಲೀಸ್ ಠಾಣೆಯಲ್ಲಿ ಚಾನೆಲ್‌ಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 318(4) (ವಂಚನೆ) ಹಾಗೂ ಐಟಿ ಕಾಯ್ದೆ ಅಡಿಯಲ್ಲಿ ಗುರುವಾರ ಪ್ರಕರಣ ದಾಖಲಿಸಲಾಗಿತ್ತು.

'ಟೆಲಿಗ್ರಾಂನ ಚಾನೆಲ್‌ಗಳ ಮೂಲಕ ಅಭ್ಯರ್ಥಿಗಳಿಗೆ ತಪ್ಪು ಮಾಹಿತಿ ರವಾನಿಸಿ, ಪ್ರತಿಭಟನೆ ನಡೆಸುವಂತೆ ಪ್ರಚೋದಿಸಿ, ಕಾನೂನು ಹಾಗೂ ಸುವ್ಯವಸ್ಥೆಗೆ ಧಕ್ಕೆ ತರುವ ಪ್ರಯತ್ನ ನಡೆಸಲಾಗಿತ್ತು' ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ. ದೂರಿಗೆ ಸಂಬಂಧಿಸಿದಂತೆ ಪುರಾವೆಯಾಗಿ ಟೆಲಿಗ್ರಾಂ ಚಾನಲ್‌ನ ಸ್ಕ್ರೀನ್‌ಶಾಟ್‌ಗಳನ್ನು ಲಗತ್ತಿಸಲಾಗಿದೆ.

ಪ್ರಾಂತೀಯ ನಾಗರಿಕ ಸೇವೆಗಳು ಹಾಗೂ ತನಿಖಾಧಿಕಾರಿಗಳು (ಆರ್‌ಒ), ಸಹಾಯಕ ತನಿಖಾಧಿಕಾರಿಗಳು (ಎಆರ್‌ಒ) ಹುದ್ದೆಗಳಿಗೆ ಎರಡು ದಿನ ಪ್ರತ್ಯೇಕವಾಗಿ ಎರಡು ಪರೀಕ್ಷೆ ನಡೆಸಲು ನಿರ್ಧರಿಸಿದ್ದನ್ನು ವಿರೋಧಿಸಿ ಯುಪಿಪಿಎಸ್‌ಸಿ ಕಚೇರಿಯ ಮುಂದೆ ನ.11ರಂದು ಅಭ್ಯರ್ಥಿಗಳು ಬೃಹತ್ ಪ್ರತಿಭಟನೆ ನಡೆಸಿದ್ದರು. ಸತತ ನಾಲ್ಕು ದಿನ ನಡೆದ ಪ್ರತಿಭಟನೆಗೆ ಮಣಿದ ಯುಪಿಪಿಎಸ್‌ಸಿ ಬೇಡಿಕೆ ಈಡೇರಿಸುವ ಭರವಸೆ ನೀಡಿತ್ತು.

ಸಿದ್ದೀಕಿ ಹತ್ಯೆ ಮತ್ತೊಬ್ಬನ ಬಂಧನ

ಮುಂಬೈ (ಪಿಟಿಐ): ಮಾಜಿ ಸಚಿವ ಹಾಗೂ ಎನ್‌ಸಿಪಿ (ಅಜಿತ್ ಪವಾರ್ ಬಣ) ನಾಯಕ ಬಾಬಾ ಸಿದ್ದೀಕಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈ ಪೊಲೀಸರು ಮಹಾರಾಷ್ಟ್ರದ ಅಕೋಲಾದಲ್ಲಿ ಮತ್ತೊಬ್ಬ ಆರೋಪಿಯನ್ನು ಬಂಧಿಸಿದ್ದಾರೆ. ಇದರೊಂದಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾದವರ ಸಂಖ್ಯೆ 25ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಗುಜರಾತ್‌ನ ಅನಂದ್ ಜಿಲ್ಲೆಯ ಪೆಟ್ಲಾಡ್ ನಿವಾಸಿ ಸಲ್ಮಾನ್‌ಭಾಯ್ ಇಕ್ಬಾಲ್‌ಭಾಯ್ ವೊಹ್ರಾ ಬಂಧಿತ ಆರೋಪಿ.

ಈತನು ಮೇ ತಿಂಗಳಿನಲ್ಲಿ ಬ್ಯಾಂಕ್ ಖಾತೆಯೊಂದನ್ನು ತೆರೆದಿದ್ದ. ಬಂಧಿತ ಆರೋಪಿಗಳಾದ ಗುರ್ಮೇಲ್ ಸಿಂಗ್, ರೂಪೇಶ್ ಮೊಹೋಲ್ ಹಾಗೂ ಹರಿಶಂಕರ್ ಅವರ ಸಹೋದರ ನರೇಶ್ ಕುಮಾರ್‌ಗೆ ಹಣವನ್ನು ನೀಡಿದ್ದ. ಅಲ್ಲದೇ ಪ್ರಕರಣದೊಂದಿಗೆ ನಂಟು ಹೊಂದಿರುವ ಅನೇಕರಿಗೂ ಈತ ಸಹಾಯ ಮಾಡಿದ್ದಾನೆ' ಎಂದು ಅವರು ತಿಳಿಸಿದರು.

ಪ್ರಕರಣದ ಮುಖ್ಯ ಆರೋಪಿ ಎಂದು ಗುರುತಿಸಲಾಗಿರುವ ಶೂಟರ್ ಶಿವಕುಮಾರ್ ಹಾಗೂ ಇತರ ನಾಲ್ವರು ಆರೋಪಿಗಳನ್ನು ಕೆಲ ದಿನಗಳ ಹಿಂದೆ ಉತ್ತರ ಪ್ರದೇಶದಲ್ಲಿ ಬಂಧಿಸಲಾಯಿತು. ಸಿದ್ದೀಕಿ ಅವರನ್ನು ಅ.12ರಂದು ಮುಂಬೈನಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಯಿತು.

ಉದ್ಯೋಗಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಏರಿಕೆ– ಬಿಜೆಪಿ ಸಮರ್ಥನೆ

ಅಸಾಧಾರಣ ಕಟ್ಟುಕಥೆ– 'ಕೈ' ತಿರುಗೇಟು

● ಶೆಮಿನ್ ಜಾಯ್

ನವದೆಹಲಿ: ಔದ್ಯೋಗಿಕ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆ 'ಸ್ಥಿರವಾದ ಏರಿಕೆ' ದಾಖಲಿಸುತ್ತಿದೆ ಎಂದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಅಂಕಿಅಂಶಗಳನ್ನು ಬಿಡುಗಡೆಗೊಳಿಸಿದೆ.

ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್, 'ಗ್ರಾಮೀಣ ಭಾಗದಲ್ಲಿ ತೀವ್ರ ಆರ್ಥಿಕ ಸಂಕಷ್ಟದ ಹೊರತಾಗಿಯೂ ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗಿದೆ ಎಂದು ತಿಳಿಸಿದೆ. ಆದರೆ, ಗುಣಮಟ್ಟದ ಉದ್ಯೋಗಗಳಲ್ಲಿ ಮಹಿಳೆಯರ ಪ್ರಮಾಣದಲ್ಲಿ ತೀವ್ರ ಇಳಿಕೆಯಾಗಿದ್ದು, ನೈಜ ವೇತನವೂ ತೀರಾ ಕಡಿಮೆಯಾಗಿದೆ. ಇದು ಮತ್ತೊಂದು ದುರಂತವಾಗಿದ್ದು, ಸರ್ಕಾರದ ಸುಳ್ಳು ನುಡಿಯಾಗಿದೆ' ಎಂದು ಟೀಕಿಸಿದೆ.

ನರೇಂದ್ರ ಮೋದಿ ಪ್ರಧಾನಿಯಾದ ನಂತರ 'ಉದ್ಯೋಗದಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಅನುಪಾತ' (ಎಲ್‌ಎಫ್‌ಪಿಆರ್) 2017–18ರಲ್ಲಿ ಶೇ 27ರಷ್ಟಿದ್ದು, 2023–24ರ ಅವಧಿಗೆ ಶೇ 41.7ಕ್ಕೆ ಏರಿಕೆಯಾಗಿದೆ ಎಂದು ಆರ್ಥಿಕ ದತ್ತಾಂಶಗಳಲ್ಲಿ ತಿಳಿಸಲಾಗಿದೆ. ಇದು ಕೇಂದ್ರ ಸರ್ಕಾರ ಸೃಷ್ಟಿಸಿದ 'ಅದ್ಭುತ ಕಥೆ'ಯಾಗಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ ವಿಭಾಗ) ಜೈರಾಮ್ ರಮೇಶ್ ನಕ್ಷೆ ಸಹಿತ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಸಂಪೂರ್ಣ ಬೋಗಸ್: 'ಗ್ರಾಮೀಣ ಭಾಗದಲ್ಲಿ ಉಂಟಾದ ಆರ್ಥಿಕ ಸಂಕಷ್ಟದಿಂದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ. ಅದರಲ್ಲೂ ಸ್ವ–ಉದ್ಯೋಗದ ಕ್ಷೇತ್ರದಲ್ಲಿ ಗ್ರಾಮೀಣ ಭಾಗದಲ್ಲಿ ಈ ಪ್ರಮಾಣವು ಶೇ 57.7ರಿಂದ ಶೇ 73.5ಕ್ಕೆ ಹೆಚ್ಚಿದ್ದು, ನಗರ ಭಾಗದಲ್ಲಿ ಶೇ 34.8ರಿಂದ ಶೇ 42.3ಕ್ಕೆ ಏರಿಕೆಯಾಗಿದೆ. ಆದರೆ ವೇತನರಹಿತ ಮನೆಕೆಲಸಗಳಲ್ಲಿ ತೊಡಗಿಸಿಕೊಂಡಿರುವವರ ಪ್ರಮಾಣವು ಕಳೆದ ಆರು ವರ್ಷಗಳಲ್ಲಿ ಶೇ 31.7ರಿಂದ ಶೇ 36.7ಕ್ಕೆ ಏರಿಕೆಯಾಗಿದೆ. ಆದರೆ, ಸರ್ಕಾರದ ಎಲ್‌ಎಫ್‌ಪಿಆರ್ ಪ್ರಮಾಣವು ಸಂಪೂರ್ಣ ಬೋಗಸ್ ಆಗಿದೆ' ಎಂದು ವಿವರಿಸಿದ್ದಾರೆ.

ಕೆಲಸ ಜಾಸ್ತಿ, ಸಂಬಳ ಕಡಿಮೆ: 'ಯಾವುದೇ ಆಧುನಿಕ ಅರ್ಥ ವ್ಯವಸ್ಥೆಯೂ ಅಲ್ಲಿನ ಉದ್ಯೋಗಿಗಳ ರಚನಾತ್ಮಕ ಬದಲಾವಣೆಗೆ ಕಾರಣವಾಗುತ್ತದೆ. ಮಹಿಳೆಯರು ಕಡಿಮೆ ವೇತನದ ಕೃಷಿ ಉದ್ಯೋಗದ ಬದಲಾಗಿ, ಉತ್ಪಾದನಾ, ಸೇವಾ ಕ್ಷೇತ್ರದತ್ತ ಹೆಚ್ಚು ತೊಡಗಿಸಿಕೊಳ್ಳುತ್ತಾರೆ. 10 ವರ್ಷಗಳಲ್ಲಿ ಈ ಪರಿಸ್ಥಿತಿ ಕೂಡ ಸಂಪೂರ್ಣವಾಗಿ ಹಿಮ್ಮುಖವಾಗಿದೆ. ಕೃಷಿ ಕ್ಷೇತ್ರದಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆಯು ಶೇ 73.2ರಿಂದ (2017–18) ಶೇ 76.9 (2023–24)ಕ್ಕೆ ಏರಿಕೆಯಾಗಿದೆ. ಸ್ವ–ಉದ್ಯೋಗದಲ್ಲಿರುವ ಮಹಿಳೆಯರ ಆದಾಯವು ಇದೇ ಅವಧಿಯಲ್ಲಿ ಮಾಸಿಕ ₹3073ರಿಂದ ₹1,342ಕ್ಕೆ ಕುಸಿದಿದೆ' ಎಂದು ಹೇಳಿದ್ದಾರೆ.

ಮುಖ್ಯಾಂಶಗಳು

- ಔದ್ಯೋಗಿಕ ಕ್ಷೇತ್ರಗಳಲ್ಲಿ ಮಹಿಳೆಯರ ಹೆಚ್ಚಳ
- ಕೇಂದ್ರ ಸರ್ಕಾರದಿಂದ ಅಂಕಿಅಂಶ ಬಿಡುಗಡೆ
- ಉದ್ಯೋಗಿಗಳ ಸಂಖ್ಯೆ ಹೆಚ್ಚಿದ್ದರೂ, ವೇತನ ತೀರಾ ಇಳಿಮುಖ: ಕಾಂಗ್ರೆಸ್

> **ವೇತನ ಹಾಗೂ ಸ್ವ ಉದ್ಯೋಗಿ ಮಹಿಳೆಯರು ಆರು ವರ್ಷದ ಹಿಂದೆ ಪಡೆಯುತ್ತಿದ್ದ ವೇತನಕ್ಕಿಂತಲೂ ತೀರಾ ಕಡಿಮೆಯಾಗಿದೆ. ಇದು, ಅಮೃತಕಾಲದ ಕಟು ವಾಸ್ತವ**
> **ಜೈರಾಮ್ ರಮೇಶ್**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅಭಿಮತ

'ನ್ಯಾಯಮೂರ್ತಿಗೆ ರಾಜಕೀಯ ಧೋರಣೆ ಸಲ್ಲ'

ಪ್ರಜಾವಾಣಿ ವಾರ್ತೆ

ಚೆನ್ನೈ: 'ನ್ಯಾಯಾಂಗದ ಅಧಿಕಾರವನ್ನು ಯಾರ ಒತ್ತಡಕ್ಕೂ ಮಣಿಯದೇ ಸ್ವತಂತ್ರವಾಗಿ ಚಲಾಯಿಸುವುದು ನ್ಯಾಯಮೂರ್ತಿಯೊಬ್ಬರಿಗೆ ಇರುವ ಪರಮಾಧಿಕಾರ ಮಾತ್ರವಲ್ಲ ಅದು ಅವರ ಆದ್ಯ ಕರ್ತವ್ಯವೂ ಆಗಿದೆ' ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅಭಿಪ್ರಾಯಪಟ್ಟರು.

ಭಾನುವಾರ ಆಯೋಜನೆಗೊಂಡಿದ್ದ ನ್ಯಾಯಮೂರ್ತಿ ಎಸ್. ನಟರಾಜನ್ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನ್ಯಾಯಮೂರ್ತಿಯೊಬ್ಬರು ಕಾನೂನನ್ನು ತಾವು ಹೇಗೆ ಅರ್ಥ ಮಾಡಿಕೊಳ್ಳುತ್ತಾರೆ ಅಥವಾ ವ್ಯಾಖ್ಯಾನಿಸುತ್ತಾರೆ, ಅವರ ಆತ್ಮಸಾಕ್ಷಿ ಏನು ಹೇಳುತ್ತದೆ ಎನ್ನುವುದರ ಮೇಲೆ ನ್ಯಾಯಾಂಗ ಅಧಿಕಾರವನ್ನು ಚಲಾಯಿಸುತ್ತಾರೆ. ಅಧಿಕಾರವನ್ನು ಚಲಾಯಿಸುವ ವೇಳೆ ಬೇರೆಯವರ ಅಭಿಪ್ರಾಯಗಳಿಗೆ ಮಣಿಯಬಾರದು' ಎಂದರು.

'ಅಂತಿಮವಾಗಿ, ನ್ಯಾಯಮೂರ್ತಿಯೊಬ್ಬರ ನಂಬಿಕೆ, ಧೈರ್ಯ ಹಾಗೂ ಅವರ ಸ್ವಾತಂತ್ರ್ಯವೇ ನ್ಯಾಯಾಂಗದ ಮುಂದಿರುವ ಪ್ರಕರಣಗಳನ್ನು ಇತ್ಯರ್ಥಪಡಿಸುತ್ತವೆ' ಎಂದರು.

'ನ್ಯಾಯಾಂಗ ವ್ಯವಸ್ಥೆಯೊಳಗಿನ ಸ್ವಾತಂತ್ರ್ಯದ ಕುರಿತು ಮಾತನಾಡುವುದಾದರೆ, ಇಬ್ಬರು ನ್ಯಾಯಮೂರ್ತಿಗಳ ನಡುವಿನ ಭಿನ್ನ ನಿಲುವುಗಳು ಅಥವಾ ಭಿನ್ನಾಭಿಪ್ರಾಯಗಳನ್ನು ಆ ನ್ಯಾಯಮೂರ್ತಿಗಳ ಅಭಿವ್ಯಕ್ತಿ ಸ್ವಾತಂತ್ರ್ಯ ಎನ್ನುವ ದೃಷ್ಟಿಕೋನದಿಂದಲೇ ನೋಡಬೇಕಾಗುತ್ತದೆ. ವ್ಯವಸ್ಥೆಯೊಳಗಿನ ಈ ಅಭಿವ್ಯಕ್ತಿ ಸ್ವಾತಂತ್ರ್ಯವೇ ನ್ಯಾಯಾಂಗದ ಪ್ರಬುದ್ಧತೆಯನ್ನು ಸೂಚಿಸುತ್ತದೆ' ಎಂದರು.

'ರಾಜಕೀಯ ಅಭಿಪ್ರಾಯಗಳಿಂದ ದೂರ ಇರುವುದು, ನಿಷ್ಪಕ್ಷಪಾತವಾಗಿರುವುದು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಬಹಳ ಮುಖ್ಯವಾಗಿರುವ ಅಂಶವಾಗುತ್ತದೆ. ಇದನ್ನೇ ಹಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನಿಷ್ಪಕ್ಷಪಾತವಾಗಿರುವುದು ಎಂದರೆ, ನ್ಯಾಯಮೂರ್ತಿಯೊಬ್ಬರು ತಮ್ಮ ನಿರ್ಧಾರವನ್ನು ಕಾನೂನು ಹಾಗೂ ತಮ್ಮ ಮುಂದಿರುವ ಸತ್ಯದ ಆಧಾರದಲ್ಲಿಯೇ ರೂಪಿಸಿಕೊಳ್ಳಬೇಕು. ಅರ್ಜಿದಾರರ ಪರ ಒಲವು–ನಿಲುವುಗಳ ಮೇಲೆ ನಿರ್ಧಾರ ರೂಪಿಸಿಕೊಳ್ಳಬಾರದು' ಎಂದರು.

'ನ್ಯಾಯಾಂಗಕ್ಕೇ ಪರಮ ಅಧಿಕಾರ'

ನ್ಯಾಯಾಂಗ ಹಾಗೂ ಕಾರ್ಯಾಂಗ ಅಧಿಕಾರ ವಿಭಜನೆಯ ಕುರಿತು ಮಾತನಾಡಿದ ನ್ಯಾಯಮೂರ್ತಿ ನಾಗರತ್ನ ಅವರು, 'ನ್ಯಾಯಾಂಗದ ನಿರ್ಧಾರಗಳನ್ನು ಕಾರ್ಯಾಂಗವು ಸರಳವಾಗಿ ತಳ್ಳಿಹಾಕುವಂತಿಲ್ಲ' ಎಂದರು.

'ಯಾವುದೇ ಕಾನೂನುಗಳಿಗೆ ತಿದ್ದುಪಡಿ ಮಾಡಿಕೊಳ್ಳುವ ಅಧಿಕಾರವನ್ನು ಕಾರ್ಯಾಂಗಕ್ಕೆ ನೀಡಲಾಗಿದೆ. ಹಾಗಿದ್ದರೂ, ಕಾನೂನಿನ ವ್ಯಾಖ್ಯಾನದ ಪ್ರಶ್ನೆ ಎದ್ದಾಗ ನ್ಯಾಯಾಂಗವು ಮಧ್ಯಪ್ರವೇಶಿಸಬಹುದು ಮತ್ತು ನ್ಯಾಯಾಂಗದ್ದೇ ಪರಮ ಅಧಿಕಾರವಾಗಿರುತ್ತದೆ. ಒಂದರ್ಥದಲ್ಲಿ ಕಾರ್ಯಾಂಗ ಹಾಗೂ ನ್ಯಾಯಾಂಗದ ನಡುವಿನ ಸಮತೋಲಿತ ಅಧಿಕಾರ ಹಂಚಿಕೆ ಇದು' ಎಂದು ಅಭಿಪ್ರಾಯಪಟ್ಟರು.

ಬಿ.ವಿ. ನಾಗರತ್ನ

ಅಗ್ನಿ ಅವಘಡ ಮತ್ತೊಂದು ಶಿಶು ಸಾವು

ಲಖನೌ/ಝಾನ್ಸಿ (ಪಿಟಿಐ): ಝಾನ್ಸಿ ನಗರದ ಸರ್ಕಾರಿ ಆಸ್ಪತ್ರೆಯ ಮಕ್ಕಳ ವಾರ್ಡ್‌ಗೆ ಬೆಂಕಿ ಬಿದ್ದ ಸಂದರ್ಭದಲ್ಲಿ ರಕ್ಷಿಸಲಾಗಿದ್ದ ನವಜಾತ ಶಿಶು ಅನಾರೋಗ್ಯದಿಂದ ಭಾನುವಾರ ಮೃತಪಟ್ಟಿದೆ ಎಂದು ಅಧಿಕಾರಿಗಳು ತಿಳಿಸಿದರು.

ಇದರೊಂದಿಗೆ ಮಹಾರಾಣಿ ಲಕ್ಷ್ಮಿ ಭಾಯಿ ವೈದ್ಯಕೀಯ ಆಸ್ಪತ್ರೆಯ ಮಕ್ಕಳ ವಾರ್ಡ್‌ಗೆ ದಾಖಲಾಗಿದ್ದ 11 ನವಜಾತ ಶಿಶುಗಳು ಮೃತಪಟ್ಟಂತಾಗಿದೆ. ಶುಕ್ರವಾರ ರಾತ್ರಿ ಅಗ್ನಿ ಅವಘಡದ ಬಳಿಕ 10 ಮಕ್ಕಳು ಸಾವಿಗೀಡಾಗಿದ್ದವು. ಸದ್ಯ ಅನಾರೋಗ್ಯದಿಂದ ಮೃತಪಟ್ಟ ಮಗುವಿಗೆ ಯಾವುದೇ ಸುಟ್ಟ ಗಾಯಗಳು ಇರಲಿಲ್ಲ ಎಂದು ಝಾನ್ಸಿಯ ಜಿಲ್ಲಾಧಿಕಾರಿ ಅವಿನಾಶ್ ಕುಮಾರ್ ತಿಳಿಸಿದ್ದಾರೆ.

ಪ್ರಕರಣವು ಆಕಸ್ಮಿಕವಷ್ಟೆ–ಸಮಿತಿ: ಆಸ್ಪತ್ರೆಯಲ್ಲಿ ನಡೆದ ಅಗ್ನಿ ಅವಘಡಕ್ಕೆ ಸ್ವಿಚ್‌ಬೋರ್ಡ್‌ನಲ್ಲಿ ಉಂಟಾದ ಶಾರ್ಟ್ ಸರ್ಕ್ಯೂಟ್ ಕಾರಣ. ಈ ಅವಘಡದಲ್ಲಿ ಯಾವುದೇ ಪೂರ್ವಯೋಜಿತ ಸಂಚು ಇಲ್ಲ ಎಂದು ತನಿಖೆಗಾಗಿ ಉತ್ತರ ಪ್ರದೇಶ ಸರ್ಕಾರವು ರಚನೆ ಮಾಡಿದ್ದ ನಾಲ್ವರು ಸದಸ್ಯರ ಸಮಿತಿಯು ತಿಳಿಸಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ.

ಮಿನಿ ಒಲಿಂಪಿಕ್ಸ್ ಕ್ರೀಡಾಕೂಟ: ಹೈಜಂಪ್‌ನಲ್ಲಿ ಬಿಯಾಂಕಾ, ಮನೋಜ್‌ಗೆ ಚಿನ್ನದ ಪದಕ

ಇಯಾನ್ ಅಮನ್ನ, ಪೂಜಾ ವೇಗದ ಓಟಗಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರಿನ ಇಯಾನ್ ಅಮನ್ನ ಮತ್ತು ಉಡುಪಿಯ ಪೂಜಾ ಅವರು ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಿನಿ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ನಾಲ್ಕನೇ ದಿನವಾದ ಭಾನುವಾರ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ 100 ಮೀಟರ್ ಓಟದಲ್ಲಿ ಮಿಂಚು ಹರಿಸಿದರು.

ಕರ್ನಾಟಕ ಒಲಿಂಪಿಕ್ಸ್ ಸಂಸ್ಥೆ (ಕೆಒಎ) ಆಶ್ರಯದಲ್ಲಿ ನಡೆಯುತ್ತಿರುವ ಕೂಟದಲ್ಲಿ 11.7 ಸೆಕೆಂಡ್‌ನಲ್ಲಿ ಗುರಿಮುಟ್ಟಿದ ಇಯಾನ್ ಚಿನ್ನಕ್ಕೆ ಮುತ್ತಿಕ್ಕಿದರು. ಉಡುಪಿಯ ಮಿಹಿರ್ ಮುಕುಲ್ ಕರ್ಕೇರ ಮತ್ತು ಯಾದಗಿರಿಯ ಸಿದ್ಧಾರೆಡ್ಡಿ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಪೂಜಾ 13 ಸೆಕೆಂಡ್‌ನಲ್ಲಿ ಗುರಿ ತಲುಪಿ ಚಿನ್ನ ಕೊರಳಿಗೇರಿಸಿಕೊಂಡರು.

ಫಲಿತಾಂಶಗಳು: ಬಾಲಕರು: ಅಥ್ಲೆಟಿಕ್ಸ್: 100 ಮೀ ಓಟ: ಇಯಾನ್ ಅಮನ್ನ (ಮಂಗಳೂರು; ಕಾಲ 11.7ಸೆ)–1, ಮಿಹಿರ್ ಮುಕುಲ್ ಕರ್ಕೇರ (ಉಡುಪಿ)–2, ಸಿದ್ಧಾ ರೆಡ್ಡಿ (ಯಾದಗಿರಿ)–3; ಹೈಜಂಪ್: ಮನೋಜ್ ಕುಮಾರ್ (ಸೋಮವಾರಪೇಟೆ; ಎತ್ತರ 1.49 ಮೀ)–1, ಆರ್.ವೇದಾಂತ್ (ಬೆಂಗಳೂರು)–2, ಜಿತೇಂದ್ರ ದೇವು ಗೌಡ (ಉತ್ತರ ಕನ್ನಡ)–3; ಷಾಟ್‌ಪಟ್: ನಿರಂಜನ್ ಎಂ.ಕೆ. (ರಾಮನಗರ; ಎಸೆತ 11.08 ಮೀ)–1, ಸೂರ್ಯ ಸಮರ್ಥ್ (ಶಿವಮೊಗ್ಗ)–2, ಎಸ್. ಸುದರ್ಶನ್ (ಚಾಮರಾಜನಗರ)–3.

ಈಜು: 4x100 ಮೀ. ಫ್ರೀಸ್ಟೈಲ್ ರಿಲೆ: ಬಸವನಗುಡಿ ಅಕ್ವಾಟಿಕ್ ಸೆಂಟರ್–1, ಮತ್ಸ್ಯಾಯಿಂಕ್–2, ಗ್ಲೋಬಲ್ ಸ್ವಿಮ್ ಸೆಂಟರ್–3; 4x200 ಮೀ. ಫ್ರೀಸ್ಟೈಲ್ ರಿಲೆ: ಬಸವನಗುಡಿ ಅಕ್ವಾಟಿಕ್ಸ್ ಸೆಂಟರ್–1, ಮತ್ಸ್ಯಾಯಿಂಕ್–2, ವಿಜಯನಗರ ಅಕ್ವಾಟಿಕ್ ಸೆಂಟರ್–3; 4x100 ಮೀ.ಮೆಡ್ಲೆ ರಿಲೆ; ಬಸವನಗುಡಿ ಅಕ್ವಾಟಿಕ್ಸ್ ಸೆಂಟರ್–1, ಮತ್ಸ್ಯಾಯಿಂಕ್–2, ಗ್ಲೋಬಲ್ ಸ್ವಿಮ್ ಸೆಂಟರ್–3.

ಜಿಮ್ನಾಸ್ಟಿಕ್ಸ್: ಫ್ಲೋರ್ ಎಕ್ಸ್‌ಸೈಜ್: ಕ್ಯಾಲ್ವಿನ್ ಆಶ್ಲಿ ಚಾರ್ಲ್ಸ್ (ಬೆಂಗಳೂರು)–1, ಉತ್ಕರ್ಷ್ ಬೊಕಾರಿಯಾ (ಬೆಂಗಳೂರು)–2, ಸಂಕೇತ್ ಎಸ್. ಮಾನೆ (ಧಾರವಾಡ)–3; ಪೊಮೆಲ್ ಹಾರ್ಸ್: ಉತ್ಕರ್ಷ ಬೋಕಾರಿಯಾ–1, ಕ್ಯಾಲ್ವಿನ್ ಆಶ್ಲಿ ಚಾರ್ಲ್ಸ್–2, ಸಂಕೇತ್ ಎಸ್. ಮಾನೆ–3; ವಾಲ್ಟ್: ಎಸ್.ಕೆ. ಅನೀಶ್ (ಬೆಂಗಳೂರು)–1, ಕ್ಯಾಲ್ವಿನ್ ಆಶ್ಲಿ ಚಾರ್ಲ್ಸ್–2, ಸಂಕೇತ್ ಎಸ್. ಮಾನೆ–3; ರೋಮನ್ ರಿಂಗ್ಸ್: ಸಂಕೇತ್ ಎಸ್. ಮಾನೆ–1, ಹಿತ್ ತುಷಾರ್ ಸೆಂಘಾನಿ (ಬೆಂಗಳೂರು)–2, ಉತ್ಕರ್ಷ ಬೋಕಾರಿಯಾ ಮತ್ತು ಕವನ್ ಬಿ.ಎಂ.–3; ಪ್ಯಾರಲಲ್ ಬಾರ್ಸ್: ಉತ್ಕರ್ಷ ಬೋಕಾರಿಯಾ–1, ರಾಜೇಶ್ ಆರ್ (ಮೈಸೂರು)–2, ಸಂಕೇತ್ ಎಸ್. ಮಾನೆ–3; ಹಾರಿಜಾಂಟಲ್ ಬಾರ್ಸ್: ಉತ್ಕರ್ಷ ಬೋಕಾರಿಯಾ–1, ಕ್ಯಾಲ್ವಿನ್ ಆಶ್ಲಿ ಚಾರ್ಲ್ಸ್–2–ಸಂಕೇತ್ ಎಸ್. ಮಾನೆ–3; ಏರೋಬಿಕ್ಸ್ ಜಿಮ್ನಾಸ್ಟಿಕ್ಸ್: ಚಿನ್ಮಯಿ ಗೌಡ ಎಲ್ (ಬೆಂಗಳೂರು)–1, ಮಿಹಿರಾ ಕಮಲೇಶ್ (ಬೆಂಗಳೂರು)–2, ಶ್ರೀಶಾ ಗೌಡ ಕೆ. (ಹಾಸನ)–3.

ಬ್ಯಾಡ್ಮಿಂಟನ್: ಸಿಂಗಲ್ಸ್: ಚಿರಾಗ್ ಪ್ರಕಾಶ್ (ಬೆಂಗಳೂರು)–1, ಎನ್.ಡಿ. ನಿಕೇತನ್ ಹರಿ (ಬೆಂಗಳೂರು)–2. **ವಾಲಿಬಾಲ್:** ವಿಜಯಪುರ–1, ವಿದ್ಯಾನಗರ–2, ಕೊಪ್ಪಳ–3. **ಶೂಟಿಂಗ್:** 10 ಮೀ. ಏರ್ ಪಿಸ್ತೂಲ್: ಡ್ಯಾರನ್ ಕೆ. ಡಾನ್ (ಬೆಂಗಳೂರು)–1, ಶ್ರವಣ ಮಠದ ಶಶಿಧರ (ಬೆಂಗಳೂರು)–2, ಪುನೀತ್ ಸಾಯ್ ಎಸ್. (ಬೆಂಗಳೂರು ನಗರ)–3

100 ಮೀ. ಓಟದಲ್ಲಿ ಚಿನ್ನ ಗೆದ್ದ ಮಂಗಳೂರಿನ ಇಯಾನ್ ಅಮನ್ನ (ಬಾಲಕರು). ಉಡುಪಿಯ ಪೂಜಾ (ಬಾಲಕಿಯರು) –ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಬಾಲಕಿಯರು: ಅಥ್ಲೆಟಿಕ್ಸ್: 100 ಮೀ. ಓಟ: ಪೂಜಾ (ಉಡುಪಿ; ಕಾಲ 13ಸೆ)–1, ಖುಷಿ ಎಸ್. (ಶಿವಮೊಗ್ಗ)–2, ಬಿಯಾಂಕಾ ಕಾರಿಯಪ್ಪ (ಬೆಂಗಳೂರು)–3; ಹೈಜಂಪ್: ಬಿಯಾಂಕಾ ಕಾರಿಯಪ್ಪ (ಎತ್ತರ: 1.38 ಮೀ)–1, ಯಶಸ್ವಿನಿ ಆರ್. (ಚಿತ್ರದುರ್ಗ)–2, ನುಮೈರಾ ಸೈಫ್ (ಚಿತ್ರದುರ್ಗ)–3; ಜಾವೆಲಿನ್ ಥ್ರೋ; ತನಿಷ್ಕಾ ಸಿ. (ಬೆಂಗಳೂರು; ಎಸೆತ 27.48 ಮೀ)–1, ಐಮನ್ ಮಹಮ್ಮದಿ (ಚಿಕ್ಕಮಗಳೂರು)–2, ಶಿವಾನಿ ಶೆಲರ (ಬೆಳಗಾವಿ)–3

ಈಜು: 4x100 ಮೀ. ಫ್ರೀಸ್ಟೈಲ್ ರಿಲೆ: ಬಸವನಗುಡಿ ಅಕ್ವಾಟಿಕ್ಸ್ ಸೆಂಟರ್–1, ಡಿಕೆವಿ ಅಕ್ವಾಟಿಕ್ ಸೆಂಟರ್–2, ಗ್ಲೋಬಲ್ ಸ್ವಿಮ್ ಸೆಂಟರ್–3; 4x200 ಮೀ. ಫ್ರೀಸ್ಟೈಲ್ ರಿಲೆ: ಡಿಕೆವಿ ಅಕ್ವಾಟಿಕ್ ಸೆಂಟರ್–1, ಬಸವನಗುಡಿ ಅಕ್ವಾಟಿಕ್ಸ್ ಸೆಂಟರ್–2, ಗ್ಲೋಬಲ್ ಸ್ವಿಮ್ ಸೆಂಟರ್–3. 4x100 ಮೀ.ಮೆಡ್ಲೆ ರಿಲೆ; ಗ್ಲೋಬಲ್ ಸ್ವಿಮ್ ಸೆಂಟರ್–1, ಡಿಕೆವಿ ಅಕ್ವಾಟಿಕ್ ಸೆಂಟರ್–2, ಬಸವನಗುಡಿ ಅಕ್ವಾಟಿಕ್ಸ್ ಸೆಂಟರ್–3.

ಜಿಮ್ನಾಸ್ಟಿಕ್ಸ್: ಫ್ಲೋರ್ ಎಕ್ಸ್‌ಸೈಜ್: ರಿಯಾ ಎಂ. (ಬೆಂಗಳೂರು)–1, ನಿಯಾ ಮೇರಿ ವರ್ಗೀಸ್ (ಬೆಂಗಳೂರು)–2, ಅನ್ವಿ ಎ. ಹರಿಥಾಸ (ಮೈಸೂರು)–3; ವಾಲ್ಟ್: ರಿಯಾ ಎಂ.–1, ನಿಯಾ ಮೇರಿ ವರ್ಗೀಸ್–2, ಅನ್ವಿ ಎ. ಹರಿಥಾಸ–3; ಅನ್‌ಇವನ್ ಬಾರ್ಸ್: ನಿಯಾ ಮೇರಿ ವರ್ಗೀಸ್–1, ರಿಯಾ ಎಂ–2, ಅನ್ವಿ ಎ. ಹರಿಥಾಸ–3; ಬ್ಯಾಲೆನ್ಸಿಂಗ್ ಬೀಮ್: ಜಾನ್ವಿ ಎಲ್. ಗೌಡ (ಬೆಂಗಳೂರು)–1, ಅನ್ವಿ ಎ. ಹರಿಥಾಸ–2, ರಿಯಾ ಎಂ ಮತ್ತು ವೇದಾ ಸಿದ್ದಪ್ಪ (ಧಾರವಾಡ)–3; ಏರೋಬಿಕ್ಸ್ ಜಿಮ್ನಾಸ್ಟಿಕ್ಸ್: ಉನ್ನತಿ ಬೊಕಾರಿಯಾ (ಬೆಂಗಳೂರು)–1, ತನಿಶಾ ದೇವ (ಬೆಂಗಳೂರು)–2, ಸಾನ್ವಿ ಗುಡ್ಡೇನವರ (ಧಾರವಾಡ)–3.

ವೇಟ್‌ಲಿಫ್ಟಿಂಗ್: 71 ಕೆಜಿ: ಏಕ್ತಾ ಗುಂಡು ರಾವತ್ (ಬೆಳಗಾವಿ)–1, ಜಿಶಾನಾ ಫಾತಿಮಾ (ಉಡುಪಿ)–2, ಅನ್ವಿ ಹರ್ಷದ್ ಠಾಕೂರ್ (ಬೆಂಗಳೂರು)–3; 76ಕೆಜಿ: ಪಾವನಿ ಜೆ.ಆರ್. (ಹಾಸನ)–1, ದಿಶಾಲಿ (ದಕ್ಷಿಣ ಕನ್ನಡ)–2, ಖುಷಿ ಆರ್ (ಬೆಂಗಳೂರು)–3; 76 + ಕೆಜಿ: ಭುವನೇಶ್ವರಿ (ಉಡುಪಿ)–1, ಪೂರ್ವಿತಾ ಉತ್ಕರ್ಷ್ ದೊಮನೆ (ಬೆಳಗಾವಿ)–2, ಮೊನಿಶಾ (ಉಡುಪಿ)–3. **ಬ್ಯಾಡ್ಮಿಂಟನ್:** ಸಿಂಗಲ್ಸ್: ಕಂದಿಬಿಲ್ಲ ಶ್ರೇಯಾ (ಬೆಂಗಳೂರು)–1, ತನ್ವಿ ಮುನೋತ್ (ಬೆಂಗಳೂರು)–2. **ವಾಲಿಬಾಲ್:** ಕೊಪ್ಪಳ–1, ಹಾಸನ–2, ಯಾದಗಿರಿ–3. **ಶೂಟಿಂಗ್:** 10 ಮೀ. ಏರ್ ಪಿಸ್ತೂಲ್: ನಿಸರ್ಗಾ ಎಚ್.ಎಸ್ (ಶಿವಮೊಗ್ಗ)–1, ದ್ವಿಜಾ ಮೋಹಿತ್ ಗೌಡ (ಬೆಂಗಳೂರು)–2, ಗಂಬೇರಿಯಾ ವಿ ಗೌಡ(ಬೆಂಗಳೂರು)–3.

ಇಟಲಿಯ ಯಾನಿಕ್ ಸಿನ್ನರ್ ಅವರು ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು. ಭಾನುವಾರ ರಾತ್ರಿ ನಡೆದ ಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಸಿನ್ನರ್ 6–4, 6–4ರಿಂದ ಅಮೆರಿಕದ ಟೇಲರ್ ಫ್ರಿಟ್ಜ್ ಅವರನ್ನು ಮಣಿಸಿದರು –ಎಎಫ್‌ಪಿ ಚಿತ್ರ

ಸ್ಟೀಲರ್ಸ್‌ ಮಣಿದ ತಲೈವಾಸ್

ನೋಯಿಡಾ(ಪಿಟಿಐ): ಪ್ರೊ ಕಬಡ್ಡಿ ಟೂರ್ನಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಹರಿಯಾಣ ಸ್ಟೀಲರ್ಸ್ ತಂಡವು ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ತಮಿಳು ತಲೈವಾಸ್ ವಿರುದ್ಧ ಜಯಿಸಿತು.

ಜಿದ್ದಾಜಿದ್ದಿಯಿಂದ ಕೂಡಿದ್ದ ಪಂದ್ಯದಲ್ಲಿ ಹರಿಯಾಣ ತಂಡವು 36–29ರಿಂದ ತಲೈವಾಸ್ ಎದುರು ಗೆದ್ದಿತು.

ಹರಿಯಾಣ ತಂಡದ ಮೊಹಮ್ಮದ್ ರೆಝಾ ಶಾದಲಾಯಿ ಅವರು ಏಳು ಅಂಕಗಳನ್ನು ಗಳಿಸಿದರು. ಮೊದಲಾರ್ಧದಲ್ಲಿ ತಲೈವಾಸ್ ತಂಡವು 17–14ರಿಂದ ಮುನ್ನಡೆ ಸಾಧಿಸಿತು. ಹರಿಯಾಣ ಡು ಆರ್ ಡೈನಲ್ಲಿ ವಿಫಲವಾಯಿತು. ಆದರೆ ಎರಡನೇ ಅವಧಿಯಲ್ಲಿ ಹರಿಯಾಣ ಪಾರಮ್ಯ ಮೆರೆಯಿತು. ಮುನ್ನಡೆ ಗಳಿಸಿ ಗೆಲುವಿನತ್ತ ಸಾಗಿತು.

ಎರಡನೇ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 30–28ರಿಂದ ಪುಣೇರಿ ಪಲ್ಟನ್ಸ್ ವಿರುದ್ಧ ಜಯಿಸಿತು.

ನಾಲ್ಕರ ಘಟ್ಟಕ್ಕೆ ಅಜೇಯ ಭಾರತ

ಎರಡು ಗೋಲು ಹೊಡೆದು ಮಿಂಚಿದ ದೀಪಿಕಾ: ಜಪಾನ್ ತಂಡಕ್ಕೆ ಸೋಲು

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಜಪಾನ್ ತಂಡದ ಎದುರು ಗೋಲು ಗಳಿಸುವ ಪ್ರಯತ್ನದಲ್ಲಿ ಭಾರತದ ಆಟಗಾರ್ತಿಯರು –ಪಿಟಿಐ ಚಿತ್ರ

ರಾಜಗೀರ್ (ಬಿಹಾರ) (ಪಿಟಿಐ): ಹಾಲಿ ಚಾಂಪಿಯನ್ ಭಾರತ ಹಾಕಿ ತಂಡ ಅಜೇಯ ದಾಖಲೆಯೊಂದಿಗೆ ಮಹಿಳಾ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದೆ. ಭಾನುವಾರ ನಡೆದ ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ಜಪಾನ್ ವಿರುದ್ಧ 3–0 ಗೋಲುಗಳಿಂದ ಭರ್ಜರಿ ಗೆಲುವು ಸಾಧಿಸಿತು.

ಅಮೋಘ ಲಯ ಮುಂದುವರೆಸಿದ ತಾರಾ ಸ್ಟ್ರೈಕರ್ ದೀಪಿಕಾ ಕೊನೆಯ ಕ್ವಾರ್ಟರ್‌ನಲ್ಲಿ ಎರಡು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಲ್ಲಿ (47, 48ನೇ ನಿಮಿಷ) ಪರಿವರ್ತಿಸಿದರು. ಉಪನಾಯಕಿ ನವನೀತ್ ಕೌರ್ (37ನೇ ನಿಮಿಷ) ಒಂದು ಗೋಲು ಹೊಡೆದರು.

ಈ ಗೆಲುವಿನೊಂದಿಗೆ ಭಾರತ ತಂಡ ಐದು ಪಂದ್ಯಗಳಿಂದ 15 ಅಂಕ ಕಲೆ ಹಾಕಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಮಂಗಳವಾರ ನಡೆಯುವ ಸೆಮಿಫೈನಲ್‌ನಲ್ಲಿ ಭಾರತ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಜಪಾನ್ ತಂಡವನ್ನು ಎದುರಿಸಲಿದೆ. ಮತ್ತೊಂದು ಸೆಮಿಯಲ್ಲಿ ಮೂರನೇ ಸ್ಥಾನದಲ್ಲಿರುವ ಚೀನಾ ತಂಡವು ಮಲೇಷ್ಯಾ ತಂಡವನ್ನು ಎದುರಿಸಲಿದೆ.

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ

ಟೂರ್ನಿಯಲ್ಲಿ ದೀಪಿಕಾ (10 ಗೋಲು) ಅತಿ ಹೆಚ್ಚು ಗೋಲುಗಳನ್ನು ಹೊಡೆದ ಆಟಗಾರ್ತಿಯಾಗಿದ್ದಾರೆ. ಇದರಲ್ಲಿ ನಾಲ್ಕು ಫೀಲ್ಡ್ ಗೋಲು, ಐದು ಪೆನಾಲ್ಟಿ ಕಾರ್ನರ್ ಮತ್ತು ಒಂದು ಪೆನಾಲ್ಟಿ ಸ್ಟ್ರೋಕ್ ಒಳಗೊಂಡಿದೆ.

ಪಂದ್ಯದ ಆರಂಭದಿಂದಲೇ ಭಾರತ ಸಾಲು ಸಾಲು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಪಡೆಯಿತು. ಎಂಟನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್‌ನಲ್ಲಿ ಸ್ಟ್ರೈಕರ್ ದೀಪಿಕಾ ಹೊಡೆದ ಚೆಂಡನ್ನು ಜಪಾನ್ ತಂಡದ ಗೋಲ್‌ಕೀಪರ್ ಯು ಕುಡೊ ತಡೆದ ರೀತಿ ಅದ್ಭುತವಾಗಿತ್ತು. 13ನೇ ನಿಮಿಷದಲ್ಲಿ ಭಾರತ ಮತ್ತೆ ಪೆನಾಲ್ಟಿ ಅವಕಾಶ ಪಡೆಯಿತು. ಆದರೆ ಇದನ್ನು ವ್ಯರ್ಥ ಮಾಡಿತು.

ಕೊನೆಗೂ 37ನೇ ನಿಮಿಷದಲ್ಲಿ ಎದುರಾಳಿಗಳನ್ನು ವಂಚಿಸುವಲ್ಲಿ ಭಾರತ ಯಶಸ್ವಿಯಾಯಿತು. ನವನೀತ್ ಚಾಕಚಕ್ಯತೆಯಿಂದ ರಿವರ್ಸ್ ಹೊಡೆತ ಪ್ರಯೋಗಿಸಿ ಗೋಲು ಗಳಿಸಿದರು.

47ನೇ ನಿಮಿಷದಲ್ಲಿ ಭಾರತ ಪ್ರಾಬಲ್ಯ ಮೆರೆದು ಸತತ ಮೂರು ಪೆನಾಲ್ಟಿ ಕಾರ್ನರ್ ಅವಕಾಶ ಪಡೆಯಿತು. ಕೊನೆಗೂ ಸ್ಟ್ರೈಕರ್ ದೀಪಿಕಾ ಡ್ರ್ಯಾಗ್‌ಫ್ಲಿಕ್ ಹೊಡೆತದ ನೆರವಿನಿಂದ ಗೋಲು ದಾಖಲಿಸಿದರು.

ಒಂದೇ ನಿಮಿಷದ ಅಂತರದಲ್ಲಿ ಬಲಶಾಲಿ ಹೊಡೆತದ ನೆರವಿನಿಂದ ಮತ್ತೊಂದು ಗೋಲು ಹೊಡೆದು ಗೆಲುವನ್ನು ಖಚಿತಪಡಿಸಿದರು.

ಭಾರತದ ಡಿಫೆನ್ಸರ್‌ಗಳಾದ ಉದಿತಾ ಮತ್ತು ಸುಶೀಲಾ ಚಾನು ಚಾಣಾಕ್ಷ ನಡೆಯಿಂದಾಗಿ ಜಪಾನ್ ತಂಡಕ್ಕೆ ಗೋಲ್ ಪೋಸ್ಟ್ ಬಳಿ ಚೆಂಡನ್ನು ಬರಲು ಬಿಡಲಿಲ್ಲ. ನಾಯಕಿ ಸಲೀಮಾ ಟೆಟೆ, ನೇಹಾ ಮತ್ತು ಶರ್ಮಿಳಾ ದೇವಿ ಮಿಡ್‌ಫೀಲ್ಡ್‌ನಲ್ಲಿ ಅವಕಾಶಗಳನ್ನು ಸೃಷ್ಟಿಸಿ ಜಾಣತನದಿಂದ ಕೌಶಲ್ಯ ಮೆರೆದರು.

ಮತ್ತೊಂದು ಪಂದ್ಯದಲ್ಲಿ ಮಲೇಷ್ಯಾ 2–0 ರಿಂದ ಥಾಯ್ಲೆಂಡ್ ತಂಡವನ್ನು ಮಣಿಸಿತು. ಚೀನಾ 2–0ರಿಂದ ದಕ್ಷಿಣ ಕೊರಿಯಾ ತಂಡವನ್ನು ಸೋಲಿಸಿತು.

ಪರ್ತ್ ಟೆಸ್ಟ್: ರೋಹಿತ್ ಶರ್ಮಾ ಗೈರು; ಜಸ್‌ಪ್ರೀತ್ ಬೂಮ್ರಾ ನಾಯಕತ್ವ

ಇನಿಂಗ್ಸ್ ಆರಂಭಿಸಲು ರಾಹುಲ್ ಸಿದ್ಧ

ಭಾರತ ತಂಡದ ಆಟಗಾರ ಕೆ.ಎಲ್‌. ರಾಹುಲ್

ಪರ್ತ್ (ಪಿಟಿಐ): ಭಾನುವಾರ ದೀರ್ಘ ಸಮಯದವರೆಗೆ ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ನಡೆಸಿದ ಕೆ.ಎಲ್. ರಾಹುಲ್ ತಾವು ಫಿಟ್ ಆಗಿರುವುದಾಗಿ ಸಂದೇಶ ನೀಡಿದರು. ರೋಹಿತ್ ಶರ್ಮಾ ಅವರು ಸರಣಿಯ ಮೊದಲ ಟೆಸ್ಟ್‌ನಲ್ಲಿ ಆಡುವುದಿಲ್ಲವೆಂಬುದು ಖಚಿತವಾಗಿದ್ದು, ರಾಹುಲ್ ಇನಿಂಗ್ಸ್ ಆರಂಭಿಸಲಿದ್ದಾರೆ.

ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಈ ಪಂದ್ಯದಲ್ಲಿ ಭಾರತ ತಂಡದ ನಾಯಕತ್ವ ವಹಿಸುವರು. ರೋಹಿತ್ ಶರ್ಮಾ ದಂಪತಿಗೆ ಶುಕ್ರವಾರ ಗಂಡು ಮಗು ಜನಿಸಿತ್ತು. ಆದ್ದರಿಂದ ರೋಹಿತ್ ಅವರು ಮೊದಲ ಪಂದ್ಯದಲ್ಲಿ ಆಡದಿರಲು ನಿರ್ಧರಿಸಿದ್ದಾರೆ. ಅಡಿಲೇಡ್‌ನಲ್ಲಿ ನಡೆಯುವ ಎರಡನೇ ಪಂದ್ಯದಲ್ಲಿ ಅವರು ಕಣಕ್ಕಿಳಿಯುವ ಸಾಧ್ಯತೆ ಇದೆ.

ಈಚೆಗೆ ಇಲ್ಲಿ ನಡೆದಿದ್ದ ಇಂಟ್ರಾ ಸ್ಕ್ವಾಡ್ ಪಂದ್ಯದಲ್ಲಿ ಕೆ.ಎಲ್. ರಾಹುಲ್ ಅವರ ಮೊಣಕೈಗೆ ಚೆಂಡು ಬಡಿದು ಪೆಟ್ಟಾಗಿತ್ತು. ಕೂಡಲೇ ಮೈದಾನದಿಂದ ಹೊರನಡೆದಿದ್ದ ಅವರು ಚಿಕಿತ್ಸೆ ಪಡೆದಿದ್ದರು. ಆದ್ದರಿಂದ ಅವರು ಆಡುವ ಕುರಿತು ಅನುಮಾನಗಳಿದ್ದವು.

ಇದೀಗ ಅವರು ನೆಟ್ಸ್‌ನಲ್ಲಿ ತಮ್ಮ ಫಿಟ್‌ನೆಸ್ ಸಾಬೀತು ಮಾಡಿದ್ದಾರೆ. ಅವರ ಹಾವಭಾವದಲ್ಲಿ ಆತ್ಮವಿಶ್ವಾಸವಿತ್ತು. ಉಲ್ಲಾಸ ಭರಿತರಾಗಿ ಬ್ಯಾಟಿಂಗ್ ಮಾಡಿದರು. ಇದರಿಂದಾಗಿ ಅವರ ಗಾಯ ಶಮನವಾಗಿರುವುದು ಸ್ಪಷ್ಟವಾಗಿದೆ. 32 ವರ್ಷದ ರಾಹುಲ್ ಅವರು ಯಶಸ್ವಿ ಜೈಸ್ವಾಲ್ ಅವರೊಂದಿಗೆ ಇನಿಂಗ್ಸ್ ಆರಂಭಿಸಲು ತಂಡದ ಮ್ಯಾನೇಜ್‌ಮೆಂಟ್ ಹಸಿರು ನಿಶಾನೆ ತೋರಿಸಿದ್ದಾರೆಂದು ಮೂಲಗಳು ಹೇಳಿವೆ. ಆದರೆ ಶುಭಮನ್ ಗಿಲ್ ಅವರ ಹೆಬ್ಬೆರಳಿನ ಮೂಳೆ ಮುರಿತದಿಂದಾಗಿ ಮೊದಲ ಟೆಸ್ಟ್ ಆಡುತ್ತಿಲ್ಲ.

‘ಆ ದಿನ ಪೆಟ್ಟು ಜೋರಾಗಿಯೇ ಬಿದ್ದಿತ್ತು. ಚಿಕಿತ್ಸೆ ನಂತರ ಸುಧಾರಿಸಿಕೊಂಡಿದ್ದೇನೆ. ಇವತ್ತು ಸಂಪೂರ್ಣ ಗುಣಮುಖನಾಗಿರುವೆ. ಮೊದಲ ಪಂದ್ಯಕ್ಕೆ ಸಿದ್ಧವಾಗುತ್ತಿರುವೆ. ಇಲ್ಲಿಗೆ (ಆಸ್ಟ್ರೇಲಿಯಾ) ನಾನು ಬೇಗ ಬರಲು ಸಾಧ್ಯವಾಗಿದ್ದು ಮತ್ತು ಇಲ್ಲಿಯ ವಾತಾವರಣಕ್ಕೆ ಒಗ್ಗಿಕೊಂಡಿದ್ದು ಸಂತಸವಾಗಿದೆ. ಪೂರ್ವಸಿದ್ಧತೆ ನಡೆಸಲೂ ಬಹಳಷ್ಟು ಸಮಯ ಲಭಿಸಿದೆ’ ಎಂದು ರಾಹುಲ್ ಅವರು ಬಿಸಿಸಿಐ ಎಕ್ಸ್‌ನಲ್ಲಿ ಹಾಕಿರುವ ವಿಡಿಯೊದಲ್ಲಿ ಹೇಳಿದ್ದಾರೆ.

ಮುಂಬೈನಿಂದ ಆಸ್ಟ್ರೇಲಿಯಾಕ್ಕೆ ತಂಡವು ಹೊರಡುವ ಮುನ್ನಾ ನಡೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮುಖ್ಯಕೋಚ್ ಗೌತಮ್ ಗಂಭೀರ್ ಅವರು ರೋಹಿತ್ ಬರದಿದ್ದರೆ, ರಾಹುಲ್‌ಗೆ ಅಗ್ರ ಕ್ರಮಾಂಕಕ್ಕೆ ಬಡ್ತಿ ನೀಡುವ ಬಗ್ಗೆ ಪ್ರಸ್ತಾಪ ಮಾಡಿದ್ದರು.

ರಾಹುಲ್ ಗಾಯದ ಕುರಿತು ಪ್ರತಿಕ್ರಿಯಿಸಿರುವ ತಂಡದ ಫಿಸಿಯೊ ಕಮಲೇಶ್ ಜೈನ್, ‘ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸಿದ್ದಾರೆ. ಅದೃಷ್ಟವಶಾತ್ ಮೂಳೆ ಮುರಿತವಿರಲಿಲ್ಲ. ಗಾಯದ ನಂತರದ 48 ಗಂಟೆಗಳ ಅವಧಿಯಲ್ಲಿ ನೀಡಿದ ಚಿಕಿತ್ಸೆಗಳಿಗೆ ಅವರು ಉತ್ತಮ ರೀತಿಯಲ್ಲಿ ಸ್ಪಂದಿಸಿದ್ದಾರೆ. ಅವರು ಪಂದ್ಯಗಳಲ್ಲಿ ಆಡಲು ಸಿದ್ಧವಾಗಿದ್ದಾರೆ’ ಎಂದಿದ್ದಾರೆ.

ಆಸ್ಟ್ರೇಲಿಯಾದಲ್ಲಿ ಉಳಿದ ದೇವದತ್ತ: ಭಾರತ ಎ ತಂಡದಲ್ಲಿ ಆಡಿದ್ದ ಕರ್ನಾಟಕದ ದೇವದತ್ತ ಪಡಿಕ್ಕಲ್ ಅವರನ್ನು ಆಸ್ಟ್ರೇಲಿಯಾದಲ್ಲಿಯೇ ಉಳಿಸಿಕೊಳ್ಳಲು ಬಿಸಿಸಿಐ ನಿರ್ಧರಿಸಿದೆ. ಅವರೊಂದಿಗೆ ಮೂವರು ಬೌಲರ್‌ಗಳು ಕೂಡ ಅಲ್ಲಿಯೇ ಉಳಿದಿದ್ದಾರೆ.

ಈಚೆಗೆ ಆಸ್ಟ್ರೇಲಿಯಾ ಎ ವಿರುದ್ಧ ನಡೆದಿದ್ದ ಎರಡು ಪಂದ್ಯಗಳ ಸರಣಿಯಲ್ಲಿ ಅವರು ಆಡಿದ್ದರು. ದೇವದತ್ತ ಜೊತೆಗೆ ಆಡಿದ್ದ ಮುಕೇಶ್ ಕುಮಾರ್, ಖಲೀಲ್ ಅಹಮದ್ ಮತ್ತು ನವದೀಪ್ ಸೈನಿ ಅವರನ್ನೂ ಆಸ್ಟ್ರೇಲಿಯಾದಲ್ಲಿಯೇ ಉಳಿಸಿಕೊಳ್ಳಲಾಗಿದೆ. ಇವರೆಲ್ಲರೂ ನೆಟ್ಸ್ ಅಭ್ಯಾಸದಲ್ಲಿ ಪಾಲ್ಗೊಂಡಿದ್ದರು.

ಆಸ್ಟ್ರೇಲಿಯಾಕ್ಕಿಲ್ಲ ಶಮಿ; ಪ್ರಸಿದ್ಧಗೆ ಅವಕಾಶ?

ಪ್ರಸಿದ್ಧ ಕೃಷ್ಣ

ನವದೆಹಲಿ (ಪಿಟಿಐ): ರಣಜಿ ಟ್ರೋಫಿ ಟೂರ್ನಿಯ ಪಂದ್ಯದಲ್ಲಿ ಗಮನ ಸೆಳೆದ ವೇಗಿ ಮೊಹಮ್ಮದ್ ಶಮಿ ಅವರು ಆಸ್ಟ್ರೇಲಿಯಾಕ್ಕೆ ತೆರಳುತ್ತಿಲ್ಲ. ಅವರು ಮುಂದಿನ ವಾರ ಆರಂಭವಾಗಲಿರುವ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಆಡಲಿದ್ದಾರೆ.

ಇದರಿಂದಾಗಿ ಪರ್ತ್ ಟೆಸ್ಟ್‌ನಲ್ಲಿ ಆಡುವ ಭಾರತ ತಂಡದಲ್ಲಿ ಮೂರನೇ ವೇಗಿಯಾಗಿ ಸ್ಥಾನ ಪಡೆಯಲು ಬೌಲರ್‌ಗಳ ಪೈಪೋಟಿ ಜೋರಾಗಿದೆ. ಪ್ರಮುಖವಾಗಿ ಹರ್ಷಿತ್ ರಾಣಾ ಮತ್ತು ಪ್ರಸಿದ್ಧ ಕೃಷ್ಣ ಅವರ ನಡುವೆ ಸ್ಪರ್ಧೆ ಇದೆ. ಹರ್ಷಿತ್ ಅವರು 10 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ. ಅವರು 140 ಕಿ.ಮೀ ಪ್ರತಿ ಗಂಟೆಯ ವೇಗದಲ್ಲಿ ಎಸೆತಗಳನ್ನು ಹಾಕಬಲ್ಲರು. ಜೊತೆಗೆ ಉತ್ತಮ ಬೌನ್ಸರ್‌ಗಳನ್ನು ಪ್ರಯೋಗಿಸಬಲ್ಲರು. ಈ ಅಂಶ ಆಯ್ಕೆಗಾರರ ಗಮನ ಸೆಳೆದಿವೆ.

ಇನ್ನೊಂದೆಡೆ ತಂಡದ ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್, ಕನ್ನಡಿಗ ಪ್ರಸಿದ್ಧ ಅವರೊಂದಿಗೆ ಹೆಚ್ಚು ಹೊತ್ತು ಮಾರ್ಗದರ್ಶನ ನೀಡಿದರು. ಈಚೆಗೆ ನಡೆದ ಎ ತಂಡಗಳ ಸರಣಿಯಲ್ಲಿ ಪ್ರಸಿದ್ಧ ಅವರು ಗಮನ ಸೆಳೆದಿದ್ದರು. ಪ್ರಸಿದ್ಧ ಅವರಿಗೆ ಈಗಾಗಲೇ ಎರಡು ಟೆಸ್ಟ್ ಪಂದ್ಯಗಳಲ್ಲಿ ಆಡಿರುವ ಅನುಭವ ಇದೆ.

ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಬಾರ್ಡರ್ –ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿಯೇ ಮೊಹಮ್ಮದ್ ಶಮಿ ಭಾರತ ತಂಡಕ್ಕೆ ಮರಳುವ ಸಾಧ್ಯತೆ ಇದೆ. ಆದರೆ ಅದು ಮೊದ ಲ ಮತ್ತು ಎರಡನೇ ಪಂದ್ಯದಲ್ಲಿ ಆಗಲಿಕ್ಕಿಲ್ಲ. ನಂತರದ ಪಂದ್ಯಗಳಲ್ಲಿ ಅವರು ಆಸ್ಟ್ರೇಲಿಯಾಕ್ಕೆ ತೆರಳುವ ಸಾಧ್ಯತೆ ಇದೆ ಎನ್ನಲಾಗಿದೆ.

‘ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯಲ್ಲಿ ಆಡುವ ಬಂಗಾಳ ತಂಡವನ್ನು ಸೋಮವಾರ ಆಯ್ಕೆ ಮಾಡಲಾಗುವುದು. ಶಮಿ ಅವರು ಆಸ್ಟ್ರೇಲಿಯಾಕ್ಕೆ ತೆರಳುತ್ತಿಲ್ಲ. ಅವರು ರಾಜ್ಯ ತಂಡದ ಆಯ್ಕೆಗೆ ಲಭ್ಯರಿರುವ ವಿಶ್ವಾಸವಿದೆ’ ಎಂದು ಬಂಗಾಳದ ಮುಖ್ಯ ಕೋಚ್ ಲಕ್ಷ್ಮೀ ರತನ್ ಶುಕ್ಲಾ ಸ್ಪಷ್ಟಪಡಿಸಿದ್ದಾರೆ.

ಕಲಬುರಗಿಯಲ್ಲಿ ಪುರುಷರ ಐಟಿಎಫ್ ಟೆನಿಸ್

ಧೀರಜ್, ಸಿದ್ಧಾಂತ್ ಮುನ್ನಡೆ

• ಮಲ್ಲಪ್ಪ ಪಾರೇಗಾಂವ

ಯಶ್ ಚೌರಾಸಿಯಾ ಆಟದ ಪರಿ –ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿ: ಬೆಂಗಳೂರಿನ ಧೀರಜ್ ಕೆ. ಶ್ರೀನಿವಾಸ್ ಅವರು ಭಾನುವಾರ ಇಲ್ಲಿ ಆರಂಭವಾದ ಐಟಿಎಫ್ ಟೆನಿಸ್ ಟೂರ್ನಿಯ ಅರ್ಹತಾ ಸುತ್ತಿನ ಮೊದಲ ಹಂತದಲ್ಲಿ ಜಯಿಸಿದರು. ಆದರೆ ಕಣದಲ್ಲಿರುವ ಕರ್ನಾಟಕದ ಉಳಿದ ಆಟಗಾರರು ನಿರಾಶೆ ಅನುಭವಿಸಿದರು.

ಇಲ್ಲಿನ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಟಿಎಫ್ ಪುರುಷರ ಟೆನಿಸ್ ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯದಲ್ಲಿ ಬೆಂಗಳೂರಿನ ಧೀರಜ್ ಅವರು, ಮುಂಬೈನ ಪ್ರಜ್ವಲ್ ತಿವಾರಿ ವಿರುದ್ಧ 6–2, 6–2 ಸೆಟ್‌ಗಳಿಂದ ಗೆದ್ದು 2ನೇ ಸುತ್ತಿಗೆ ಪ್ರವೇಶಿಸಿದರು. ಅಲ್ಲಿ ಅವರು ಮುಂಬೈನ ಉದಿತ್ ಕಾಂಬೋಜ್ ಅವರನ್ನು ಎದುರಿಸಲಿದ್ದಾರೆ.

ಮೈಸೂರಿನ ಯೋಗಿನ್ ಎಸ್. ಪ್ರಕಾಶ್ ಅವರು 4–6, 4–6ರಿಂದ ಪ್ರಣವ್ ಕಾರ್ತಿಕ್ ಎದುರು ಪರಾಭವಗೊಂಡರು. ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದ ಜೇಸನ್ ಡೇವಿಡ್ 2–6, 2–6ರಿಂದ ರೋಹನ್ ಮೆಹ್ರಾ ಎದುರು ಸೋತರು. ಇನ್ನೊಂದು ಪಂದ್ಯದಲ್ಲಿ ಒಡಿಶಾದ ಕಬೀರ್ ಹನ್ಸ್ ಎದುರು 6–4, 2–6, 10–8ರಿಂದ ಟೈಬ್ರೇಕರ್‌ನಲ್ಲಿ ಒ. ಜಯಪ್ರಕಾಶ್ ಅವರನ್ನು ಮಣಿಸಿದರು.

ಟೂರ್ನಿಯ ಅಗ್ರಶ್ರೇಯಾಂಕದ ಆಟಗಾರ ಸಿದ್ಧಾಂತ್ ಬಂಥಿಯಾ, ಕಬೀರ್ ಹನ್ಸ್, ವಿಯೆಟ್ನಾಂನ ಹಾ ಮಿನ್ಹ ಡಕ್ ವು, ಇಂಡೋನೇಷ್ಯಾದ ಅಂಥೋನಿ ಸುಸಾಂತೊ ಅರ್ಹತಾ 2ನೇ ಸುತ್ತಿಗೆ ಪ್ರವೇಶ ಪಡೆದರು.

ಸಿದ್ಧಾಂತ ಬಂಥಿಯಾ ಅವರು, ಧರ್ಮಿಲ್ ಶಾ ಅವರನ್ನು 6–0, 6–1 ನೇರ ಸೆಟ್‌ಗಳಿಂದ ಪರಾಭವಗೊಳಿಸಿದರು. ವಿಯೆಟ್ನಾಂನ ಹಾ ಮಿನ್ಹ ಡಕ್ ವು ಅವರು, ಭಾರತದ ಅನುರಾಗ್ ಅಗರವಾಲ್ ಅವರನ್ನು 6–1, 6–0 ಸೆಟ್‌ಗಳಿಂದ ಮಣಿಸಿದರು. ಇಂಡೋನೇಷ್ಯಾದ ಅಂಥೋನಿ ಅವರು, ಭಾರತದ ಶಿವಂ ಖನ್ನಾ ಅವರನ್ನು 6–4, 6–1 ಸೆಟ್‌ಗಳಿಂದ ಪರಾಭವಗೊಳಿಸಿ, ಮುಂದಿನ ಸುತ್ತಿಗೆ ಪ್ರವೇಶಿಸಿದರು. ಉಳಿದಂತೆ ಪ್ರಣವ್ ಕಾರ್ತಿಕ್, ನಿತಿನ್ ಕುಮಾರ್ ಸಿನ್ಹಾ, ಯಶ್ ಚೌರಾಸಿಯಾ, ಮಾನ್ ಕೇಶರ್ವಾನಿ, ಮುನಿ ಅನಂತ ಮಣಿ, ಪ್ರಿಯಾಂಶು ಚೌಧರಿ ಅರ್ಹತಾ 2ನೇ ಸುತ್ತಿಗೆ ಪ್ರವೇಶಿಸಿದರು.

ತಮಿಳುನಾಡಿಗೆ ಮಣಿದ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಜುರಿ ಅವಧಿಯಲ್ಲಿ ಗೋಲು ಬಿಟ್ಟುಕೊಟ್ಟ ಪರಿಣಾಮ ಕರ್ನಾಟಕ ತಂಡವು ಸಂತೋಷ್ ಟ್ರೋಫಿಗಾಗಿ ನಡೆಯುತ್ತಿರುವ 78ನೇ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ‘ಜಿ’ ಗುಂಪಿನ ಪಂದ್ಯದಲ್ಲಿ 1–2 ಗೋಲುಗಳಿಂದ ತಮಿಳುನಾಡು ತಂಡಕ್ಕೆ ಮಣಿಯಿತು.

ಅನಂತಪುರದ ಆರ್‌ಡಿಟಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಲಿಜೊ ಕೆ. 30ನೇ ನಿಮಿಷದಲ್ಲಿ ಗೋಲು ದಾಖಲಿಸಿ ತಮಿಳುನಾಡು ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು. 80ನೇ ನಿಮಿಷದಲ್ಲಿ ಕರ್ನಾಟಕದ ನಿಖಿಲ್‌ರಾಜ್ ಮುರುಗೇಶ್ ಕುಮಾರ್ ಚೆಂಡನ್ನು ಗುರಿ ಸೇರಿಸಿ ತಂಡಗಳ ಸ್ಕೋರ್ ಸಮಬಲಗೊಳಿಸಿದರು.

ಅಂತಿಮ 10 ನಿಮಿಷಗಳಲ್ಲಿ ಉಭಯ ತಂಡಗಳ ಆಟಗಾರರಿಂದ ತುರುಸಿನ ಪೈಪೋಟಿ ನಡೆಯಿತು. ಆದರೆ, ಇಂಜುರಿ (90 + 1ನೇ) ಅವಧಿಯ ಮೊದಲ ನಿಮಿಷದಲ್ಲಿ ಎಸ್.ಶರೋನ್ ಅವರು ಕಾಲ್ಚಳಕ ತೋರಿ ತಮಿಳುನಾಡು ಪರ ಗೆಲುವಿನ ಗೋಲು ದಾಖಲಿಸಿದರು.

ಆಡಿರುವ ಎರಡೂ ಪಂದ್ಯಗಳನ್ನು ಗೆದ್ದಿರುವ ತಮಿಳುನಾಡು ತಂಡವು 6 ಅಂಕಗಳೊಂದಿಗೆ ಜಿ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ಕರ್ನಾಟಕ ಹಾಗೂ ಅಂಡಮಾನ್ ನಿಕೋಬರ್ ತಲಾ 3 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿವೆ. ಐದು ಬಾರಿಯ ಚಾಂಪಿಯನ್ ಗೋಲು ವ್ಯತ್ಯಾಸದಲ್ಲಿ ಅಂಡಮಾನ್ ತಂಡಕ್ಕಿಂತ ಮುಂದಿದೆ. ಎರಡೂ ಪಂದ್ಯ ಸೋತಿರುವ ಆಂಧ್ರಪ್ರದೇಶ ಕೊನೆಯ ಸ್ಥಾನದಲ್ಲಿದೆ.

ಸೌಹಾರ್ದ ಪಂದ್ಯ: ಭಾರತಕ್ಕೆ ಮಲೇಷ್ಯಾ ಸವಾಲು ಇಂದು

ಹೈದರಾಬಾದ್ (ಪಿಟಿಐ): ಹೊಸ ಕೋಚ್ ಮನೊಲೊ ಮಾರ್ಕ್ವೆಜ್ ಮಾರ್ಗದರ್ಶನದಲ್ಲಿ ಮೊದಲ ಗೆಲುವಿನ ನಿರೀಕ್ಷೆಯಲ್ಲಿರುವ ಭಾರತ ಪುರುಷರ ಫುಟ್‌ಬಾಲ್ ತಂಡವು ಸೋಮವಾರ ಮಲೇಷ್ಯಾ ವಿರುದ್ಧ ಸೌಹಾರ್ದ ಪಂದ್ಯವನ್ನು ಆಡಲಿದೆ.

ಪ್ರಸಕ್ತ ವರ್ಷದಲ್ಲಿ ಭಾರತ ತಂಡವು 10 ಪಂದ್ಯಗಳನ್ನು ಆಡಿದ್ದು, ಅದರಲ್ಲಿ ಆರರಲ್ಲಿ ಸೋತರೆ, ಉಳಿದ ನಾಲ್ಕು ಪಂದ್ಯಗಳನ್ನು ಡ್ರಾ ಮಾಡಿಕೊಂಡಿದೆ.

ಮನೊಲೊ ಜವಾಬ್ದಾರಿ ವಹಿಸಿಕೊಂಡ ಬಳಿಕ ಭಾರತ ತಂಡವು ಒಂದು ಪಂದ್ಯ ಸೋತಿದ್ದು, ಎರಡರಲ್ಲಿ ಡ್ರಾ ಸಾಧಿಸಿದೆ.

ಫುಟ್‌ಬಾಲ್: ಸ್ಟ್ರೈಡ್ ತಂಡಕ್ಕೆ ಜಗದೇಶ್ವರ ಆಚಾರ್ ಶೀಲ್ಡ್

ಫೈನಲ್ ಪಂದ್ಯದಲ್ಲಿ ಜಯಿಸಿದ ಸ್ಟ್ರೈಡ್ ಎಫ್‌ಸಿ ತಂಡಕ್ಕೆ ಜಗದೇಶ್ವರ ಆಚಾರ್ ಶೀಲ್ಡ್ ಅತಿಥಿಗಳು ಹಸ್ತಾಂತರಿಸಿದರು

ಬೆಂಗಳೂರು: ಸ್ಟ್ರೈಡ್ ಎಫ್‌ಸಿ ತಂಡವು ಜಗದೇಶ್ವರ ಆಚಾರ್ ಶೀಲ್ಡ್‌ಗಾಗಿ ನಡೆದ ಬಿಡಿಎಫ್‌ಎ ‘ಬಿ’ ಡಿವಿಷನ್ ಕ್ಲಬ್‌ಗಳ ಫುಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಕೆಂಗೇರಿಯ ಸಾಯ್ ಮೈದಾನದಲ್ಲಿ ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಸ್ಟ್ರೈಡ್ ತಂಡವು 3–2ರಿಂದ ಇನ್ಫಿನೆಟ್ ಬೆಳಗಾವಿ ಎಫ್.ಸಿ ತಂಡವನ್ನು ಮಣಿಸಿತು. ಸ್ಟ್ರೈಡ್ ಪರ ಅಭಿನಾಶ್ ದಾಸ್ (8ನೇ ನಿಮಿಷ), ವೇದಾಂತ್ ಬ್ಯಾನರ್ಜಿ (25ನೇ ನಿ) ಮತ್ತು ಕಾರ್ತಿಕೇಯನ್ ಜೆ (31ನೇ ನಿ) ಗೋಲು ಗಳಿಸಿದರು. ಬೆಳಗಾವಿ ಪರ ಮೊಹಮ್ಮದ್ ಶಮಿಲ್ ಪಿ. (40ನೇ ನಿ) ಮತ್ತು ಅಂಕಿತ್ ಮಾನೆ (41ನೇ) ಅವರು ಚೆಂಡನ್ನು ಗುರಿ ಸೇರಿಸಿದರು.

ಸ್ಟ್ರೈಡ್‌ನ ರಾಜೇಶ್ ಟಿ. ಸರಣಿಯ ಆಟಗಾರ; ರಿವೈವ್ ಎಫ್.ಸಿ.ಯ ಸತೀಶ್ ಎಸ್. ಉತ್ತಮ ಗೋಲ್‌ಕೀಪರ್; ಜುನೊ ಎಫ್.ಸಿ.ಯ ಬಲ್ವಿಂದರ್ ಸಿಂಗ್ ಉತ್ತಮ ಡಿಫೆಂಡರ್ ಮತ್ತು ಇನ್ಫಿನೆಟ್‌ನ ಮೊಹಮ್ಮದ್ ಶಮಿಲ್ ಅಗ್ರ ಸ್ಕೋರರ್ ಗೌರವಕ್ಕೆ ಪಾತ್ರವಾದರು.

ವಿಜೇತ ತಂಡಕ್ಕೆ ಬಿಡಿಎಫ್‌ಎ ಅಧ್ಯಕ್ಷ ಎಸ್.ಎಂ.ಬಾಲು, ಹಿರಿಯ ಸದಸ್ಯ ಆರ್.ಮೋಹನ್ ಟ್ರೋಫಿ ಹಸ್ತಾಂತರಿಸಿದರು.